# ದೇವದುರ್ಗ ತಾಲೂಕಿನ ಮಹಿಳಾ ಕೂಲಿಕಾರರು

(ಹೊಲ ಗದ್ದೆಗಳಲ್ಲಿ ದುಡಿಯುವಂತ ಮಹಿಳೆಯರನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಸಂಪ್ರಬಂಧ)


ಸಂಶೋಧಕರು

ರಜನಿಕಾಂತ

ಮಾರ್ಗದರ್ಶಕರು

ಡಾ. ವಿಠಲರಾವ್ ಟಿ. ಗಾಯಕ್ವಾಡ್

ಪ್ರಾಧ್ಯಾಪಕರು

ಭಾಷಾಂತರ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ



ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೮-೦೯

# ದೇವದುರ್ಗ ತಾಲೂಕಿನ ಮಹಿಳಾ ಕೂಲಿಕಾರರು

(ಹೊಲ ಗದ್ದೆಗಳಲ್ಲಿ ದುಡಿಯುವಂತ ಮಹಿಳೆಯರನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಸಂಪ್ರಬಂಧ)

ಸಂಶೋಧಕರು
ರಜನಿಕಾಂತ

ಮಾರ್ಗದರ್ಶಕರು
**ಡಾ.ವಿಠಲರಾವ್ ಟಿ.ಗಾಯಕ್ವಾಡ್**
ಪ್ರಾಧ್ಯಾಪಕರು
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ

**ಮಹಿಳಾ ಅಧ್ಯಯನ ವಿಭಾಗ**
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೦೮-೦೯

## ಪ್ರಮಾಣ ಪತ್ರ

"ದೇವದುರ್ಗ ತಾಲೂಕಿನ ಮಹಿಳಾ ಕೂಲಿಕಾರರು" (ಹೊಲ ಗದ್ದೆಗಳಲ್ಲಿ ದುಡಿಯುವಂತ ಮಹಿಳೆಯರನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು **ಡಾ.ವಿಠಲರಾವ್ ಟಿ. ಗಾಯಕ್ವಾಡ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಹಂಪಿ, ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಎಂ.ಫಿಲ್, ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ನಾನು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 09.10.2009
ಸ್ಥಳ : ವಿದ್ಯಾರಣ್ಯ

**ರಜನಿಕಾಂತ**
ಸಂಶೋಧನಾ ವಿದ್ಯಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

## ದೃಢೀಕರಣ ಪತ್ರ

"ದೇವದುರ್ಗ ತಾಲೂಕಿನ ಮಹಿಳಾ ಕೂಲಿಕಾರರು" (ಹೊಲ ಗದ್ದೆಗಳಲ್ಲಿ ದುಡಿಯುವಂತ ಮಹಿಳೆಯರನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ಎಂ.ಫಿಲ್, ಪದವಿಗಾಗಿ ರಜನಿಕಾಂತ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 09.10.09
ಸ್ಥಳ : ವಿದ್ಯಾರಣ್ಯ

ಡಾ. ವಿಠಲರಾವ್ ಟಿ. ಗಾಯಕ್ವಾಡ್
ಮಾರ್ಗದರ್ಶಕರು
ಭಾಷಾಂತರ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಪರಿವಿಡಿ

ಅಧ್ಯಾಯ - ಒಂದು

# ಅಧ್ಯಯನದ ಉದ್ದೇಶ, ವೈಧಾನಿಕತೆ ಮತ್ತು ವ್ಯಾಪ್ತಿ

## ಅಧ್ಯಾಯ - ಒಂದು

# ಅಧ್ಯಯನದ ಉದ್ದೇಶ, ವೈಧಾನಿಕತೆ ಮತ್ತು ವ್ಯಾಪ್ತಿ

**ಪೀಠಿಕೆ**

ದುಡಿಮೆ ಎಂಬ ಸಂಕಥನವು ಸಾಮುದಾಯಿಕ ವ್ಯಕ್ತಿ ಜೀವನದ ಅವಶ್ಯಕತೆಗಳ ಅನುಗುಣವಾಗಿ ರೂಪಿತವಾಗಿದೆ. ಸಾಮಾಜಿಕ ಜೀವನದಲ್ಲಿ ದುಡಿಮೆಯ ಪಾತ್ರವು ವ್ಯಕ್ತಿಯ ವರ್ಚಸ್ಸು, ಸಾಮಾಜಿಕ ಚಹರೆ ಅಸ್ತಿತ್ವವನ್ನು ಪ್ರತಿಬಿಂಬಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ದುಡಿಮೆಯಿಂದ ಬರುವ ಆದಾಯವೂ ಆಯಾ ವ್ಯಕ್ತಿಯ ಜೀವನೋಪಯಕ್ಕಾಗಿ ಮಾತ್ರವೇ ಅಲ್ಲದೇ, ಬದಲಿಗೆ ಆ ವ್ಯಕ್ತಿಯ ಕೌಟುಂಬಿಕ, ಸಾಮಾಜಿಕ, ಆರ್ಥಿಕ ವಿಷಯಗಳ ಮೇಲೆ ನಿಯಂತ್ರಣ ಹೀಗೆ ದುಡಿಮೆಯ ಬಹುಮುಖ್ಯ ಆಯಾಮಗಳನ್ನು ಅವಲೋಕಿಸಿದಾಗ "ದುಡಿಮೆ ಎಂಬ ನಿರ್ವಚನವು ಕೇವಲ ಬದುಕಲು ಆಶ್ರಯಿಸಿರುವ ಸಾಧನವಲ್ಲ. ಬದಲಿಗೆ ಅದು ವ್ಯಕ್ತಿಯನ್ನು ಪ್ರಭುತ್ವ ಸ್ಥಾನದಲ್ಲಿ ನಿಲ್ಲಿಸುವಲ್ಲಿಯೂ ಸಹ ಕಾರಣೀಭೂತವಾಗುತ್ತದೆ. ಆದರೆ ದುಡಿಮೆಯನ್ನು ಮನಸ್ಥಿತಿಯು ಏಕಪಕ್ಷೀಯವಾಗಿದೆ. ಲಿಂಗವಿಭಜನಾ ಕ್ರಮವನ್ನು ಆಧಾರಿಸಿದಾಗಿದೆ. ಹೀಗೆ ಸಮಾಜದಲ್ಲಿ ಸಮಾನ ಅವಕಾಶಗಳಿಂದ ವಂಚಿತವಾದ ಶೋಷಿತ ಮಹಿಳಾ ಸಮಾಜದ ತುಡಿತ ತಲ್ಲಣಗಳನ್ನು ಲಿಂಗವಿಭಜನಾ ವೈರುದ್ಯಗಳನ್ನು ಪ್ರಶ್ನಿಸಲೆಂದೇ ಮಹಿಳಾ ಅಧ್ಯಯನ ಎಂಬ ಜ್ಞಾನಶಿಸ್ತು ರೂಪಿತವಾದ ಸಮಸ್ತ ಮಹಿಳಾ ಸಮುದಾಯದ ಸಮಸ್ಯೆಗಳನ್ನು ಸ್ತ್ರೀವಾದಿ ಚಿಂತನೆಯನ್ನು ಆಧರಿಸಿ ಶೋಷಿಸಿ ಮಹಿಳಾ ನೆಲೆಯಿಂದ ಅದನ್ನು ಲಿಂಗ ನಿರಪೇಕ್ಷವಾಗಿ ಅವಲೋಕಿಸುತ್ತಾ ಪ್ರಶ್ನಿಸುತ್ತದೆ. ಪುರುಷ ರಾಜಕಾರಣದ ಕುರಿತಾಗಿ ಇರುವ ಪೂರ್ವ ಗ್ರಹಿಕೆಗಳನ್ನು ಎತ್ತಿತೋರಿಸುತ್ತದೆ. ದುಡಿಮೆಯ ಬಗೆಗೆ ರೂಪಿತವಾಗಿರುವ ಸಿದ್ಧ ಮಾದರಿಯ ಪುರುಷ ನಿಷ್ಟವಾದ ನಿರ್ವಚನಗಳನ್ನು ಮರುರಚಿಸುವ ಸಂಕಥನವೇ ಮಹಿಳಾ ಅಧ್ಯಯನದ ಪ್ರಮುಖ ಆಶಯವಾಗಿದೆ.

[illegible]

## [illegible]

[illegible]

ವರ್ತಮಾನದಲ್ಲಿ ನಾವು ದುಡಿಮೆ ಎಂದಾಕ್ಷಣ ಅದು ಕೇವಲ ದೈಹಿಕತೆಗೆ ಮಾತ್ರ ಸಂಬಂಧಿಸಿದ್ದು ಎಂಬ ಅರ್ಥವಿದೆ. ಅಂದರೆ ನಾವು ಮಾಡುವ ಕೆಲಸದಿಂದ ಆದಾಯ ಬರುವಂತಿರಬೇಕು. ಅದು ದುಡಿಮೆಯಾಗುತ್ತದೆ. ಆದರೆ ಬದುಕಲು ವ್ಯಕ್ತಿಗೆ ದುಡಿಮೆ ಅತ್ಯಂತ ಅವಶ್ಯಕವಾಗಿದೆ ಆದರೆ ಒರ ಮತ್ತು ಒಳಗಿನ ಕಾರ್ಯಗಳು ಎಂದು ಸ್ತ್ರೀಯನ್ನು ಗೃಹ ಸಂಬಂಧಿಯಾದ ಕಾರ್ಯಗಳಿಗೆ ಸೀಮಿತಗೊಳಿಸಿ ಒರಗಿನ ಕಾರ್ಯಗಳಿಗೆ ಪುರುಷನನ್ನು ನಿಯುಕ್ತಿಗೊಳಿಸಲಾಗಿದೆ. ಅಂದರೆ ಮಹಿಳೆ ಮನೆಯಲ್ಲಿ ದಿನದಲ್ಲಿ ೨೪ ಗಂಟೆಯು ಮಾಡುವ ಕಾರ್ಯ ಕೆಲಸದ ಪದವಿಯಿಂದ ಆಚೆ ಉಳಿಯುತ್ತದೆ. ಏಕೆಂದರೆ ಇದು ಆದಾಯ ತರುವಂತ ಕೆಲಸವಲ್ಲ ಅದೇನಿದ್ದರೂ ಕೇವಲ ಅವಳ ಖಾಸಗೀ ಕೆಲಸ ಎಂದೇ ಕರೆಯಲ್ಪಡುವುದೇ ಆದರೆ ಪುರುಷನ ವಿಷಯದಲ್ಲಿ ಇದಕ್ಕಿಂತ ಭಿನ್ನವಾದ ಸ್ಥಾನವಿದೆ. ಹೊರಗಡೆ ಕೆಲಸ ಪುರುಷನಿಗೆ ಒಲಿದಿರುವುದರಿಂದ ಆದರಿಂದ ಅವನು ಆದಾಯವನ್ನು ಗಳಿಸುತ್ತಾನೆ. ಈ ಬಗೆಯ ಆದಾಯ ಅವನನ್ನು ಇಡೀ ಕುಟುಂಬ ವ್ಯವಸ್ಥೆಯನ್ನೇ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಒಂದು ಸಾಧನವಾಗಿದೆ. ಅಂದರೆ ಹೊರಗಿನ ದುಡಿಮೆ ವ್ಯಕ್ತಿಗೆ ಒಂದು ಸಾಮಾಜಿಕ ಚಹರೆಯನ್ನು ಅನನ್ಯತೆಯನ್ನು ಕಟ್ಟಿಕೊಡಲು ನೆರವಾಗುತ್ತದೆ. ಆದರೆ ಅದೇ ಹೊರಗಿನ ದುಡಿಮೆಯನ್ನು ಮಹಿಳೆ ಎಷ್ಟೇ ಪ್ರಮಾಣದಲ್ಲಿ ಅಧಿಕ ಆದಾಯ ತರುವಂಥದ್ದಾದರೂ ಅವಳಿಗೆ ಅಂತಿಮವಾಗಿ ದೊರೆಯುವುದು ಆದರ್ಶಗೃಹಣಿ ಎಂಬ ಕಲ್ಪತರು, ಗೃಹ ಸಂಬಂಧಿ ಸ್ಥಾಯಿ ಆಗಿದೆ.

ಅರ್ಥಶಾಸ್ತ್ರದ ಸಂವಾದಿಯಾಗಿರುವ ದುಡಿಮೆ ಎಂಬ ನಿರ್ವಚನದಲ್ಲಿಯೇ ಸ್ತ್ರೀ ಪುರುಷರ ದುಡಿಮೆಯ ಕುರಿತಾಗಿ ಲಿಂಗ ಅಸಮಾನತೆ, ಲಿಂಗತಾರತಮ್ಯ, ಪಕ್ಷಪಾತೀತನ ಅಂತರ್ಗತವಾಗಿಬಿಟ್ಟಿದೆ. ದುಡಿಮೆಗಾರ ಎಂಬ ನುಡಿಗಟ್ಟುಗಳು ಪುರುಷವಾಚೀ, ಪುರುಷಸಂವಾದಿಯಾಗಿ ರೂಪುತಾಳಿದಂತವಾಗಿವೆ. ಸ್ತ್ರೀ ಪುರುಷರಿಗೆ ಸಿದ್ಧವಾಗಿರುವ ಕಾರ್ಯಗಳನ್ನು ಜೈವಿಕ ನೆಲೆಯಲ್ಲಿ ವಿಭಜಿಸಿ ವ್ಯವಸ್ಥಿತವಾಗಿ ಮಹಿಳೆಯ ದುಡಿಮೆಯನ್ನು ಅದೃಶ್ಯಗೊಳಿಸಲಾಗಿದೆ. ಅರ್ಥಶಾಸ್ತ್ರದಲ್ಲಿ ದುಡಿಮೆ ಎಂಬ ಪಾರೀಭಾಷೆಗೆ ಆದಾಯವೇ ಅಂತಿಮವಾಗಿರುವುದರಿಂದ ದಿನಗಟ್ಟಲೆ ಗಾಣದ ಎತ್ತಿನಂತೆ ಬೆವರು, ಕಣ್ಣೀರು, ರಕ್ತ ಸುರಿಸುವ ಮಹಿಳಾ ದುಡಿಮೆಯನ್ನು ಜೈವಿಕ ನೆಲೆಯಲ್ಲಿ ಸಂತಾನೋತ್ಪತ್ತಿ ಚಟುವಟಿಕೆಯಿಂದ ಅಲಕ್ಷಿಸಲಾಗಿದೆ. ಅವು ವ್ಯಕ್ತಿ ಜೈವಿಕ ಚಟುವಟಿಕೆಗಳು ಕ್ರಿಯೆ ರಹಿತ ಕುಟುಂಬ ಸಂಬಂಧಿ ಚಟುವಟಿಕೆಗಳು ಎಂಬ ನೆಲೆಯಲ್ಲಿ ಅವಳ ದುಡಿಮೆಯನ್ನು ಅರ್ಥಶಾಸ್ತ್ರ ದುಡಿಮೆಯ ನೆಲೆಯಿಂದಲೇ ಹೊರಗಟ್ಟಿದೆ.

ದುಡಿಮೆ ಪುರುಷರಿಗೆ ಸಮಾಜದಲ್ಲಿ ಒಂದು ವ್ಯಕ್ತಿತ್ವ ಅಸ್ತಿತ್ವ ಸ್ಥಾಪಿಸಿಕೊಳ್ಳುವುದಕ್ಕೆ ಪ್ರತ್ಯಕ್ಷವಾಗಿ ಸದಾಕಾಲ ಬೆಂಗಾವಲಾಗಿ ನಿಂತಿದೆ. ಆದರೆ ಮಹಿಳೆ ದುಡಿಮೆಯ ಸುಪರ್ದಿಯೊಳಗೆ ಬರಲು ಗೊಂದಲದಲ್ಲಿ ತೊಳಲಾಡುತ್ತಿದ್ದಾಳೆ. ಆಧುನಿಕ ಜ್ಞಾನ ಶಿಸ್ತುಗಳು ದುಡಿಮೆಯನ್ನು ಅವರ ವರಮಾನಕ್ಕೆ ಸಂಬಂಧಿಸಿದಂತೆ ಮಾರುಕಟ್ಟೆಯ ಮೂಲಕ ತೂಗಿ ನೋಡುತ್ತಿರುವುದರಿಂದ ಗೃಹಕೃತ್ಯ ಅಥವಾ ಕುಟುಂಬೇತರ ದುಡಿಮೆಯ ಅಧ್ಯಯನ ಈ ಶಿಸ್ತುಗಳ ನೆಲೆಯಲ್ಲಿ ಬರುವುದೇ ಇಲ್ಲ. ಸಂಪಾದನೆಯೊಂದಿಗೆ

ತೊಳಕುಹಾಕಿಕೊಂಡಿರುವ ಕಾರ್ಯಚಟುವಟಿಕೆಗಳು ಮಾತ್ರ ದುಡಿಮೆ ಎನಿಸಿಕೊಳ್ಳುತ್ತಿದೆ. ಈ ಬಗೆಯ ಲಿಂಗಸಂಬಂಧಿ ದುಡಿಮೆಯ ಪರಿಭಾಷೆಯನ್ನು ಖ್ಯಾತ ಸ್ತ್ರೀವಾದಿ ಚಿಂತಕಿಯಾದ 'ಸಿಮನ್ ದಿ ಬೋವಾ' ಕೂಡ ತನ್ನ 'ದಿ ಸೆಕೆಂಡ್ ಸೆಕ್ಸ್' ಗ್ರಂಥದಲ್ಲಿ ಸಮರ್ಥಿಸುತ್ತಾರೆ. ಆ ಕಾರಣದಿಂದಲೇ ಸಮಾಜದಲ್ಲಿ ಬೀಡುಬಿಟ್ಟಿರುವ ಅವೈಚಾರಿಕ ಗ್ರಹಿಕೆಗಳನ್ನು ಅವಲೋಕಿಸಿದ ಮೇಲೆ ಹೆಣ್ಣಿನ ದುಡಿಮೆಯನ್ನು ಕೇವಲ ಅವಳ ದೇಹ ಮತ್ತು ಮನಸ್ಸುಗಳನ್ನು ನಿಯಂತ್ರಣಗೊಳಪಡಿಸಿದೆಂದರೆ ತಪ್ಪಾಗಲಾರದು.

ಭಾರತದ ಜನಸಂಖ್ಯೆಯಲ್ಲಿ ಶೇಕಡ ೮೦ ರಷ್ಟು ಭಾಗ ಕೃಷಿ ದುಡಿಮೆಗಾರರಿಂದ ತುಂಬಿದೆ. ಜನಸಂಖ್ಯೆ ಅರ್ಧದಷ್ಟು ಇರುವ ಮಹಿಳಾ ಸಮುದಾಯವು ಕೃಷಿಯೊಂದಿಗೆ ಪುರುಷನಷ್ಟೇ ಸರಿಸಮಾನವಾದ ಅನುಪಾತವನ್ನು ಹೊಂದಿದ್ದಾಳೆ. ತಾತ್ವಿಕವಾಗಿ ದುಡಿಮೆ ಕೃಷಿಕಾರ್ಯಗಳು ಪ್ರಾಸಬದ್ಧವಾಗಿ ಸೇರಿಸಿಕೊಳ್ಳುವಷ್ಟು ಸರಳವಾಗಿ ಅವುಗಳ ಆಂತರ್ಯದ ರಾಜಕೀಯ ಪ್ರಶ್ನೆಗಳು ಸೇರಲಾರರು. ಸಾಮಾನ್ಯವಾಗಿ ದುಡಿಮೆಗೆ ಸರಿಸಮನಾಗಿ ಕೂಲಿ ಆದಾಯ ಎಂಬೆಲ್ಲಾ ಅಂಶಗಳನ್ನು ನಿರೀಕ್ಷಿಸುವ ಉದ್ಯೋಗ ಮತ್ತು ಅದಕ್ಕೆ ಸಮಾನದ ಲಾಭವನ್ನು ಅಪೇಕ್ಷಿಸುವ ಕಾರ್ಯವನ್ನು ಸರಳಾರ್ಥದಲ್ಲಿ ನಾವು ದುಡಿಮೆಯೆಂದು ಪರಿಭಾವಿಸಬಹುದು. ಹಾಗೆಯೇ ಪರಸ್ಪರ ವಿರುದ್ಧ ಹಿತಾಸಕ್ತಿಗಳಲ್ಲಿಯೂ ನಿಲ್ಲುವಂತಹಗಳಾಗಿದೆ.

ಕೃಷಿ ಚಟುವಟಿಕೆಯ ಮೂಲ ಅಧಿಮ ಕಾಲಘಟ್ಟದ ಮನುಕುಲದ ಇತಿಹಾಸದೊಂದಿಗೆ ಆರಂಭವಾಗುತ್ತದೆ. ತನ್ನ ಬಿಡುವಿನ ಸಮಯದಲ್ಲಿ ಪುರುಷನು ಹೊರಗಡೆ ಬೇಟೆಗಾಗಿ ಹೋದ ಸಂದರ್ಭದಲ್ಲಿ ತನ್ನ ಬಿಡುವಿನ ಸಮಯವನ್ನು ವ್ಯರ್ಥ ಮಾಡದೇ ಕೃಷಿ ಚಟುವಟಿಕೆಗಳನ್ನು ಮಹಿಳೆ ಕಂಡು ಹಿಡಿದಳು. ಅವಳ ಬಿಡುವಿಗೆ ಸಂವಾದಿಯಾಗಿ ಕೃಷಿ ಕಾರ್ಯಗಳನ್ನು ವಿವಿಧ ಬಗೆಯ ಆಹಾರ ಧಾನ್ಯಗಳನ್ನು ಬೆಳೆಯಲು ಆರಂಭಿಸಿದಳು. ತದನಂತರ ಇದು ಪುರುಷನಿಗಿಂತ ಅವಳಿಗೆ ಆತ್ಮಸ್ಥೈರ್ಯರ ಆದಾಯ ಮೂಲವಾಗಿ ಅವಳ ಸೃಜನಶೀಲತೆ ಅನನ್ಯತೆಗಳನ್ನು ಬಿಂಬಿಸುವಲ್ಲಿ ಕೃಷಿ ಸಹಾಯಕವಾಗುತ್ತದೆ.

ಮಹಿಳೆಯ ಇಂತಹ ಆವಿಷ್ಕಾರಿ ಜೀವನಕ್ಕೆ ಎಲ್ಲರೂ ತಲೆದೂಗಿದರೂ ನಂತರ ಪುರುಷ ಅವಳ ಏಳ್ಗೆಯನ್ನು ಸಹಿಸಲಾದ ಅವಳೇ ಅವಿಷ್ಕರಿಸಿದ ಕೃಷಿಯನ್ನು ಅವಳಿಂದ ಬಲವಂತವಾಗಿ ಕಸಿದುಕೊಂಡ ಕಾರಣವೆಂದರೆ ಎಲ್ಲಿ ತನ್ನ ಮೇಲೆ ಪ್ರವಾಹ ಮಾಡುತ್ತಾಳೋ, ಪ್ರಶ್ನಿಸುತ್ತಾ ತನ್ನ ಪ್ರಭುತ್ವವನ್ನು ನಿರಾಕರಿಸುತ್ತಾಳೆ ಎಂಬ ಪಾರಂಪರಿಕ ಭಯ ಅವನಲ್ಲಿ ಅಡಗಿತ್ತು. ಹೀಗೆ ಅಧೀಮ ಕಾಲಘಟ್ಟದಲ್ಲಿಯೇ ವ್ಯವಸ್ಥಿತವಾಗಿ ಮಹಿಳೆಯಿಂದ ಕಸಿದುಕೊಳ್ಳಲಾದ ಕೃಷಿ ಅದಿಪತ್ಯ ಇಂದಿಗೂ ಅವಳಿಗೆ ಎಟುಕುದ ನಕ್ಷತ್ರವಾಗಿಯೇ ಉಳಿದಿದೆ. ಇದಕ್ಕೆ ಇತ್ತೀಚಿನ ಹಲವು ವರದಿಗಳು ಕೂಡ ಪುಷ್ಠಿಯನ್ನು ಒದಗಿಸಲು ಹಲವಾರು ದಾಖಲೆಗಳು ಭಾರತದಾದ್ಯಂತ ಪುರುಷ ಮತ್ತು ಸ್ತ್ರೀಯರು ಕೃಷಿ ಭೂ ಹಿಡುವಳಿದಾರರ ಪಟ್ಟಿಯಲ್ಲಿ ಪುರುಷನಂತೆ ಸಾರ್ವಭೌಮತ್ವ ಅತ್ಯಧಿಕವಿದೆ. ಸ್ತ್ರೀ ಕೇಂದ್ರಿಕೃತವಾಗಿದ್ದ ಕೃಷಿಯನ್ನು ತನ್ನ ಕೈವಶ ಮಾಡಿಕೊಂಡ ಪುರುಷ ಆಲೋಚನ ಕ್ರಮಗಳು ಪುರುಷಾಧೀನವಾಗಿಯೇ ಹೋಗಿದ್ದು ಮನುಕುಲದ ಘೋರ ಇತಿಹಾಸವೇ ಸರಿ.

[illegible]

[illegible]

ಹೀಗೆ ಅನಾದಿಕಾಲದಿಂದಲೇ ಆರಂಭವಾದ ಲಿಂಗ ತಾರತಮ್ಯ ಮೇಲು ಕೀಳು ಶ್ರೇಷ್ಠ ಕನಿಷ್ಠ ಎಂಬ ಮನೋಭಾವನೆಯು ಇಂದಿಗೂ ಮುಂದುವರಿಯುತ್ತಲೇ ಇವೆ. ಆಧುನಿಕ ಕಾಲದಲ್ಲಿ ಮಾರುಕಟ್ಟೆಯಲ್ಲಿ ತಳಕು ಹಾಕಿಕೊಂಡಿರುವ ಕೃಷಿ ವಾಣಿಜ್ಯ ಕ್ಷೇತ್ರದಲ್ಲಿಯೂ ಕೂಡ ತುಂಬ ಢಾಳಾಗಿ ಆವರಿಸಿಕೊಂಡಿದೆ.

## ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಅಸಂಘಟಿತ ವಲಯವಾದ ಮಹಿಳಾ ಸಮುದಾಯದ ದುಡಿಮೆಯ ಹಿಂದಿರುವ ಹತ್ತು ಹಲವು ಬಿಕ್ಕಟ್ಟು ಸವಾಲುಗಳನ್ನು ಅರಿಯುವ ಜೊತೆಗೆ ದುಡಿಮೆಯ ಸ್ಥಳದಲ್ಲಿ ಅನುಭವಿಸುವ ಶೋಷಣೆ, ಯಾತನೆ, ಲೈಂಗಿಕ ದುರ್ಬಳಕೆ, ಅಸಮಾನ ವೇತನ, ಅಸಮಾನ ಸಮಯ, ಭದ್ರತೆಯಿಲ್ಲದ ಬದುಕಿನ ತೊಳಲಾಟಗಳನ್ನು ಅರಿಯುವ ಆಶಯ ಪ್ರಸ್ತುತ ಸಂಪ್ರಬಂಧವಾಗಿದೆ. ಆಧುನಿಕ ಕಾಲದಲ್ಲಿ ಮಹಿಳೆ ದುಡಿಮೆಗೆ ಸಂಬಂಧಿಸಿದಂತೆ ದಿನನಿತ್ಯ ಚರ್ಚೆಗಳು ನಡೆಯುತ್ತಲೇ ಇವೆ. ಅವುಗಳಲ್ಲಿ ಸಂಘಟಿತ ಮತ್ತು ಅಸಂಘಟಿತ ವಲಯಗಳ ಕುರಿತ ವಿಷಯವೇ ಹೆಚ್ಚು ಇರುತ್ತದೆ ಸಂಘಟಿತ ವಲಯದಲ್ಲಿ ಸಹಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ದೆಶೆಯಿಂದ ಅಲ್ಪಸ್ವಲ್ಪ ಬದಲಾವಣೆ ಆಗಿದೆ. ಆದರೆ ಬೃಹದಾಕರವಾಗಿರುವ ಅಗಣಿತ ಅಸಂಘಟಿತ ವಲಯದೊಳಗಿನ ಮಹಿಳೆಯ ಕುರಿತು ನಡೆಯುವ ಚರ್ಚೆಗಳು ಕೇವಲ ಕಾಗದ ಮತ್ತು ವೇದಿಕೆಗಳಲ್ಲಿಯೇ ಉಳಿಯುತ್ತಲೇ ಅದರ ಸ್ವರೂಪವನ್ನೇ ಕಾಪಾಡಿಕೊಂಡು ಬರುತ್ತದೆ. ಸಂಘಟಿತ ವಲಯದೊಳಗಿನ ಮಹಿಳೆಗೆ ಭದ್ರತೆಯ ವಿಷಯದಲ್ಲಿ ಕಾನೂನುಗಳ ಬೆಂಬಲವಿರುತ್ತದೆ. ತನ್ನ ವಿರುದ್ಧದ ಯಾವುದೇ ಅವೈಚಾರಿಕ ಅಹಿತಕರ ವಿಷಯವನ್ನು ಅವಳು ಪ್ರತಿಭಟಿಸಲ್ಪಟ್ಟಳು ಇದಕ್ಕೆ ಕಾನೂನಿನ ಬೆಂಬಲವೂ ತಕ್ಷಣವೇ ದೊರೆಯುತ್ತದೆ. ಆದರೆ ಬಹುಸಂಖ್ಯಾತವಾಗಿರಲು ಅಸಂಘಟಿತ ವಲಯದೊಳಗಿನ ಅಭದ್ರತೆ ಜೀವನ ನಡೆಸುತ್ತದೆ. ಮಹಿಳೆಗೆ ಕಾನೂನು ಎಂಬ ಪಾರಿಭಾಷೆಯು ಪ್ರಾಥಮಿಕ ಅಕ್ಷರಗಳ ಅರಿವೇ ಇಲ್ಲದ್ದಾಗಿದೆ. ತನ್ನ ಮೇಲೆ ಉಂಟಾದ ಶೋಷಣೆಯನ್ನಾಗಿ ಪ್ರತಿಭಟಿಸಲು ಸಾಧ್ಯವೇ ಇರುವುದಿಲ್ಲ.

ದುಡಿಮೆಯ ನಿರ್ವಚನ ಸೂಚಿಸುವಂತೆ ಆಜ್ಞಾ ಮಾನ್ಯಶಾಹಿಯ ಪುರುಷ ಪ್ರಭುತ್ವಗಳ ಸಂಕಥನವಾಗಿದೆ. ಇಲ್ಲಿ ಪುರಷರೇ ಪ್ರಮುಖದಾರರು ಆಗಿರುವುದರಿಂದ ಇದರಲ್ಲಿ ಸಮಬಾಗಿದಾರರು ಆಗಲು ಮಹಳೆಯರಿಗೆ ಅವಕಾಶವೇ ಇರುವುದಿಲ್ಲ. ಇಂಥ ಸಂಕೀರ್ಣ ಪ್ರಸ್ತುತದಲ್ಲಿ ಸಮಾಜದ ಅಂಚಿನಲ್ಲಿರುವ ಅಪೇಕ್ಷಿತ, ಶೋಷಿತ, ಅಲಕ್ಷ್ಯ, ತಿರಸ್ಕಾರ ತಾತ್ಸರಗಳಿಗೆ ಬಲಿಯಾಗಿರುವ ಅಸಂಘಟಿತ ಮಹಿಳಾ ಸಮುದಾಯದ ತೊಳಲಾಟವನ್ನು ಬಹುಮುಖ್ಯ ಆಯಾಮವೆಂದು ಅನಾವರಣಗೊಳಿಸುವ ಪ್ರಯತ್ನ ಪ್ರಸುತ್ತ ಅಧ್ಯಯನಕ್ಕಿದೆ. ದುಡಿಮೆಯ ಸಹಬಾಗಿತ್ವದಲ್ಲಿ ಪುರುಷನೊಂದಿಗೆ ಸಮಸಮವಾಗಿ ಮಹಿಳೆಯು ಪ್ರತಿನಿಧೀಕಾರತ್ವ ಹೊಂದಿದ್ದರೂ ಕೂಡ ಅವಳು ಅನುಭವಿಸುವ ಸಾಮಾಜಿಕ ಮನ್ನಣೆ ತುಂಬ ತಾತ್ಸರವಾಗಿರುತ್ತದೆ. ಅದೇ ಪುರುಷನಾದರೆ ಶ್ರೇಷ್ಠತೆಯ ನೆಲೆಯಲ್ಲಿ ಗುರುತಿಸಲು ಈ ಬಗೆಯ ವೈರದ್ಯಗಳನ್ನು ಕಂಡು ಹಿಡಿಯಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ. ಅಲ್ಲದೆ ಕೃಷಿ ಆಧಾರಿತ

ಕೂಲಿ ನೀಡುವಿಕೆಯಲ್ಲಿ ಅವಳು ಅನುಭವಿಸುವ ಶೋಷಣೆ, ವಂಚನೆ, ತಾರತಮ್ಯಗಳನ್ನು ಸೂಕ್ಷ್ಮವಾಗಿ ಅರಿಯುವ ಪ್ರಯತ್ನ ಪ್ರಸ್ತುತ ಅಧ್ಯಯನಕ್ಕಿದೆ. ಕೃಷಿಯಲ್ಲಿ ಅವಳು ಪಾತ್ರ ಮತ್ತು ಪ್ರತಿನಿದೀಕರಣ ಯಾವ ಸ್ವರೂಪದ್ದು ಎಂದು ತಿಳಿಯುವಂತಹ ಮೂಲಕ ಕೃಷಿಯಿಂದ ಅವಳು ಎಷ್ಟರಮಟ್ಟಿಗೆ ಸ್ವಾವಲಂಬನೆ ಸಬಲೀಕರಣವಾಗುತ್ತಾಳೆ ಎಂದು ಅವಲೋಕಿಸುವುದು ಕೂಡ ಅಧ್ಯಯನದ ಉದ್ದೇಶವಾಗಿದೆ. ಮುಖ್ಯವಾಗಿ ಕೃಷಿ ಆಧಾರಿತ ಮಹಿಳೆ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳನ್ನು ಅರಿಯುವ ಜೊತೆಗೆ ಅವಳು ಎದರುಸುತ್ತಿರುವ ಮೂಲಭೂತ ಸೌಕರ್ಯಗಳನ್ನು ಎತ್ತಿ ತೋರಿಸುವುದು ಹಾಗೂ ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಅವಳ ದುಡಿಮೆಯಲ್ಲಿ ಇರುವ ಸ್ಥಿತಿ ಕೂಲಿಯಲ್ಲಿನ ಪಲ್ಲಟಗಳನ್ನು ಪರಿಣಾಮಗಳನ್ನು ಬಿಂಬಿಸುವ ಪ್ರಯತ್ನ ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಹಾಗೆಯೇ ತಳಸಮುದಾಯಗಳ ಮಹಿಳೆಯರ ಹತ್ತು ಹಲವು ಸಮಸ್ಯೆಗಳನ್ನು ವಿಶೇಷವಾಗಿ ಗುರುತಿಸಲಾಗುತ್ತದೆ. ಯಾವ ಸ್ವರೂಪವಾಗಿದೆಯೆಂದು ಅರಿಯುವುದು ಅಸಂಘಟಿತ ವಲಯದೊಳಗಿನ ಕಾನೂನುಗಳು ಎಷ್ಟರಮಟ್ಟಿಗೆ ಅವಳಿಗೆ ಬೆಂಗಾವಲರಾಗಿ ನಿಂತಿವೆ ಎಂದು ಅವಲೋಕಿಸುವುದು ಪ್ರಸ್ತುತ ಅಧ್ಯಯನಕ್ಕಿದೆ.

ಈ ಬಗೆಯ ಉದ್ದೇಶಗಳನ್ನು ಮೂಲ ಆಧಾರವಾಗಿ ಇಟ್ಟುಕೊಂಡು ಕೃಷಿ ನಿರತ ಮಹಿಳೆ ದುಡಿಮೆ ಪ್ರತಿನಿದೀಕರಣ ಸ್ವರೂಪವನ್ನು ಹೊರಗೆ ಹಚ್ಚಲು ಪ್ರಯತ್ನಿಸಲಾಗಿದೆ. ಇದರ ನಂತರವೇ ಅವಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಸ್ಥಿತಿಗತಿಯನ್ನು ಅರಿಯುವುದರ ಜೊತೆಗೆ ಜಾಗತೀಕರಣದ ಪ್ರಭಾವದಿಂದಾಗಿ ಅವಳ ದುಡಿಮೆಯ ಮೇಲಾದ ಉಂಟಾದ ದುಷ್ಪರಿಣಾಮಗಳನ್ನು ಸೈದಾಂತಿಕ ನೆಲೆಗಟ್ಟಿನಲ್ಲಿ ಚರ್ಚಿಸಲಾಗಿದೆ.

## ವೈಧಾನಿಕತೆ

ಪ್ರಸ್ತುತ ಅಧ್ಯಯನದ ವಿಷಯವಾದ 'ದೇವದುರ್ಗ ತಾಲೂಕಿನ ಮಹಿಳಾ ಕೂಲಿಕಾರರು ಹೊಲ ಗದ್ದೆಗಳಲ್ಲಿ ದುಡಿಯುವಂತ ಮಹಿಳೆಯರು' ಎಂಬ ವಿಷಯದ ಕುರಿತ ಅಧ್ಯಯನ ಕೈಗೊಳ್ಳಲಾಗಿದೆ. ಈ ವಿಷಯ ಕುರಿತಂತೆ ಸುಮಾರು ಅಧ್ಯಯನಗಳು ನಡೆದಿವೆ, ಎಲ್ಲಾ ಅಧ್ಯಯನಗಳು ಪರಿಪೂರ್ಣವೆಂದು ಭಾವಿಸಬೇಕಾಗಿಲ್ಲ. ಈ ಕಾರಣದಿಂದಲೇ ಕೃಷಿಕೂಲಿಕಾರರ ಮಹಿಳೆಯರ ನೈಜ ವಾಸ್ತವದ ಪರಿಸ್ಥಿತಿಯನ್ನು ಯಥಾವತ್ತಾಗಿ ಪರಿಸ್ಥಿತಿಯನ್ನು ಮಹಿಳಾ ಅಧ್ಯಯನದ ತಾತ್ವಿಕ ಆಯಾಮವಾಗಿರುವ ಸ್ತ್ರೀವಾದಿ ಸಂಶೋಧನೆ ವಿನಾಸವನ್ನು ಅತಿ ಹೆಚ್ಚು ಬಳಸಿಕೊಳ್ಳಲಾಗಿದೆ. ನಿಗದಿತವಾದ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಂಡು ಈ ಮೊದಲೇ ಸ್ಪಷ್ಟವಾದ ನಿರ್ದಿಷ್ಟವಾದ ಮೊದಲೇ ಆಯೋಜಿಸಿದ ಪ್ರಶ್ನೆಗಳ ಮೂಲಕ ಅವರ ಸ್ಥಿತಿಯನ್ನು ಬಹುಮುಖ್ಯ ಆಯಾಮಗಳಲ್ಲಿ ಅರಿಯಲು ಪ್ರಯತ್ನಿಸಲಾಗಿದೆ. ಈ ವಿಧಾನದಲ್ಲಿ ಪ್ರಶ್ನಾವಳಿಯನ್ನು ವಕ್ತೃಗಳ ಸಮ್ಮುಖದಲ್ಲಿಯೇ ತುಂಬಲಾಗಿದೆ.

[illegible]

[illegible]

[illegible]

[illegible]

## ಅಧ್ಯಯನದ ವ್ಯಾಪ್ತಿ

ದೇವದುರ್ಗ ತಾಲೂಕಿನ ಮಹಿಳಾ ಕೂಲಿಕಾರರು ಹೊಲ ಗದ್ದೆಗಳಲ್ಲಿ ದುಡಿಯುವಂತ ಮಹಿಳೆಯರು ಎಂಬ ಸಂಶೋಧನೆಯ ಅಧ್ಯಯನದ ವಿಷಯ ವ್ಯಾಪ್ತಿಯಾಗಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕನ್ನೂ ಆರಿಸಿಕೊಳ್ಳಲಾಗಿದೆ. ಹೈದ್ರಬಾದ್ ಕರ್ನಾಟಕ ಎಂಬ ಹಣೆಪಟ್ಟಿಯೊಂದಿಗೆ ಗುರುತಿಸ್ಪಡುತ್ತಿರುವ ರಾಯಚೂರು ಜಿಲ್ಲೆಯು ಅತ್ಯಂತ ಹಿಂದುಳಿದ ಜಿಲ್ಲೆಯೆಂದು ಪರಿಗಣಿತವಾಗಿದೆ. ಅಧ್ಯಯನಕ್ಕಾಗಿ ದೇವದುರ್ಗ ತಾಲೂಕನ್ನೇ ಆರಿಸಿಕೊಳ್ಳಲು ಕಾರಣವೆಂದರೆ ಬಡತನ ನಿರುದ್ಯೋಗ ಗುಳೆ ಹೋಗುವರ ಪ್ರಮಾಣ ಅತಿಹೆಚ್ಚು ಇದೆ. ಅಲ್ಲದೇ ಏಷ್ಯಾ ಖಂಡದಲ್ಲಿಯೇ ಅತ್ಯಂತ ಹೆಚ್ಚು ಅನಕ್ಷರಸ್ಥರನ್ನು ಹೊಂದಿರುವ ತಾಲೂಕು ಎಂದು ಗುರುತಿಸಲ್ಪಡುತ್ತಿದೆ. ಇಂದಿಗೂ ಇಲ್ಲಿ ಭೂಮಾಲೀಕತ್ವ ಉಳಿಗಮಾನ್ಯ ಶಾಹಿ, ಜಮೀನ್ದಾರಿ ವ್ಯವಸ್ಥೆ ಜೀವಂತವಾಗಿ ಕಾರ್ಯನಿರ್ವಹಿಸುತ್ತಿವೆ. ಆ ಕಾರಣದಿಂದಲೇ ದೇವದುರ್ಗ ತಾಲೂಕನ್ನು ಆರಿಸಿಕೊಳ್ಳಲಾಗಿದೆ. ಅಧ್ಯಯನದ ವಿಷಯ ವಸ್ತುವಾಗಿರುವ ಕೃಷಿ ಕೂಲಿಕಾರರ ಮಹಿಳೆಯೇ ನನ್ನ ಅಧ್ಯಯನದ ಕೇಂದ್ರಬಿಂದು. ಅಧ್ಯಯನಕ್ಕಾಗಿ ಒಟ್ಟು ೫೦ ಜನರನ್ನು ಸಂದರ್ಶಿಸಲಾಗಿದೆ. ಅಲ್ಲದೇ ಮಹಿಳಾ ದುಡಿಮೆಯ ಕುರಿತು ಸಾರ್ವಜನಿಕರಲ್ಲಿರುವ ಮನೋಭಾವನೆಗಳನ್ನು ಅರಿಯಲು ಕೂಡ ಪ್ರಯತ್ನಿಸಲಾಗಿದೆ.

## ಅಧ್ಯಾಯ - ಎರಡು

# ದೇವದುರ್ಗ ತಾಲೂಕಿನ ಭೌಗೋಳಿಕ ಮತ್ತು ಸಾಂಸ್ಕೃತಿಕ ಮಹತ್ವ

## ಅಧ್ಯಾಯ - ಎರಡು

# ದೇವದುರ್ಗ ತಾಲೂಕಿನ ಭೌಗೋಳಿಕ ಮತ್ತು ಸಾಂಸ್ಕೃತಿಕ ಮಹತ್ವ

ಕರ್ನಾಟಕವು ಪ್ರಾಚೀನ ಕಾಲದ ಚರಿತ್ರೆ ಹೊಂದಿದ್ದ ರಾಜ್ಯವಾಗಿದ್ದು ಆದನ್ನು ಆಳಿದ ರಾಜಮನೆತನಗಳು ಹಲವಾರು ಪ್ರದೇಶಗಳು ಹಿಂದಿನ ಕಾಲದಿಂದ ಗುರುತಿಸಿಕೊಂಡಿದ್ದು ವೈಶಿಷ್ಟಪೂರ್ಣವಾಗಿ ಕಂಡುಬರುತ್ತದೆ. ಮೈಸೂರು, ವಿಜಯನಗರ, ಗುಲ್ಬರ್ಗ, ಬಿಜಾಪುರಗಳಂಥ ಪ್ರಬಲ ರಾಜಮನೆತನಗಳ ಜೊತೆಗೆ ರಾಯಚೂರು ಸಹ ತನ್ನ ಅಸ್ತಿತ್ವವನ್ನು ಇತಿಹಾಸದ್ದುದಕ್ಕೂ ಉಳಿಸಿಕೊಡು ಬಂದಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಜಿಲ್ಲೆಯ ಪಾತ್ರ ಅವಿಸ್ಮರಣೀಯವಾಗಿದೆ. ಸಾಂಸ್ಕೃತಿಕ ಪರಂಪರೆಯುಳ್ಳ ಈ ಜಿಲ್ಲೆಯು ಹಲವಾರು ಸರಕಾರಗಳಿಂದ ನಿರಂತರ ನಿರ್ಲಕ್ಷಕ್ಕೆ ಒಳಗಾದ ಜಿಲ್ಲೆಯಾಗಿದೆ. ರಾಯಚೂರು ಜಿಲ್ಲೆಯ ತಾಲೂಕುಗಳಲ್ಲಿ ದೇವದುರ್ಗವೂ ಒಂದಾಗಿದ್ದು ಅತೀ ಹಿಂದುಳಿದ ಪ್ರದೇಶವೆಂದು ಗುರುತಿಸಲ್ಪಟ್ಟಿದೆ. ಈ ತಾಲೂಕು ಹಲವಾರು ರಂಗಗಳಲ್ಲಿ ವಿಶಿಷ್ಟತೆಯನ್ನು ಮರೆದಿದ್ದರೂ ಸಹ ಮೂಲಭೂತ ಸಮಸ್ಯೆಗಳನ್ನು, ಉದ್ಯೋಗ ಸಮಸ್ಯೆಯನ್ನು, ಬಂಡವಾಳವಾದ ಸಮಸ್ಯೆಯನ್ನು ಎದುರಿಸುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ದೇವದುರ್ಗ ತಾಲೂಕಿನ ಉದ್ವಗಲಕ್ಕೂ ಪ್ರಧಾನ ಕಸುಬಾಗಿ ಕೃಷಿಯನ್ನೇ ಅವಲಂಬಿಸಿದ್ದು ಪುರುಷ ಮತ್ತು ಮಹಿಳೆ ಎಂಬ ಲಿಂಗ ತಾರತಮ್ಯವಿದೆ. ಆದರೆ ಪುರುಷರಷ್ಟೇ ಸಮಾನವಾಗಿ ಮಹಿಳಾ ಕೂಲಿಕಾರರ ಪಾತ್ರ ಅವಿಸ್ಮರಣೀಯವಾಗಿದೆ.

### ಭೌಗೋಳಿಕ ಅಂಶಗಳು

ಒಂದು ಪ್ರದೇಶದ ಸರ್ವತೋಮುಖ ಬೆಳವಣಿಗೆಗೆ ಭೌಗೋಳಿಕ ಪರಿಸರ ಮತ್ತು ನೈಸರ್ಗಿಕ ಸಂಪತ್ತು ಬಹು ಮುಖ್ಯ ಪಾತ್ರ ವಹಿಸುತ್ತದೆ. ರಾಯಚೂರು ಜಿಲ್ಲೆಯಲ್ಲಿ ಹಿಂದುಳಿದ ತಾಲೂಕ್ ಎಂದೇ ಹೇಳಲಾಗಿರುವ ದೇವದುರ್ಗ ತಾಲೂಕು, ಹಲವಾರು ಸಮಸ್ಯೆಳ ಆಗರವಾಗಿದೆ. ಇಂತಹ ಸಮಸ್ಯೆಗಳಲ್ಲಿ ನೈಸರ್ಗಿಕ ಸಂಪತ್ತು ಕೃಷಿ ಭೂಮಿ, ನೀರಾವರಿ, ಶೈಕ್ಷಣಿದಂಥ, ಮೂಲಭೂತ

[illegible]

[illegible]

[illegible]

[illegible]

ಸಮಸ್ಯೆಗಳು ಪ್ರಧಾನವಾಗಿ ಕಂಡುಬರುತ್ತವೆ. ದೇವದುರ್ಗ ತಾಲೂಕಿನ ಭೌಗೋಳಿಕತೆಯನ್ನು ಗುರುತಿಸುವುದರ ಜೊತೆಗೆ ಪರಿಸರದಲ್ಲಿನ ಸಮಸ್ಯೆಗಳು ಮಹಿಳಾ ಕೂಲಿಕಾರರ ವಾಸ್ತವದ ಸ್ಥಿತಿ-ಗತಿಗಳನ್ನು ಕಟ್ಟಿಕೊಡುವುದು ಅಧ್ಯಯನದ ಉದ್ದೇಶವಾಗಿದೆ.

ರಾಯಚೂರು ಜಿಲ್ಲೆಯ ನಾಲ್ಕು ತಾಲೂಕುಗಳಾದ ಲಿಂಗಸೂರು, ಸಿಂಧನೂರು, ಮಾನ್ವಿ ದೇವದುರ್ಗ ಸಹ ಒಂದಾಗಿದೆ. ರಾಯಚೂರು ಜಿಲ್ಲೆಯ ಪಶ್ಚಿಮ ಭಾಗದಲ್ಲಿ ದೇವದುರ್ಗ ತಾಲೂಕ್ ಕಂಡುಬರುತ್ತದೆ. ತಾಲೂಕಿನ ಗಡಿಭಾಗಗಳಾಗಿ ಪೂರ್ವಕ್ಕೆ ರಾಯಚೂರು ದಕ್ಷಿಣಕ್ಕೆ ಮಾನ್ವಿ, ಪಶ್ಚಿಮಕ್ಕೆ ಲಿಂಗಸೂರು ತಾಲೂಕುಗಳಿವೆ ಅದರಾಚೆಗೆ ಗುಲಬರ್ಗಾ ಜಿಲ್ಲೆಯೇ ಸುರಪುರ ಮತ್ತು ಶಹಾಪುರ ತಾಲೂಕುಗಳಿಂದ ಬೇರ್ಪಡಿಸುವ ಸೀಮಾರೇಖೆಯನ್ನು ಹೊಂದಿದೆ

ದೇವದುರ್ಗ ತಾಲ್ಲೂಕು ಸಮುದ್ರ ಮಟ್ಟದಿಂದ ೩೮೯.೪ ಮೀಟರ್ ಎತ್ತರದಲ್ಲಿದೆ, ಇದರ ಅಕ್ಷಾಂಶ ೧೬೦.೨೫ ಹಾಗೂ ೨೬೦.೬ ರೇಖಾಂಶಗಳ ನಡುವೆ ಈ ತಾಲೂಕು ವಿಸ್ತರಿಸಿದೆ. ದೇವದುರ್ಗ ತಾಲೂಕಿನ ಆಡಳಿತದ ಅನುಕೂಲಕ್ಕಾಗಿ ಗಬ್ಬೂರು, ಜಾಲಹಳ್ಳಿ, ದೇವದುರ್ಗ, ಅರಕೇರಾ ಎಂಬ ನಾಲ್ಕು ಹೋಬಳಿಗಳನ್ನಾಗಿ ವಿಂಗಡಿಸಲಾಗಿದೆ. ದೇವದುರ್ಗ ತಾಲೂಕಿನಲ್ಲಿ ಒಟ್ಟು ೧೮೮ ಹಳ್ಳಿಗಳಿವೆ ಇವುಗಳಲ್ಲಿ ೧೭೩ ಹಳ್ಳಿಗಳಲ್ಲಿ ಜನವಸತಿ ಕಂಡುಬರುತ್ತದೆ. ೧೫ ಹಳ್ಳಿಗಳಲ್ಲಿ ಜನವಸತಿ ಅಷ್ಟಾಗಿ ಇರುವುದಿಲ್ಲ, ದೇವದುರ್ಗವು ತಾಲೂಕಿನ ಪ್ರಮುಖ ಆಡಳಿತ ಕೇಂದ್ರವಾಗಿದ್ದು ದೊಡ್ಡ ಪಟ್ಟಣವೂ ಆಗಿದೆ.

**ಅಂಕಿ-ಅಂಶಗಳು**

ದೇವದುರ್ಗ ತಾಲೂಕಿನ ಒಟ್ಟು ವಿಸ್ತೀರ್ಣ ೧೫೯೯.೭೯ ಹೆಕ್ಟೇರ್ ಅಥವಾ ೧೫೨೩ ಚದರ ಕಿಮೀಗಳು ೨೦೦೧ರ ಜನಗಣತಿ ಪ್ರಕಾರ ೨೩೦.೫೦೦ ಜನಸಂಖ್ಯೆಯಿದ್ದು ಇದರಲ್ಲಿ ಪುರುಷರು ೯೮.೬೭೫ ಮತ್ತು ಮಹಿಳೆಯರು ೯೫.೫೨೦ರಷ್ಟು ಜನಸಂಖ್ಯೆ ಇದ್ದಾರೆ. ದೇವದುರ್ಗ ತಾಲೂಕಿನ ಪ್ರಧಾನ ಕಸಬಾದ ಕೃಷಿಯಲ್ಲಿ ಮಹಿಳೆಯರು ಸಹ ಶ್ರಮವಹಿಸುತ್ತಿರುವುದು ಗಮನಾರ್ಹ ವಿಚಾರವಾಗಿದೆ ತಾಲೂಕಿನ ೧೮೮ ಗ್ರಾಮಗಳಲ್ಲಿ ಕೃಷಿಯನ್ನೇ ಹೆಚ್ಚಾಗಿ ಅವಲಂಬಿಸಿರುವುದರಿಂದ ದನಕರುಗಳು, ಕೋಳಿ, ಕುರಿ, ಎಮ್ಮೆಗಳನ್ನು ಸಾಕಿಕೊಂಡಿರುವುದು ಹೆಚ್ಚಾಗಿ ಕಂಡುಬರುತ್ತದೆ.

**ಹವಾಗುಣ ಮತ್ತು ಮಳೆ**

ದೇವದುರ್ಗ ತಾಲೂಕು ಒಣಹವೆಯಿಂದ ಕೂಡಿದ್ದು ನವೆಂಬರ್‌ನಿಂದ ಮೇ ತಿಂಗಳವರಗೆ ಶುಷ್ಕ ಹವೆ ಕಂಡು ಬರುತ್ತದೆ. ಉಷ್ಣತೆಯೂ ಹೆಚ್ಚೂ, ಬೇಸಿಗೆಯಲ್ಲಿ ಗರಿಷ್ಠ ಉಷ್ಣಾಂಶ ಸುಮಾರು ೪೦-ಸೆಂಟಿಗ್ರೇಡ್, ದೇವದುರ್ಗ ತಾಲೂಕಿನ ವಾಡಿಕೆ ಮಳೆ ಪ್ರಮಾಣ ೬೩೩.೦೩ ಮೀ ಮೀಟರ್, ವಾಸ್ತವಿಕ ಸರಸಾರಿ ಮಳೆ ೭೦೭.೦೬ ಮೀ ಮೀಟರ್‌ಗಳು ಇಲ್ಲಿ ವಾರ್ಷಿಕ ಮಳೆ ೭೯೯.೦೨ ಮೀ.ಮೀಟರ್ ಆಗಿದೆ.

| | |
|---|---|
| ದೇವದುರ್ಗ ತಾಲೂಕಿನಲ್ಲಿ ಜಿಲ್ಲಾ ಪಂಚಾಯತಿಯ ಕ್ಷೇತ್ರಗಳು | ೦೬ |
| ದೇವದುರ್ಗ ತಾಲೂಕು ಪಂಚಾಯತಿಯ ಕ್ಷೇತ್ರಗಳು | ೨೧ |
| ಗ್ರಾಮ ಪಂಚಾಯತಿಗಳು | ೨೮ |
| ಪುರಸಭೆ | ೦೧ |
| ಪ್ರೌಢಶಾಲೆಗಳು | ೩೫ |
| ಪದವಿಪೂರ್ವ ಕಾಲೇಜ್‌ಗಳು | ೧೩ |
| ಪ್ರಾಥಮಿಕ ಆರೋಗ್ಯ ಕೇಂದ್ರಗಳು | ೦೬ |

ದೇವದುರ್ಗ ತಾಲೂಕಿನ ಕೃಷಿ ಕೂಲಿಕಾರರು

ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ

| | |
|---|---|
| ಪುರುಷರು | ಶೇ ೬೫% ರಷ್ಟು ಇದ್ದಾರೆ |
| ಮಹಿಳೆ ಕೃಷಿಕೂಲಿಕಾರರು | ಶೇ ೮೦% ರಷ್ಟು ಇದ್ದಾರೆ |

ದೇವದುರ್ಗ ತಾಲೂಕಿನಲ್ಲಿರುವ ಕೃಷಿಕೂಲಿಕಾರರು ಒಟ್ಟಾರೆ ೭೫% ರಷ್ಟು ಮಹಿಳೆಯರು ಮತ್ತು ಪುರುಷರು ಗ್ರಾಮ ಪಂಚಾಯತಿಯಲ್ಲಿ ಬರುವ ಕೂಲಿಕಾರರು ೬೫% ಪುರುಷರು ಮತ್ತು ೮೦% ರಷ್ಟು ಮಹಿಳಾ ಕೃಷಿಕೂಲಿಕಾರರು ಇದ್ದಾರೆ.[೧]

## ನದಿಗಳು, ಕರೆಗಳು, ಬಾವಿಗಳು, ಬೆಟ್ಟಗಳು, ಅರಣ್ಯ ಪ್ರದೇಶಗಳು

### ಕೃಷ್ಣಾನದಿ

ಕರ್ನಾಟಕದ ಜೀವನದಿಗಳಲ್ಲಿ ಒಂದಾಗಿರುವ ಕೃಷ್ಣನದಿಯು ಉತ್ತರ ಕರ್ನಾಟಕದ ಭಾಗಕ್ಕೆ ವರವಾಗಿದೆ. ಕೃಷ್ಣ ಪವಿತ್ರ ನದಿ ಎಂದು ಹೆಸರುಗಳಿಸಿದ್ದು ಸ್ಥಳೀಯರು ಈ ನದಿಗೆ ಹಿರೆಹೊಳೆ ಮತ್ತು ಕೆರೆಹೊಳೆ ಎಂಬ ಹೆಸರಿನಿಂದ ಕರೆಯುತ್ತಾರೆ. ಕೃಷ್ಣಾ ನದಿಯು ದೇವದುರ್ಗ ತಾಲೂಕಿನಲ್ಲಿ ಅಂಜಳ, ಹೂವಿನ ಹೆಡ್ಗಿ, ಜೋಳದಡ್ಗಿ, ಕೊಪುರ, ಗೂಗಲ್, ಗಾಗಲ್, ದೊಡಂಬಳಿ, ಅಣೆಮಲ್ಲೇಶ್ವರ ಈ ಗ್ರಾಮಗಳ ಮೂಲಕ ಕೃಷ್ಣಾ ನದಿ ಹಾದುಹೋಗಿದ್ದು, ನದಿತೀರದ ಗ್ರಾಮಗಳಿವೆ ಕೃಷಿ ಭೂಮಿಯು ನೀರಾವರಿಗೆ ಹೆಚ್ಚು ಉಪಯುಕ್ತವಾಗಿದೆ. ಮತ್ತು ತಾಲೂಕಿನ ಸ್ವಲ್ಪ ಮಟ್ಟಿಗೆ ನೀರಾವರಿ ಸಮಸ್ಯೆಯನ್ನು ನಿವಾರಿಸುತ್ತದೆ. ಈ ನದಿಯು ಕೆಲವೇ ಗ್ರಾಮಗಳಲ್ಲಿ ಹಾದು ಹೋಗುವುದರಿಂದ ಅವರ ಉಪಯುಕ್ತತೆ ತಾಲೂಕಿನಲ್ಲಿ ಸಂಪೂರ್ಣವಾಗಿ ಪಡೆಯಲು ಆಗುತ್ತಿಲ್ಲ. ಹಾಗಾಗಿ ತಾಲೂಕಿನ ಬಹುತೇಕ ಭೂ ಪ್ರದೇಶವು ಮಳೆಯನ್ನೇ ಅಧರಿಸಿ ವ್ಯವಸಾಯವನ್ನು ಮಾಡಬೇಕಾಗುತ್ತದೆ.

### ಕೆರೆಗಳು

ದೇವದುರ್ಗ ತಾಲೂಕಿನಲ್ಲಿ ಒಟ್ಟು ೧೫೧ ಕೆರೆಗಳಿವೆ ಇವುಗಳಲ್ಲಿ ಚಂದನಕೆರೆ, ದೇವದುರ್ಗಕೆರೆ, ಮಲ್ಲಿನಾಯಕನ ದೊಡ್ಡಿಕೆರೆ, ಗಂಗಾಕರೆ, ರಾಮದುರ್ಗಕೆರೆ, ಹೇಮನೂರು ಕೆರೆ, ಖಾನಾಪುರಕೆರೆ,

ಗಣೇಕಲ್‌ಕೆರೆ, ಹಿರೇಕೂರುಕೆರೆ ಮುಂತಾದ ಕೆರೆಗಳು ಆಯಾ ಪ್ರದೇಶದಲ್ಲಿ ನೀರಿನ ಬವಣೆಯನ್ನು ಸ್ವಲ್ಪಮಟ್ಟಿಗೆ ನೀಗಿಸುವಂತಿದ್ದರೂ ವಾತವರಣದ ವೈಪರಿತ್ಯದಿಂದ ಮಳೆಯ ಅಭಾವದಿಂದ ಕೆರೆಗಳು ಜೀವ ತುಂಬಿಕೊಂಡಿರುವುದು ಕಡಿಮೆ ಎನ್ನಬಹುದು.

**ಬಾವಿಗಳು**

ದೇವದುರ್ಗ ಪ್ರದೇಶದ ಕೊತ್ತ ದೊಡ್ಡಿ, ಇರಬಗೇರಾ, ಗಣೇಕಲ್, ಅರಕೇರ, ಮಲ್ಲಿನಾಯಕನದೊಡ್ಡಿ, ಪಿಲಿಗುಂಡ ಮಲ್ಕಂದಿನ್ನಿ ಜೇರಬಂಡಿ ಗಬ್ಬೂರು, ಖಾನಾಪುರ ಮುಂತಾದ ಬಾವಿಗಳು ತಾಲೂಕಿನಾದ್ಯಂತ ಕಂಡುಬಂದರೂ ಅದರಲ್ಲಿ ನೀರು ಇರುವುದು ಇತಿಹಾಸವೆಂಬಂತೆ ಆಗಿದೆ.

**ಬೆಟ್ಟಗಳು**

ದೇವದುರ್ಗ ತಾಲೂಕಿನಲ್ಲಿರುವ ಕೆಲವು ಸಣ್ಣ, ಬೆಟ್ಟಗಳನ್ನು, ಕರಡಿಗುಡ್ಡೆ, ಮಸರಕಲ್ಲು, ಕಾಕರಗಲ್ಲು ಬೆಟ್ಟ ಶ್ರೇಣಿಗಳೆಂದು ಕರೆಯುತ್ತಾರೆ. ಅವು ಸುಮಾರು ೧೫೦೦ ರಿಂದ ೧೭೭೪ ಅಡಿಗಳಷ್ಟು ಎತ್ತರವಿದ್ದು, ಕಾಕರಗಲ್, ಗಬ್ಬೂರು, ಅರಕೇರಾ, ಮಲ್ಲಿನಾಯಕನ ದೊಡ್ಡಿ, ಗಣೇಕಲ್, ಕೊತ್ತದೊಡ್ಡಿ, ದೇವದುರ್ಗ, ಕರಡಿಗುಡ್ಡ, ಮುಂಡರಗಿ, ಜನ್ನಾಪುರ, ಜಾಗತಿಕಲ್, ಮಲದಕಲ್, ರಾಮದುರ್ಗ, ಹುನುಗುಂದ ಬಾಡ ಹಾಗೂ ಗಲಗ ಮೊದಲಾದ ಹಲವು ಪ್ರದೇಶಗಳಲ್ಲಿ ಹರಡಿಕೊಂಡಿವೆ.

ದೇವದುರ್ಗ ತಾಲೂಕಿನ ಗಬ್ಬೂರು, ವಂದಲಿ ಮಟಗಲ್ಲ, ಅಂಜಳ, ಅಂಚೆಸೂಗುರು, ಇಟಗಿ, ಕರ್ಕಿಹಳ್ಳಿ, ಕೋಣಚಪ್ಪಳಿ, ಗೋಪಾಳಪುರ, ಬುದ್ದಿನ್ನಿ ಮುಂತಾದ ಹಳ್ಳಿಗಳು ಪ್ರಾಗೈತಿಹಾಸಿಕ ಕಾಲದ ನೆಲೆಗಳಾಗಿವೆ ಗಬ್ಬೂರಿನ ಸೂಗೂರೇಶ್ವರ ಬೆಟ್ಟದಲ್ಲಿ ಹಾಗೂ ಮಲದಕಲ್ಲ ಗ್ರಾಮದ ಬೆಟ್ಟದಲ್ಲಿ ಪ್ರಾಗೈತಿಹಾಸಿಕ ಕಾಲದ ಅನೇಕ ಕುರುಹುಗಳನ್ನು ನೋಡಬಹುದು. ಸುಗೂರೇಶ್ವರ ದೇವಾಲಯದ ಹಿಂದಿನ ಕೆಳಭಾಗದಲ್ಲಿ ಒಂದು ನೀರಿನ ಬುಗ್ಗೆಯಿದ್ದು ಇದರ ಪಕ್ಕದಲ್ಲಿ ವಿಶೇಷವಾಗಿ ಕಂಡುಬರುವ ಜ್ವಾಲಾಮುಖಿ ಸ್ಫೋಟದಿಂದ ಉಂಟಾದ ಶಿಲಾಬಂಡೆಗಲ್ಲು ಇದೆ. ಇದರಲ್ಲಿ “ಬ್ಯಾತೋರೀಥ” ಎಂದು ಕರೆಯಲ್ಪಡುವ ಕಪ್ಪು ಶಿಲಾಪದರಿನ ಅವಶೇಷವನ್ನೂ ಕಾಣಬಹುದಾಗಿದೆ.

**೧. ಕೆಂಪುಮಣ್ಣು**

ದೇವದುರ್ಗ ತಾಲೂಕಿನಲ್ಲಿ ವಿವಿಧ ರೀತಿಯ ಮಣ್ಣಿನ ವಿಧಗಳು ಕಂಡುಬರುತ್ತವೆ ಅದರಲ್ಲಿ ಕೆಂಪುಮಣ್ಣು ಸಹ ಒಂದಾಗಿದ್ದು ಈ ಮಣ್ಣಿನಿಂದ ಕೃಷಿಯ ಬಳಕೆಗೆ ಹೆಚ್ಚು ಉಪಯುಕ್ತವಾಗಿದೆ. ತಾಲೂಕಿನಲ್ಲಿ ಹೆಚ್ಚಾಗಿ ಮಳೆಯನ್ನೇ ಆಧರಿಸಿ ಕೃಷಿ ಮಾಡುವುದರಿಂದ ಕೆಂಪು ಮಣ್ಣು ಯೋಗ್ಯವಾಗಿದೆ. ಈ ಮಣ್ಣು ಜಾಲಹಳ್ಳಿ, ಗಲಗ, ಮುಂಡರಗಿ, ಅರಕೇರಾ, ಕ್ಯಾದಿಗೇರಾ, ಆಕಲಕುಂಡಿ, ಪ್ರದೇಶಗಲ್ಲಿ ಹೆಚ್ಚಾಗಿ ಕಂಡುಬರುತ್ತಿದ್ದು ಕೃಷಿ ಭೂಮಿಗೆ ಪೂರಕವಾಗಿದೆ. ಕೆರೆಗಳ ಸುತ್ತಮುತ್ತಲಿನ ಮತ್ತು ನೀರಾವರಿಯ ಅನೇಕ ಬಹುಭಾಗವು ಕೆಂಪು ಮಣ್ಣಿನಿಂದ ಕೂಡಿದ್ದು ಇದರ ಹೆಕ್ಟೇರ್ ೨೩೭.೧೯ ಹೆಕ್ಟೇರ್‌ಗಳದ್ದು. ಇದು ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗಿದೆ.

೨. ಕಪ್ಪುಮಣ್ಣು

ಉತ್ತರ ಕರ್ನಾಟಕದ ಬಹುತೇಕ ಪ್ರದೇಶವು ಕಪ್ಪು ಮಣ್ಣಿನಿಂದ ಕೂಡಿದ್ದು ದೇವದುರ್ಗವು ಸಹ ಇದಕ್ಕೆ ಹೊರತಾಗಿಲ್ಲ. ಸುಮಾರು ೩೧೭ ಹೆಕ್ಟೇರ್‌ಗಳಿದ್ದು ದೇವದುರ್ಗ, ಮಸರಕಲ್, ಗಣೇಕಲ್, ಸುಂಕೇಶ್ವರಹಟ್ಟಿ, ನಾಗಡದಿನ್ನಿ, ಗಬ್ಬೂರು, ಹೀರೇಬೂದರು, ತೆಗ್ಗಿಹಾಳ, ಖಾನಾಪುರ ಪ್ರದೇಶಗಳಲ್ಲಿ ಈ ಮಣ್ಣಿನ ಫಲವತ್ತತೆ ಹೆಚ್ಚಾಗಿ ಕಂಡುಬರುತ್ತದೆ. ಈ ಮಣ್ಣಿನಲ್ಲಿ ಹತ್ತಿ, ಜೋಳ, ಸಜ್ಜೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಈ ಭಾಗದ ಬಹುತೇಕ ಭೂಮಿಯು ಕಪ್ಪು ಮಣ್ಣಿನಿಂದ ಕೂಡಿರುವುದೇ ಇಲ್ಲಿ ವಿಶೇಷತೆಯಾಗಿದೆ.

೩. ಮೆಕ್ಕಲ ಮಣ್ಣು

ದೇವದುರ್ಗ ತಾಲೂಕಿನಲ್ಲಿ ಕೃಷ್ಣನದಿಯ ಹರಿಯುವಂಥ ಪ್ರದೇಶಗಳಾದ ಚಿಂಚೋಡಿ ಅಂಜಳ, ಗೂಗಲ್, ಗಾಗಲ್, ಕೊಪ್ಪರೆ, ದೊಡಂಬಳಿ ಮುಂತಾದ ಪ್ರದೇಶಗಳಲ್ಲಿ ಸ್ವಲ್ಪ ಮಟ್ಟಿಗೆ ಫಲವತ್ತಾದ ಮೆಕ್ಕಲು ಮಣ್ಣು ಕಂಡುಬರುತ್ತಿದ್ದು ಈ ಭಾಗದ ಜನರಿಗೆ ವರ ಎಂಬತಾಗಿದೆ. ಈ ಭಾಗದಲ್ಲಿ ನೀರಾವರಿಯ ವ್ಯವಸ್ಥೆ ಅಷ್ಟಾಗಿರುವುದಿಲ್ಲ ಮೆಕ್ಕಲು ಮಣ್ಣಿನಿಂದ ಕೃಷಿಗೆ ಹೆಚ್ಚು ಉಪಯುಕ್ತವಾಗಿದೆ. ಬೆಳೆ ಹೆಚ್ಚು ಇಳುವರಿಯನ್ನು ಪಡೆಯಲು ಸಾಧ್ಯವಾಗಿದೆ. ಇದಕ್ಕೆ ಕೃಷ್ಣ ನದಿಯ ಬಯಲು ಒಂದು ಕಾರಣ ಆಗಿರಬಹುದಾಗಿದೆ. ೧೯೦ ಹೆಕ್ಟೇರ್ ಜಮೀನು ಇದೆ ಎಂದು ಅಂದಾಜು ಮಾಡಲಾಗಿದೆ.

೪. ಮರಳು

ಮರಳು ಈ ಕೆಲವು ಪ್ರದೇಶಗಳಲ್ಲಿ ಒಡಕು ಮತ್ತು ಮೇಲ್ ಪದರದಲ್ಲಿ ತೆಳುವಾದ ಮರಳು ಮಣ್ಣು ಕೆಲವು ಪ್ರದೇಶಗಳಲ್ಲಿ ಕಂಡು ಬರುತ್ತದೆ. ಅಷ್ಟೇ ಅಲ್ಲದೆ ಮರಳು ಮಣ್ಣನ್ನು ಮಲದಕಲ್ ಗೂಗಲ್, ಕೂಡ್ಲಿಗಿ ಮತ್ತು ಗುಡ್ಡಗಾಡು ಪ್ರದೇಶದಲ್ಲಿ ನಾವು ನೋಡಬಹುದಾಗಿದೆ. ಕೃಷ್ಣನದಿಯ ತೀರದಲ್ಲಿ ಮರಳು ಹೆಚ್ಚಾಗಿ ಕಂಡುಬಂದಿದ್ದು, ಕೃಷಿಗೆ ಯೋಗ್ಯವಾದ ಮಣ್ಣು ಇದಾಗಿರುವುದಿಲ್ಲ. ಇದು ಸಹಜವಾಗಿಯೇ ಕಟ್ಟಡಗಳಿಗೆ ಹೆಚ್ಚು ಉಪಯುಕ್ತವಾಗಿದೆ. ಇದು ೧೫೫ ಹೆಕ್ಟೇರ್ ಜಮೀನು ಇದೆಯೆಂದು ಅಂದಾಜು ಮಾಡಲಾಗಿದೆ.

ಅರಣ್ಯ ಪ್ರದೇಶಗಳು

ದೇವದುರ್ಗ ತಾಲೂಕಿನ ಅರಣ್ಯ ವಿಸ್ತೀರ್ಣವು ೫೮೯೧ ಹೆಕ್ಟೇರ್‌ಗಳಿದ್ದು, ಕೃಷ್ಣನದಿ ದಂಡೆಯುದ್ದಕ್ಕೂ ಅರಣ್ಯ ಪ್ರದೇಶವಾಗಿದೆ. ಅಷ್ಟುದಟ್ಟವಾಗಿಲ್ಲದ ಈ ಅರಣ್ಯದಲ್ಲಿ ತರೆ, ತಮರಿ ಬಿಡಿ ಎಲೆಯಮರ ಕಕ್ಕೆ ಜಾಲಿ, ಬೆಟ್ಟಲು, ಹೊಂಗೆ, ಹುಣಸೆ, ಇಪ್ಪೆ, ಮುತ್ತಗಿ, ಹೊನ್ನೆ, ಬೇವಿನಮರ, ನೀಲಗಿರಿ ಮುಂತಾದವುಗಳಿವೆ. ಈ ಅರಣ್ಯ ಪ್ರದೇಶಗಳಲ್ಲಿ ಹಲವಾರು ಹಣ್ಣಿನ ಗಿಡಮರಗಳು ಕಂಡು ಬರುತ್ತವೆ. ಮೊಲ, ಜಿಂಕೆ, ನರಿ, ತೋಳ, ಹಾವು, ಕಾಡು ಹಂದಿ, ಮಂಗ ಮುಂತಾದ ಪ್ರಾಣಿಗಳು ಹೆಚ್ಚಾಗಿ

ಕಂಡುಬರುತ್ತದೆ. ತಾಲೂಕಿನ ಭೌಗೋಳಿಕ ಪ್ರದೇಶವು ಹೆಚ್ಚು ಗುಡ್ಡಗಾಡಿನಿಂದ ಕೂಡಿದ್ದು ಗಿಡಮರಗಳ ಬೆಳವಣಿಗೆಗಳು ಕುಂಠಿತವಾಗಿರುವುದು ಗಮನಿಸಬಹುದಾಗಿದೆ. ಇಂತಹ ಕಾರಣಗಳಿಂದ ಅರಣ್ಯ ಪ್ರದೇಶವು ಹೆಚ್ಚಾಗಿ ಕಂಡುಬರುವುದಿಲ್ಲ ಇದಕ್ಕೆ ನೀರಾವರಿ ಸಮಸ್ಯೆಯು ಒಂದು ಕಾರಣವಾಗಿದೆ.

**ಮಣ್ಣಿನ ವಿಧಗಳು**

**೧. ಕೆಂಪು ಮಣ್ಣು**

ಈ ಮಣ್ಣು ಜಾಲಹಳ್ಳಿ, ಗಲಗ, ಮುಂಡರಗಿ, ಕ್ಯಾದಿಗೇರಾ, ಅರಕೇರ, ಅಲ್ಕೋಡ, ಆಕಲಕುಂಪಿ, ಪ್ರದೇಶದಲ್ಲಿ ಕೆಂಪುಮಣ್ಣು ಹೆಚ್ಚಾಗಿ ಕಂಡುಬರುತ್ತದೆ. ಕೃಷಿಗೆ ಭೂಮಿಗೆ ಹೆಚ್ಚು ಯೋಗ್ಯವಾಗಿರುತ್ತದೆ.

**೨. ಕಪ್ಪು ಮಣ್ಣು**

ದೇವದುರ್ಗ, ಮಸರಕಲ್, ಗಣೇಕಲ್, ಮಲದಕಲ್, ರಾಮದುರ್ಗ, ಸುಂಕೇಶ್ವರಹಾಳ, ನಾಗಡದಿನ್ನಿ, ಗಬ್ಬೂರು, ಮಲ್ಕಂದಿನ್ನಿ, ಹೀರೆಬೂದರು, ತೆಗ್ಗಿಹಾಳ, ಖಾನಾಪುರ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

**೩. ಮೆಕ್ಕಲುಮಣ್ಣು**

ಈ ಮಣ್ಣು ಕೃಷ್ಣನದಿಯು ಹರಿಯುವ ಪ್ರದೇಶಗಳಾದ ಚಿಂಚೋಡಿ, ಅಂಜಳ, ಬಣಕಲ್, ಕೊಪ್ಪರ, ಗೂಗಲ್, ಗಾಗಲ್, ಮುಂತಾದ ಪ್ರದೇಶಗಳಲ್ಲಿ ಸ್ವಲ್ಪಮಟ್ಟಿಗೆ ಫಲವತ್ತಾದ ಭೂಮಿ ಕಂಡುಬರುತ್ತದೆ ಮತ್ತು ಕೃಷಿಗೆ ಇದು ಹೆಚ್ಚು ಉಪಯುಕ್ತತೆಯಾಗಿದೆ.

**೪. ಜೇಡಿ ಮಣ್ಣು ಮತ್ತು ಮರಗಳು**

ಜೇಡಿ ಮಣ್ಣು ಕೆಲವು ಪ್ರದೇಶಗಳಲ್ಲಿ ಒಡಕು ಮತ್ತು ಮೇಲ್ ಪದರದಲ್ಲಿ ತೆಳುವಾದ ಕೆಂಪು ಜೇಡಿಮಣ್ಣನ್ನು ಕೆಲವು ಪ್ರದೇಶದಲ್ಲಿದೆ ಮರಳು ಮಣ್ಣನ್ನು ಮರದಕಲ್, ಗೂಗಲ್, ಕೂಡ್ಲಿಗಿ ಮತ್ತು ಗುಡ್ಡಗಾಡು ಪ್ರದೇಶದಲ್ಲಿ ಕಾಣಬಹುದು.

**ಬೆಳೆಗಳು**

ಈ ತಾಲೂಕಿನಲ್ಲಿ ಕೃಷಿಯನ್ನು ಎರಡು ಅವಧಿಯಲ್ಲಿ ಬೆಳೆಗಳನ್ನೂ ಬೆಳೆಯುತ್ತಾರೆ. ಅವುಗಳೇ ಮುಂಗಾರು ಮತ್ತು ಹಿಂಗಾರು ಬೆಳೆಗಳು.

**೧. ಮುಂಗಾರು ಬೆಳೆಗಳು**

ಶೇಂಗಾ, ತೊಗರಿ, ಸಜ್ಜೆ, ಕೆಂಪುಜೋಳ, ಹೆಸರು ನವಣೆ ಇವುಗಳನ್ನು ಸಾಮಾನ್ಯವಾಗಿ ಜೂನ್ ತಿಂಗಳಿನಲ್ಲಿ ಬಿತ್ತನೆ ಮಾಡಿ ಬೆಳೆಯುತ್ತಾರೆ.

**೨. ಹಿಂಗಾರು ಬೆಳೆಗಳು**

ಹತ್ತಿ, ಜೋಳ, ಕಸುಬೆ, ಗೋಧಿ, ಕಡುಬೆ, ಉರುಳಿ ಇತ್ಯಾದಿ ಬೆಳೆಗಳನ್ನು ಅಕ್ಟೋಬರ್ ಅಥವಾ ನವೆಂಬರ್ ತಿಂಗಳಲ್ಲಿ ಬೀಳುವಂತಹ ಮಳೆಯನ್ನು ಆಧರಿಸಿ ಬೆಳೆಯುತ್ತಾರೆ.

I ಖನಿಜ ಸಂಪತ್ತು

ದೇವದುರ್ಗ ತಾಲೂಕು ಅತೀ ಹಿಂದುಳಿದ ಪ್ರದೇಶವಾಗಿದೆ. ದೇವದುರ್ಗ ತಾಲೂಕು ಖನಿಜ ಸಂಪತ್ತಿನಿಂದ ಕೂಡಿದೆ. ಇಂತಹ ಖನಿಜ ಸಂಪತ್ತುಗಳಲ್ಲಿ ಚಿನ್ನ, ಸುಣ್ಣದಕಲ್ಲು ಮುಂತಾದವು ಕಂಡು ಬರುತ್ತವೆ. ವಂದಲಿ, ಊಟಿ ಗ್ರಾಮದ ಪ್ರದೇಶದಲ್ಲಿ ಬಂಗಾರವನ್ನು ತೆಗೆದಿದ್ದು ಕಂಡುಬರುತ್ತವೆ ಮತ್ತು ಬಂಗಾರವನ್ನು ಶೋಧಿಸುವ ಕೆಲಸದಲ್ಲಿ ಆರ್ಥಿಕ ಮುಗ್ಗಟಿನ ಅಭಾವದಿಂದಾಗಿ ಗಣಿ ಕೆಲಸವನ್ನು ನಿಲ್ಲಿಸಲಾಗಿದೆ. ಹೀಗಲೂ ತಾಲೂಕಿನ ಹಲವು ಪ್ರದೇಶಗಳಲ್ಲಿ ಚಿನ್ನದಗಣಿ ಮತ್ತು ಸುಣ್ಣದಕಲ್ಲು ಸಿಗುವಂತಹ ಮಾಹಿತಿಗಳು ದೊರೆಯುತ್ತವೆ.[೨]

II ಸಾಂಸ್ಕೃತಿಕ ಮಹತ್ವ

ಕರ್ನಾಟಕ ಸಾಂಸ್ಕೃತಿಕ ವೈಭವ ವೈಶಿಷ್ಟ್ಯಗಳನ್ನು ತಿಳಿಸುವ ಪ್ರದೇಶಗಳಲ್ಲಿ ದೇವದುರ್ಗವೂ ಒಂದಾಗಿದೆ. ಇಲ್ಲಿ ಅನೇಕ ರಾಜ ಮನೆತನಗಳು ಆಳ್ವಿಕೆ ಮಾಡಿ ಶಾಸನಗಳನ್ನು ಕೋಟೆ, ಕೊತ್ತಲ ವೀರಗಲ್ಲು, ಮಾಸ್ತಿಕಲ್ಲು, ಇತರೆ ಸ್ಮಾರಕಗಳನ್ನು ರಚಿಸಿ ಸಾಂಸ್ಕೃತಿಕವಾಗಿ ಬೆಳೆಯುವುದಕ್ಕೆ ಕಾರಣಭೂತರಾಗಿದ್ದಾರೆ. ದೇವದುರ್ಗ ತಾಲೂಕಿನಲ್ಲಿ ಕೃಷ್ಣನದಿಯ ದಡದಲ್ಲಿ ಅನೇಕ ಪುಣ್ಯಕ್ಷೇತ್ರಗಳು ಇವೆ ಅವುಗಳು ಗೂಗಲ್ ಮತ್ತು ಕೊಪ್ಪರ ಗ್ರಾಮಗಳಲ್ಲಿ ದೇವಸ್ಥಾನಗಳಿವೆ ಮತ್ತು ಇದರ ದಡದಲ್ಲಿ ಋಷಿಗಳು ತಪಸ್ಸು ಮಾಡಿದ ಕುರುಹುಗಳು ಕಂಡುಬರುತ್ತವೆ. ಇಂಥ ಶ್ರೇಷ್ಠ ಸ್ಥಾನಗಳಲ್ಲಿ ಅಣ್ಣೆ ಮಲ್ಲೇಶ್ವರವು ಕೂಡ ಒಂದಾಗಿದೆ. ಅಲ್ಲದೆ ಇಲ್ಲಿ ಜಮದಗ್ನಿ ಮಹಾಋಷಿ ತಪಸ್ಸು ಮಾಡಿದ ಗುಹೆಯೂ ಇದೆ. ಅಲ್ಲಿ ಕೃಷ್ಣ ನದಿಯೂ ಹರಿಯುತ್ತಿರುವುದರಿಂದ ಇದು 'ದಕ್ಷಿಣ ಕಾಸಿ' ಎಂದು ಪ್ರಸಿದ್ಧಿ ಪಡೆದಿದೆ. ಕೊಪ್ಪರ ಗ್ರಾಮದಲ್ಲಿ ನರಸಿಂಹ ದೇವಸ್ಥಾನವಿದ್ದು ರಾಜ್ಯದ ನಾನಾ ಭಾಗಗಳಿಂದ ನರಸಿಂಹ ಜಯಂತಿಗೆ ಹಾಗೂ ಕರ್ನಾಟಕದ ಸಂತರಲೊಬ್ಬರಾದ ಪುರಂದರ ದಾಸರ ಪುಣ್ಯತಿಥಿಗೆ ಬರುತ್ತಿರುವುದನ್ನು ನಾವು ಈಗಲೂ ಕಾಣಬಹುದಾಗಿದೆ. ಇಲ್ಲಿಂದ ಪೂರ್ವ ದಿಕ್ಕಿಗೆ ಐದು ಮೈಲು ದೂರದಲ್ಲಿ ೧೨ನೇ ಶತಮಾನದಲ್ಲಿ ಶಿವಶರಣ ಅಲ್ಲಮ ಪ್ರಭುವಿನ ದೇವಾಲಯವಿದ್ದು, ಅವರು ಅಲ್ಲಿ ನೆಲೆಸಿ ತಪಸ್ಸನ್ನಾಚರಿಸಿದ ಗುಹೆ ಸಾಕ್ಷಿಭೂತವಾಗಿದೆ ಮತ್ತು ಚೈತ್ರ ಪಂಚಮಿಗೆ ಪ್ರತಿವರ್ಷ ಈ ಕ್ಷೇತ್ರದಲ್ಲಿ ಉತ್ಸವ, ತೇರು, ಜಾತ್ರೆಗಳಿದ್ದು ವಿಜೃಂಭಣೆಯಿಂದ ಹೀಗಲೂ ನಡೆಯುವುದು ಒಂದು ವಿಶೇಷ ಈ ಮೂರು ಸ್ಥಳಗಳನ್ನು ಒಂದೇ ದಿನದಲ್ಲಿ ಸಂದರ್ಶಿಸಿದವರಿಗೆ ಕಾಶಿಗೆ ಹೋದಷ್ಟು ಪುಣ್ಯ ಸಂಪಾದಿಸುತ್ತಾರೆಂಬುದು ಇಲ್ಲಿನ ಜನರನಂಬಿಕೆ.

ದೇವದುರ್ಗ ಪಟ್ಟಣವು ಪರ್ವತ ಶ್ರೇಣಿಗಳ ಮದ್ಯೆ ಇದೆ. ದೇವರು ಸೃಷ್ಠಿಸಿದ ಕೋಟೆಯ ಮಧ್ಯೆ ಪಟ್ಟಣ ಇರುವುದುರಿಂದ ಇದಕ್ಕೆ ದೇವದುರ್ಗವೆಂದು ಹೆಸರು ಬಂದಿದೆ ಎಂದು ಸ್ಥಳೀಯರು ಹೇಳುತ್ತಾರೆ.

ದೇವದುರ್ಗ ತಾಲೂಕ್ ಸುರುಪುರ ಸಂಸ್ಥಾನದ ಆಡಳಿತಕ್ಕೆ ಒಳಪಟ್ಟಿತ್ತು. ಇಲ್ಲಿ ಒಬ್ಬ ಪಾಳೇಗಾರನಿರುತ್ತಿದ್ದ. ಇಲ್ಲಿಯ ಕೊನೆಯ ಪಾಳೇಗಾರನಾದ ರಾಜಕೆಂಚನಾಯಕನ ತರುವಾಯ ದತ್ತು

[illegible]

ತೆಗೆದುಕೊಂಡು ಈ ಪಾಳೇಗಾರ ಮನೆತನ ಮುಂದುವರೆಯಿತು. ರಾಜವಾಸುದೇವನಾಯಕನ ಮಕ್ಕಳಲ್ಲಿ ಕೊನೆಯವರಾದ ಆರ್.ವಿ.ನಾಯಕ್ ಜೀವಂತವಾಗಿದ್ದಾರೆ. ಹಿಂದಿನ ಕಾಲದ ಸಾಂಸ್ಕೃತಿಕ ವೈಭವದ ಕೇಶವನಾಯಕ ದೊರೆ ಕಟ್ಟಿಸಿದ ಅರಮನೆಯಲ್ಲಿ ಪಟ್ಟಣದ ಮಧ್ಯೆ ಇದೆ. ಶತಮಾನಗಳ ಇತಿಹಾಸವನ್ನು ಹೊಂದಿದೆ. ಈ ಅರಮನೆ ಈಗ ಸಂಪೂರ್ಣವಾಗಿ ಶೀಥಿಲಗೊಂಡಿದೆ ಎಂದು ಹೇಳಬಹುದು.

ದೇವದುರ್ಗ ತಾಲೂಕಿನ ಬರದ ನಾಡಿನ ಕೃಷಿ ಮತ್ತು ನೀರಾವರಿ ಪರಿಸ್ಥಿತಿ

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು ಎಂದರೆ ರಾಜ್ಯದ ಜನತೆಗೆ ತಟ್ಟನೆ ನೆನಪಿಗೆ ಬರುವುದು ಇಲ್ಲಿಯ ದಟ್ಟದಾರಿದ್ರ್ಯದ ಬದುಕು. ಕೃಷಿ ಮಳೆಯನ್ನೇ ಆಧರಿಸುವುದು ಮತ್ತು ಅಕಾಲಿಕ ಮಳೆಯಿಂದ ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದ ಸದಾ ಬರಗಾಲಕ್ಕೆ ತುತ್ತಾಗುವುದು ದುರಾದೃಷ್ಟ ಅಭಿವೃದ್ಧಿ ಸಾಕ್ಷರತೆಯಲ್ಲಿಯೂ ತೀರಾ ಹಿಂದುಳಿದಿದೆ ಎನ್ನುವುದಕ್ಕೆ ಸರಕಾರದ ಅಂಕಿ ಸಂಖ್ಯೆ ಸಾಕ್ಷಿದಾರವಾಗಿದೆ.

## ದೇವದುರ್ಗ ತಾಲೂಕಿನ ಕೃಷಿ ಪರಿಚಯ

ದೇವದುರ್ಗ ತಾಲೂಕಿನ ವಿಸ್ತೀರ್ಣ ೧ ಲಕ್ಷ ೫೫ ಸಾವಿರ ೯೭೭ ಹೆಕ್ಟೇರ್ ೮ ಸಾವಿರ ಎಕರೆ ಪ್ರದೇಶದಷ್ಟು ಮತ್ತು ತೆರೆದ ಬಾವಿಯಿಂದ ಕೊಳಚೆ ಬಾವಿಗಳಿಂದ ಕೃಷ್ಣನದಿಯ ನೀರಿನಿಂದ ತುಂಗಭದ್ರಾ ಕಾಲುವೆಯಿಂದ ತಾಲೂಕಿನ ನಾಗಡದಿನ್ನಿ, ಹೆಗಡದಿನ್ನಿ, ತಿಪ್ಪಲದಿನ್ನಿ, ಯರಮರಸ್ ಮುಂತಾದ ೪.೫ ಗ್ರಾಮಗಳಲ್ಲಿ ನೀರವಾರಿಯಾಗುತ್ತಿದೆ. ಉಳಿದಂತೆ ಮಳೆಯನ್ನಾಧರಿಸಿದ ಕೃಷಿ ಪದ್ಧತಿ ಮಾಡಬೇಕಾಗಿತ್ತು. ಬಿಳಿಜೋಳ, ಹತ್ತಿ, ಸೂರ್ಯಕಾಂತಿ, ಕಡಲೆ, ಸಜ್ಜೆ ಶೇಂಗಾ ತೊಗರಿ ಇಲ್ಲಿನ ಪ್ರಮುಖ ಬೆಳೆಗಳು ನೀರಾವರಿ ಪ್ರದೇಶದಲ್ಲಿ ಭತ್ತ, ಹತ್ತಿ ಬೆಳೆದರೆ ಪಂಪ್‌ಸೆಟ್‌ಗಳಿಂದ ಬೆಳೆಯುವ ಜಾಲಹಳ್ಳಿ ಹಾಗೂ ಅರಕೆರಾ ವಿಭಾಗದ ಹಳ್ಳಿಗಳಲ್ಲಿ ಶೇಂಗಾ, ಈರುಳ್ಳಿ, ಸಜ್ಜೆ, ಪ್ರಮುಖ ಬೆಳೆಗಳಾಗಿವೆ.

ದೇವದುರ್ಗ ತಾಲೂಕಿನ ಕೃಷಿಕೂಲಿಕಾರರು ಶೇಕಡ ೮೦% ರಷ್ಟು ಕೃಷಿ ಭೂಮಿ ಮಳೆಯನ್ನೇ ಅವಲಂಬಿಸಿ ಬದುಕಬೇಕಾಗಿರುವುದರಿಂದ ಅಕಾಲಿಕ ಮಳೆಯಿಂದ ನೈಸರ್ಗಿಕ ವಿಕೋಪಕ್ಕೆ ತುತ್ತಾಗುತ್ತಿರುವ ದೇವದುರ್ಗ ತಾಲೂಕಿನ ಜನತೆ ಸದಾ ಬರಗಾಲದ ಬವಣೆ ತಾಳದೆ ಅನಿವಾರ್ಯವಾಗಿ ಹೊಟ್ಟೆ ಹೊರೆಯಲು ಸಾಕಷ್ಟು ಕುಟುಂಬಗಳು ಬೆಂಗಳೂರು, ಬಾಂಬೆಯಂಥ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗಿ ಬದುಕುತ್ತಿದ್ದಾರೆ. ಇದು ಒಂದು ಕಡೆಯಾದರೆ, ರೈತರು ಬೆಳೆದ ಬೆಳೆಯಲ್ಲದೆ ಭೂಮಿಗೆ ಹಾಕಿದ ಬಂಡವಾಳವೂ ಹಿಂದಿರುಗದೆ ಆರ್ಥಿಕ ಅತಂತ್ರ ಸ್ಥಿತಿಯಲ್ಲಿ ತೊಳಲಾಡುವಂತಾಗಿದೆ. ಇತ್ತೀಚೆಗೆ ರಾಜ್ಯ ಸರಕಾರ ವಿದ್ಯುತ್ ಪ್ರಸರಣ ನಿಗಮಗಳನ್ನು ಖಾಸಗೀಕರಣಗೊಳಿಸಿ ಖಾಸಗಿ ಕಂಪನಿಗಳಿಗೆ ನೀಡಿದಿಂದ ಕಟ್ಟುನಿಟ್ಟಿನ ಕಾನೂನಿನ ವಿದ್ಯುತ್ ಸರಬರಾಜಿನ ಕಡತದಿಂದ ರೈತರು ತತ್ತರಸಿ ಹೋಗಿದ್ದಾರೆ. ಹೆಚ್ಚಾಗಿ

ರೈತರು ಬದುಕು ಗೋಡುವಂತಾಗಿದೆ. ವಿದ್ಯುತ್ ಕಡಿತದಿಂದ ಬೆಳೆದ ಬೆಳೆಗಳು ನೀರಿಲ್ಲದೆ ಕಮರಿ ಹೋಗುತ್ತಿವೆ. ಬೆಳೆದಷ್ಟು ಬೆಳೆ ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಅಲ್ಲಿ ಇವರಿಗೆ ದಲ್ಲಾಳಿಗಳ ದಬ್ಬಾಳಿಕೆಯಿಂದ ಕೇಂದ್ರ ಹಾಗೂ ರಾಜ್ಯ ಸರಕಾರಗಳ ರೈತ ವಿರೋಧಿ ನೀತಿಯಿಂದ ರೈತರ ಮಾತಿಗೆ ಕಾಸಿನ ಬೆಲೆಯಿಲ್ಲದಂತಾಗಿದೆ. ಇದರಿಂದಾಗಿ ಇಲ್ಲಿನ ಕೃಷಿಕೂಲಿಕಾರರು ವಿದ್ಯುತ್ ಬಿಲ್ ಕಟ್ಟಲು ಬೆಳೆದ ಬೆಳೆಯಿಂದ ಬಂದಂಥ ಹಣ ಸಾಕಾಗುವುದಿಲ್ಲ. ಇನ್ನೂ ರೈತರು ಬದುಕುದಾದರು ಹೇಗೆ ಅನಿವಾರ್ಯವಾಗಿ ರೈತ ಸಾಲದ ಬಾದೆ ತಾಳದೆ ಬದುಕೇ ಹೊರೆಯಾಗಿರುವುದರಿಂದ ಆತ್ಮಹತ್ಯೆಯಂತಹ ದುಃಸ್ಸಾಹಸಕ್ಕೆ ಶರಣಾಗುತ್ತಿದ್ದಾನೆ. ಇನ್ನೂ ಕೆಲವರು ಇರುವ ಭೂಮಿಯನ್ನೂ ಮಾರಾಟ ಮಾಡಿ ಕೃಷಿ ಕೂಲಿಕಾರರಾಗಿದ್ದಾರೆ.[೬]

ದೇವದುರ್ಗ ತಾಲೂಕಿನ ನೀರಾವರಿ ಪ್ರದಾನ ಭೂಮಿಯು ಬಹಳ ಕಡಿಮೆ ಇದೆ. ಇಲ್ಲಿ ನೀರಾವರಿಯ ಪ್ರದಾನ ಭೂಮಿಗಳಲ್ಲಿ ಎರಡು ಬೆಳೆಗಳನ್ನು ಈ ಪ್ರದೇಶದಲ್ಲಿ ಬೆಳೆಯುತ್ತಾರೆ. ಇಲ್ಲಿ ನೀರಾವರಿ ಭೂಮಿಯು ಜಾಲಹಳ್ಳಿ, ಕರಡಿಗುಡ್ಡ, ಮುಂಡರಗಿ, ದೇವತಗಲ್, ಗಲಗ, ಅಂಜಳ, ನವಿಲಗುಡ್ಡ ಈ ಭಾಗದ ಅನೇಕ ಕಡೆ ನೀರಾವರಿ ಭೂಮಿ ಇದೆ. ಇಲ್ಲಿನ ಕೃಷಿಕೂಲಿಕಾರರಿಗೆ ನೀರಾವರಿಯಿಂದ ಬಹಳ ಲಾಭವಾಗುತ್ತದೆ. ಇಲ್ಲಿ ರೈತರು ನೀರಾವರಿಯಿಂದ ಎರಡು ಬೆಳೆಗಳನ್ನು ಬೆಳೆದುಕೊಂಡು ಉತ್ತಮ ರೀತಿಯಲ್ಲಿ ಫಸಲನ್ನು ಪಡೆದುಕೊಳ್ಳುತ್ತಿದ್ದಾರೆ. ಹೀಗಾಗಿ ಈ ವಿಭಾಗದ ಕೃಷಿಕೂಲಿಕಾರರು ಉತ್ತಮ ರೀತಿಯಲ್ಲಿ ಭೂಮಿಯನ್ನು ಉಪಯೋಗಿಸಿಕೊಂಡು, ಶೇಂಗಾ, ಭತ್ತ, ಸಜ್ಜೆ, ಕಬ್ಬು ಮುಂತಾದ ಬೆಳೆಗಳನ್ನು ಬೆಳೆದುಕೊಳ್ಳುತ್ತಿದ್ದಾರೆ. ಇಲ್ಲಿನ ನೀರಾವರಿಯು ಭೂಮಿಯು ಒಳ್ಳೆಯ ಫಲಪ್ರದವಾಗಿದೆ ಮತ್ತು ಗಬ್ಬೂರು, ಕಾಕರಗಲ್, ಮಸರಕಲ್ ಈ ಕಡೆ ನೀರಾವರಿಯ ಕಾಲುವೆ ಇದ್ದರೂ ಕೂಡ ನೀರು ಇಲ್ಲದಿರುವುದು ಇಲ್ಲಿನ ಕೃಷಿಕೂಲಿಕಾರರಿಗೆ ಬಹಳಷ್ಟು ಅನಾನುಕೂಲಗಳಾಗಿವೆ. ಈ ಭಾಗದ ಕೃಷಿಕೂಲಿಕಾರರು ಹೆಚ್ಚಾಗಿ ಮಳೆಯನ್ನೇ ಅವಲಂಬಿಸಿದ್ದಾರೆ.

ದೇವದುರ್ಗ ತಾಲೂಕಿನ ಕೃಷಿಕೂಲಿಕಾರರು ಶೇ೮೦% ರಷ್ಟು ಇದ್ದಾರೆ. ಈ ತಾಲೂಕಿನಲ್ಲಿ ಒಟ್ಟು ಶೇಕಡ ೪೦% ರಷ್ಟು ನೀರಾವರಿಯಾಗಿದೆ. ಮತ್ತು ಮಳೆಯನ್ನಾಧರಿಸಿದ ಭೂಮಿ ದೇವದುರ್ಗ ತಾಲೂಕಿನ ಅನೇಕ ಕಡೆಗಳಲ್ಲಿ ಮಳೆಯನ್ನೇ ಅವಲಂಬಿಸಿದ ಕೃಷಿಕೂಲಿಕಾರರು ಇದ್ದಾರೆ. ಅನೇಕ ಭಾಗಗಳಲ್ಲಿ ನೀರಾವರಿಯ ಕಾಲುವೆ ಇದ್ದರೂ ಅಲ್ಲಿ ನೀರಿನ ಕೊರತೆಯಿಂದ ಇಲ್ಲಿನ ರೈತರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ಈ ಭಾಗದ ರೈತರಿಗೆ ಬಲದಂಡೆ ಕಾಲುವೆಯನ್ನು ನಂಬಿಕೊಂಡು ಬಾಳುವಂತಿಲ್ಲ ಏಕೆಂದರೆ ಇವರು ನೀರಾವರಿಯನ್ನು ಬಿಟ್ಟು ಮಳೆಯನ್ನೇ ಹೆಚ್ಚಾಗಿ ನಂಬಿಕೊಂಡಿರುವುದರಿಂದ ಇವರಿಗೆ ಮಳೆಯಿಂದ ಅಷ್ಟೇನು ಲಾಭದಾಯಕ ಬೆಳೆಗಳು ಆಗುವುದಿಲ್ಲ.

[illegible]

[illegible]

[illegible]

[illegible]

ನೀರಾವರಿ ಪ್ರಧಾನ ಭೂಮಿಯಿಂದ ೨ ಬೆಳೆಗಳನ್ನು ಇಲ್ಲಿನ ರೈತರು ಬೆಳೆಯುತ್ತಾರೆ.

ನೀರಾವರಿಯಿಂದ ಬೆಳೆದ ಬೆಳೆಗಳು ಒಂದು ಎಕರೆಗೆ

ಶೇಂಗಾ ೪-೫ ಚೀಲಗಳು

ಸೂರ್ಯಪಾನ ೬-೭ ಚೀಲಗಳು ದೇವದುರ್ಗ ತಾಲೂಕಿನ ಒಟ್ಟು ನೀರಾವರಿ ಭೂಮಿ ಶೇಕಡ ೪೦% ರಷ್ಟು ಮತ್ತು ಮಳೆಯನ್ನೇ ಆಧರಿಸಿದ ಭೂಮಿ ಶೇಕಡ ೬೦% ರಷ್ಟು ಆಗಿದೆ.

ಭತ್ತ ೧೦-೧೫ ಚೀಲಗಳು

ಸಜ್ಜೆ ೩-೫ ಚೀಲಗಳು

ಹೆಸರು ೪-೭ ಚೀಲಗಳು

ಜೋಳ ೨-೪ ಚೀಲಗಳು

ಹತ್ತಿ ೪-೫ ಚೀಲಗಳು ಇಲ್ಲಿ ಬೆಳೆಯುತ್ತಾರೆ.

ಇಲ್ಲಿನ ರೈತರು ನೀರಾವರಿಯಿಂದ ಒಂದು ಭಾಗದ ಜನರು ಬಹಳ ಉಪಯೋಗವನ್ನು ಪಡೆಯುತ್ತಾರೆ.

ಮಳೆಯ ಭೂಮಿಯಿಂದ ಬೆಳೆದ ಬೆಳೆಗಳು

ಶೇಂಗಾ ೩-೪

ಸೂರ್ಯಪಾನ ೪-೫

ಸಜ್ಜೆ ೨-೩

ಹೆಸರು ೨-೪

ಜೋಳ ೩-೪

ನವಣೆ ೨-೩ ಚೀಲಗಳು ಇಲ್ಲಿ ಬೆಳೆಯುತ್ತಾರೆ.

ಇಲ್ಲಿನ ರೈತರು ಮಳೆಯನ್ನೇ ಹೆಚ್ಚಾಗಿ ಅವಲಂಬಿಸಿರುವುದರಿಂದ ನೀರಾವರಿಂದ ಹೆಚ್ಚು ಬೆಳೆಗಳನ್ನು ನಿರೀಕ್ಷಿಸಬಹುದಾಗಿದೆ. ಆದರೆ ಮಳೆಯಿಂದ ಬೆಳೆದ ಬೆಳೆಗಳನ್ನು ಅಷ್ಟಾಗಿ ನಿರೀಕ್ಷೆಯನ್ನು ಇಟ್ಟುಕೊಂಡಿರುವುದಿಲ್ಲ.

ನೀರಾವರಿಯಿಂದ ಎರಡು ಬೆಳೆಗಳನ್ನು ಬೆಳೆಯುತ್ತಾರೆ.

೧. ಭತ್ತ, ಜೋಳ, ಶೇಂಗಾ, ತೊಗರಿ, ಕೆಂಪುಜೋಳ ಮುಂತಾದವು ಜೂನ್‌ನಲ್ಲಿ ನೀರಾವರಿಂದ ಬೆಳೆಯುತ್ತಾರೆ.

ಎರಡನೇಯ ಬೆಳೆ ಹತ್ತಿ, ಜೋಳ, ಕಸುಬೆ, ಗೋದಿ, ಕಡಲೆ, ಉರುಳಿ ಇತ್ಯಾದಿ ನವೆಂಬರ್ ತಿಂಗಳಲ್ಲಿ ಬೆಳೆಯುತ್ತಾರೆ.

೨. ಮಳೆಯಿಂದ ಬೆಳೆದು ಬೆಳೆಗಳು

ಕೆಂಪುಜೋಳ, ಹೆಸರು, ನವಣೆ, ತೊಗರಿ ಇತ್ಯಾದಿ ಇವುಗಳು ಮಳೆಯಿಂದ ಬೆಳೆಯುವ ಮೊದಲನೆ ಬೆಳೆಯಾಗಿದೆ. ಕಡಲೆ, ಉರುಳಿ, ಹತ್ತಿ, ಮುಸುಕಿನ ಜೋಳ ಇತ್ಯಾದಿ ಇವು ಅಕ್ಟೋಬರ್‌ನಿಂದ ಬೆಳೆಯುವ ಎರಡನೆಯ ಬೆಳೆಯಾಗಿದೆ.

**ಮಾರುಕಟ್ಟೆ ವ್ಯವಸ್ಥೆ**

ದೇವದುರ್ಗ ತಾಲೂಕಿನಲ್ಲಿ ಎಷ್ಟೋ ವರ್ಷಗಳ ಹಿಂದೆ ೩೬ ಎಕರೆ ಭೂಮಿಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಖರೀದಿ ಮಾಡಿದ್ದರೂ ಅದರ ಅಭಿವೃದ್ಧಿಯಾಗದೆ ದನಗಳ, ಕುರಿಗಳ ಮಾರಾಟದ ಒಂದು ಸಂತೆಯ ಜಾಗವಾಗಿದೆ. ಇತ್ತೀಚೆಗೆ ಕೆಲವೊಂದು ಕಟ್ಟಡಗಳು ಅಲ್ಲಿ ತಲೆ ಎತ್ತಿದ್ದು ಕೃಷಿ ಉತ್ಪನ್ನದ ಯಾವ ಚಟುವಟಿಕೆಗಳು ನಡೆದಿರುವುದಿಲ್ಲವಾಗಿದೆ. ವ್ಯಾಪಾರ ಮಳಿಗೆಗಳನ್ನು ವ್ಯಾಪಾರದ ಉದ್ದೇಶಕ್ಕಾಗಿ ಕಟ್ಟಿಸಲಾಗಿದೆ. ಆದರೆ ಇಲ್ಲಿನ ರೈತರು ತಮ್ಮ ಉತ್ಪನ್ನಗಳನ್ನು ದೂರದ ರಾಯಚೂರು, ಗುಲಬರ್ಗಾ, ಬಳ್ಳಾರಿಯಂತಹ ಜಿಲ್ಲೆಗಳ ಮಾರುಕಟ್ಟೆಗೆ ಸಾಗಿಸುತ್ತಾರೆ. ಜಾಲಹಳ್ಳಿ, ಅರಕೇರಾ, ಗ್ರಾಮಗಳಲ್ಲಿಯೂ ತುಂಬ ಜಾಗವಿದ್ದು ಅವುಗಳು ಕೂಡ ಸಹ ಅಭಿವೃದ್ಧಿ ಕಾಣದೆ ನೆನೆಗುದಿಗೆ ಬಿದ್ದಿವೆ. ಮುಂದಿನ ದಿನದಲ್ಲಿ ನೀರಾವರಿ ಬರುತ್ತಿರುವುದರಿಂದ ತೀವ್ರಗತಿಯಲ್ಲಿ ಮಾರುಕಟ್ಟೆ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಬೇಕಾದ ಅಗತ್ಯವಿದೆ.

**ದೇವದುರ್ಗ ತಾಲೂಕಿನ ಕೃಷಿ ಕೂಲಿಕಾರರಿಗೆ ವರದಾನವಾಗುವ ನಾರಯಣಪುರ ಬಲದಂಡೆ ಕಾಲುವೆ**

ದೇವದುರ್ಗ ತೂಲೂಕು ಸದಾಬರಗಾಲದ ಕರಿನೆರಳಿನಲ್ಲಿ ಬದುಕುತ್ತಿರುವ ಇಲ್ಲಿನ ಕೃಷಿಕೂಲಿಕಾರರು ಬಡತನದ ಹಿಡಿತದಿಂದ ಹೊರಬರುವ ಕಾಲ ಸನಿಹವಾಗಿದೆ. ನಾರಯಣಪುರ ಬಲದಂಡೆ ಕಾಲುವೆ ಕೃಷಿಕೂಲಿಕಾರಗೆ ವರವಾಗಿ ಬರಲಿದೆ. ಈ ತಾಲೂಕಿನಲ್ಲಿ ಎಂದೋ ಈ ಕಾಲುವೆ ಆರಂಭವಾಗಿ ಕೃಷಿಕೂಲಿಕಾರರ ರೈತರ ಹೊಲಗಳು ಹಸಿರಾಗಿ ಶ್ರೀಮಂತ ತಾಲೂಕವಾಗಬೇಕಿತ್ತು ಆದರೆ ರಾಜಕೀಯ ನಾಯಕರ ನಿರ್ಲಕ್ಷತೆಯಿಂದ ಇಲ್ಲಿಯವರೆಗೆ ಬಂದಿದಲ್ಲ. ಆದರೆ ಎಚ್.ಡಿ.ದೇವೇಗೌಡರ ಆಡಳಿತದ ಅವಧಿಯಲ್ಲಿ ಕೊನೆಗೂ ಬಲದಂಡೆ ಕಾಲುವೆ ಬಂದಿದ್ದು ದೇವದುರ್ಗ ತಾಲೂಕಿನ ರೈತರಿಗೆ ಸಂತೋಷವನ್ನು ತಂದಿದೆ ಎಂದು ಹೇಳಬಹುದು.[೪]

**ವಲಸೆ**

ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುವುದು ಸಾಮಾನ್ಯ ಸಂಗತಿಯಾಗಿದೆ. ಮಾನವ ಭೂಮಿಯ ಮೇಲೆ ಶಾಶ್ವತವಾಗಿ ನೆಲೆಸಲು ಆಹಾರ ಹುಡುಕುವ ಹಂತದಿಂದ ಒಕ್ಕಲುತನ

[illegible]

ಹಂತದವರೆಗೆ ವಲಸೆಯಲ್ಲಿ ತೊಡಗಿದ್ದು ಸಾರ್ವತ್ರಿಕವಾಗಿದೆ. ಎಲ್ಲಾ ಕಾಲಗಳಲ್ಲಿಯೂ ಎಲ್ಲಾ ದೇಶಗಳಲ್ಲಿಯೂ ಕಂಡು ಬರುತ್ತಿದ್ದು ಇದು ಮಾನವನಿಗೆ ಮಾತ್ರ ಸಿಮೀತವಾಗಿಲ್ಲ, ಪ್ರಾಣಿಗಳು ಪ್ರತಿಕೂಲವಾದ ವಾತವರಣವನ್ನು ಎದುರಿಸಲಾಗದೇ ಆಹಾರ ಹುಡಕಲು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುತ್ತವೆ. ಅದೇ ರೀತಿಯಾಗಿ ಕೃಷಿಕೂಲಿಕಾರರು ತಮ್ಮ ಸ್ಥಳದಿಂದ ಬೇರೊಂದು ಸ್ಥಳಕ್ಕೆ ವಲಸೆ ಹೋಗುತ್ತಾರೆ. ಕೃಷಿಕೂಲಿಕಾರರ ಆರ್ಥಿಕ ಕೊರತೆಗೆ ವಲಸೆ ತಳ್ಳುತ್ತದೆ. ಉತ್ತಮ ಆರ್ಥಿಕ ಅವಕಾಶಗಳು ದೊರೆಯುವ ಪ್ರದೇಶಕ್ಕೆ ಕೃಷಿಕೂಲಿಕಾರರು ವಲಸೆ ಹೋಗುತ್ತಾರೆ. ಕೂಲಿಕಾರರು ಹೆಚ್ಚಾಗಿ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಕ್ಕೆ ವಲಸೆ ಹೋಗುವುದನ್ನು ಕಾಣುತ್ತೇವೆ. ಗ್ರಾಮೀಣ ಆರ್ಥಿಕ ಪರಿಸ್ಥಿತಿ ಜನರ ಬೇಕು ಬೇಡಿಕೆಗಳನ್ನು ಈಡೇರಿಸುವಲ್ಲಿ ವಿಫಲವಾಗಿರುವುದರಿಂದ ಹಾಗೂ ಕೃಷಿಕೂಲಿಯಲ್ಲಿ ಕಡಿಮೆ ಆದಾಯ ದೊರಕದೆ ಇರುವುದು ವಲಸೆಗೆ ಕಾರಣವಾಗಿದೆ.

೧೮ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಸಂಭವಿಸಿದ ಕೈಗಾರಿಕಾ ಕ್ರಾಂತಿಯು ಜಗತ್ತಿನಾದ್ಯಂತ ತೀವ್ರವಾಗಿ ವ್ಯಾಪಿಸಿ ಬಂಡವಾಳಶಾಹಿಗಳು ಬೆಳೆಯಲು ಕಾರಣವಾಯಿತು. ನಗರಗಳು ಔದ್ಯೋಗಿಕ ಕೇಂದ್ರಗಳಾಗಿ ಪರಿಣಮಿಸಿ ಉದ್ಯೋಗದ ಅವಕಾಶಗಳು ಹೆಚ್ಚಾಗಿರುವುದರಿಂದ ಉದ್ಯೋಗ ಪಡೆಯಲು ಜನರು ಗ್ರಾಮಗಳಿಂದ ನಗರಗಳಿಗೆ ವಲಸೆ ಹೋಗುತ್ತಾರೆ. ವಲಸೆ ಹೋಗುವುದರಿಂದ ವ್ಯಕ್ತಿ ಆರ್ಥಿಕವಾಗಿ ಸುಧಾರಿಸಬಹುದು ಆದರೆ ಇನ್ನೊಂದು ಕಡೆ ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳು ಕಂಡುಬರುತ್ತವೆ.

## ಗ್ರಾಮದಿಂದ ನಗರಕ್ಕೆ ವಲಸೆ

ಔದ್ಯೋಗಿಕರಣದ ಪ್ರಭಾವದಿಂದ ನಗರಗಳಲ್ಲಿ ಉದ್ಯೋಗಾವಕಾಶಗಳು ಸೃಷ್ಠಿಯಾಗಿದ್ದರಿಂದ ಉದ್ಯೋಗ ಪಡೆಯಲು ಕೃಷಿಕೂಲಿಕಾರರು ಗ್ರಾಮಗಳಿಂದ ನಗರಗಳಿಗೆ ವಲಸೆ ಹೋಗುತ್ತಾರೆ. ವ್ಯವಸಾಯದಿಂದ ಬರುವ ಕಡಿಮೆ ಆದಾಯ, ಗೃಹಕೈಗಾರಿಕೆಗಳ ಕ್ಷೀಣಿಸುವಿಕೆ, ನಿರುದ್ಯೋಗ ಈ ಬಗೆಯ ವಲಸೆಗೆ ಪ್ರಮುಖ ಕಾರಣಗಳಾಗಿವೆ. ಕೆಲವರು ಶಿಕ್ಷಣ ಪಡೆಯಲು ವ್ಯಾಪಾರ ಮನೋರಂಜನೆಗಾಗಿ ಗ್ರಾಮಗಳಿಂದ ನಗರಗಳಿಗೆ ವಲಸೆ ಹೋಗುತ್ತಾರೆ. ಹೀಗೆ ಗ್ರಾಮಗಳಿಂದ ನಡೆಯುವ ವಲಸೆಯು ನೈಸರ್ಗಿಕ ಪ್ರಕ್ರಿಯೆಯಾಗಿದೆ.

## ಕೃಷಿಕೂಲಿಕಾರರ ಗ್ರಾಮ ನಗರ ವಲಸೆ

ಗ್ರಾಮ ನಗರ ವಲಸೆಯು ಸಾರ್ವತ್ರಿಕ ಜನಸಂಖ್ಯಾ ಪ್ರಕ್ರಿಯೆಯಾಗಿದೆ. ಇಂಥಹ ವಲಸೆಯು ಎಲ್ಲಾ ಕಾಲದಲ್ಲಿಯೂ ಎಲ್ಲಾ ಸಮುದಾಯಗಳಲ್ಲಿಯೂ ನಡೆಯುತ್ತದೆ. ಆದರೆ ವಲಸೆಯ ವೇಗ ಮತ್ತು ವ್ಯಾಪ್ತಿಯ ಸ್ಥಳದಿಂದ ಸ್ಥಳಕ್ಕೆ ಕಾಲದಿಂದ ಕಾಲಕ್ಕೆ ಬೇರೆ ಬೇರೆಯಾಗಿರುತ್ತದೆ.

ಗ್ರಾಮೀಣ ಪ್ರದೇಶದಿಂದ ಕೂಲಿಕಾರರು ನಗರ ಪ್ರದೇಶಗಳಿಗೆ ಹರಿದು ಹೋಗಲು ಗ್ರಾಮ ಮತ್ತು ನಗರ ಪ್ರದೇಶದ ಜನಸಂಖ್ಯೆಯ ಫಲಿತತೆಯ ಜೈವಿಕ ಸಾಮಾಜಿಕ ಸಂಗತಿಯಾಗಿದ್ದು, ಜನರು ಮಕ್ಕಳನ್ನು

ಪಡೆಯುವುದು ಅವರ ಆರ್ಥಿಕ ಸಾಮಾಜಿಕ ಅಂಶಗಳ ಮೇಲೆ ಅವಲಂಬಿಸಿದೆ. ನಗರ ಪ್ರದೇಶದ ಫಲಿತತೆಯು ಯಾವಗಲೂ ಕಡಿಮೆ ಇರುತ್ತದೆ. ನಗರವಾಸಿಗಳು ಸದಾಕಾಲ ತಮ್ಮ ಸಾಮಾಜಿಕ ಅಂತಸ್ಥನ್ನು ಹೆಚ್ಚಿಸಿಕೊಳ್ಳಲು ಹವಣಿಕೆಯಲ್ಲಿರುತ್ತಾರೆ. ಈ ಸತತ ಹವಣಿಕೆಗೆ 'ಇಲಿಯೋಟ' ಎನ್ನುತ್ತಾರೆ. ಇಂತಹ ಇಲಿಯೋಟದಲ್ಲಿ ತೊಡಗಿದವರಿಗೆ ಅತೀಕಡಿಮೆ ಸಂಖ್ಯೆಯಲ್ಲಿ ಮಕ್ಕಳನ್ನು ಹೆತ್ತು ಚಿಕ್ಕ ಕುಟುಂಬವನ್ನು ಹೊಂದುವ ಆಸೆ. ಏಕೆಂದರೆ ಕುಟುಂಬವು ದೊಡ್ಡದಾದಂತೆ ಕುಂಠಿತಗೊಳ್ಳುತ್ತದೆ. ಆದರಿಂದ ನಗರವಾಸಿಗಳ ಹೆಚ್ಚಿನ ಪ್ರಮಾಣದ ಮಕ್ಕಳನ್ನು ಹೇರಲು ಇಚ್ಛಿಸುವುದಿಲ್ಲ. ಹೀಗಾಗಿ ಎಲ್ಲ ನಗರಗಳಲ್ಲಿ ಜನಸಂಖ್ಯೆಯ ಕೊರತೆ ಇರುತ್ತದೆ. ಆದ್ದರಿಂದ ಜನಸಂಖ್ಯಾಶಾಸ್ತ್ರಜ್ಞರು No city can ever rplenish itself ಅಂದರೆ 'ಯಾವುದೇ ನಗರವು ತನನ್ನು ತಾನೇ ಮರುಭರಿಸಲಾರದು' ಎನ್ನುತ್ತಾರೆ. ಆದರೆ ಗ್ರಾಮೀಣ ಪ್ರದೇಶದ ಪರಿಸ್ಥಿತಿಯು ಸಂಪೂರ್ಣ ಬೇರೆಯಾಗಿರುತ್ತದೆ. ಈ ಪ್ರದೇಶದಲ್ಲಿ ಇಲಿಯೋಟ ಕಾಣದು ಗ್ರಾಮೀಣ ಪ್ರದೇಶದ ಫಲಿತತೆಯ ಹೆಚ್ಚಾಗಿರುತ್ತಾರೆ. ಕಡಿಮೆ ಮಹತ್ವಕಾಂಕ್ಷಿಗಳಾದ ಗ್ರಾಮಿಣ ಜನರು ತಮ್ಮ ಅವಶ್ಯಕತೆಗಿಂತ ಹೆಚ್ಚಿನ ಮಕ್ಕಳನ್ನು ಪಡೆಯುತ್ತಾರೆ. ಹೆಚ್ಚು ಮಹತ್ವಾಂಕಾಕ್ಷಿಗಳಾದ ನಗರ ಪ್ರದೇಶದ ಜನರು ಕಡಿಮೆ ಮಕ್ಕಳನ್ನು ಪಡೆಯುತ್ತಾರೆ.

ದೇವದುರ್ಗ ತಾಲೂಕು ಹಲವು ದೃಷ್ಟಿಯಿಂದ ರಾಜ್ಯದಲ್ಲಿ ತನ್ನದೇ ಆದ ಅನನ್ಯತೆಯನ್ನು ಕಾಪಾಡಿಕೊಂಡು ಬಂದಿದೆ. ಆದರೆ ರಾಜಕೀಯವಾಗಿ, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ದೇವದುರ್ಗ ಅಕಾಲಿಕ ಮಳೆಯಿಂದ ಆರ್ಥಿಕ ಸಂಪನ್ಮೂಲಗಳ ಕೊರತೆಯಿಂದ ಸದಾ ಬರಗಾಲವನ್ನು ಅನುಭವಿಸುತ್ತಾ ಬಂದಿದೆ. ಮಳೆಯನ್ನೇ ನಂಬಿ ಬದುಕುತ್ತಿದ್ದ ಇಲ್ಲಿಯ ಜನರು ಬದುಕು ತುಂಬಾ ಶೋಚನೀಯವಾಗಿದೆ. ತುಂಗಭದ್ರಾ ಕಾಲುವೆ ಹಾಗೂ ಕೃಷ್ಣ ನಂದಿಯಿಂದ ಅಲ್ಪಸ್ವಲ್ಪ ನೀರಾವರಿಯನ್ನು ಪಡೆದ ಇಲ್ಲಿಯ ಜನ ಬರಗಾಲಕ್ಕೆ ತುತ್ತಾಗುತ್ತ ಬಂದಿದ್ದಾರೆ. ಇದರಿಂದ ತಮ್ಮ ಬದುಕನ್ನು ಕಟ್ಟಲಿಕ್ಕೆ ಹವಣಿಸುತ್ತಿದ್ದ ದುಡಿಮೆಗಾಗಿ ಬೇರೊಂದು ಸ್ಥಳಗಳಿಗೆ ಸಹಜವಾಗಿ ಹೋಗಲೇ ಬೇಕಾಗುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಿಗೆ ವಲಸೆ ಹೋಗಿ ತಮ್ಮ ಬದುಕನ್ನು ಸಾಗಿಸುವ ಹಲವು ಕೃಷಿಕೂಲಿಕಾರರ ಕುಟುಂಬಗಳು ಇಂದಿಗೂ ಸಹ ಕಂಡುಬರುತ್ತವೆ. ಗಂಡ, ಹೆಂಡತಿ, ಮಕ್ಕಳು ಎಲ್ಲರೂ ಕೂಲಿಕೆಲಸದ ದುಡಿಮೆಗಾಗಿ ಚಿಕ್ಕಮಗಳೂರು, ಉಡುಪಿ, ಹಾಸನ, ಮಂಗಳೂರುಗಳಂಥ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುವರು. ಕಾರಣ ಇಲ್ಲಿ ಅತಿ ಕಡಿಮೆ ಮಳೆಯಿಂದಾಗಿ ದಟ್ಟದಾರಿದ್ರ್ಯದ ಬದುಕನ್ನು ಅನುಭವಿಸುವ ದೇವದುರ್ಗ ತಾಲ್ಲೂಕಿನ ಜನರು ಸಹಜವಾಗಿ ಮತ್ತೊಂದೆಡೆ ಹೋಗಬೇಕಾಗಿರುತ್ತದೆ. ಇದರಿಂದ ಮಕ್ಕಳ ಶಿಕ್ಷಣ ಕುಂಠಿತವಾಗಿ ಸಹಜವಾಗಿಯೇ ಕಲಿಕೆಯಲ್ಲಿ ಹಿಂದುಳಿಯಬೇಕಾಗಿದೆ. ಊರಿಂದ ಊರಿಗೆ ವಲಸೆ ಹೋಗುವ ಇಂಥ ಪ್ರದೇಶಗಳಲ್ಲಿ ಸರಕಾರ ಹೆಚ್ಚು ವಸತಿ ಶಾಲೆಗಳನ್ನು ತೆರೆದರೆ ಇಲ್ಲಿ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸಲು ಸಾಧ್ಯತೆಗಳಿವೆ.

ಸರಕಾರ ಹಲವು ಯೋಜನೆಗಳನ್ನು ರೂಪಿಸುತ್ತದೆ. ಆದರೆ ಅವುಗಳು ಸರಿಯಾಗಿ ಜನಗಳಿಗೆ ತಲುಪುವಲ್ಲಿ ವಿಫಲವಾಗಿದೆ. ಉದ್ಯೋಗ ಖಾತ್ರಿಯೋಜನೆ, ಕೂಲಿಗಾಗಿಕಾಳು ಹೀಗೆ ಹಲವಾರು ಯೊಜನೆಗಳು ಕೇವಲ ಯೋಜನೆಗಳಾಗಿಯೇ ಉಳಿದಿವೆ ಹೊರತು ಕಾರ್ಯರೂಪಕ್ಕೆ ಬರುವಲ್ಲಿ ಸಂಪೂರ್ಣ ಯಶಸ್ಸು ಕಂಡಿಲ್ಲ ಇವುಗಳಿಂದ ಬೇಸತ್ತು ಇಲ್ಲಿಯ ಕೂಲಿಕಾರರು ದುಡಿಯಲ್ಲಿಕ್ಕೆ ಬೇರೊಂದು ಪ್ರದೇಶಗಳಿಗೆ ಸಹಜವಾಗಿ ಹೋಗಲಾರಂಭಿಸಿದ್ದಾರೆ. ಕುಟುಂಬ ಸಮೇತರಾಗಿ ಹೋದ ಇವರಲ್ಲಿ ಪುರುಷರಿಗಿಂತ ಮಹಿಳಾ ಕೂಲಿಕಾರರೇ ಹೆಚ್ಚು ಕಷ್ಟಪಡುವವರಾಗಿದ್ದಾರೆ. ಕುಟುಂಬದ ನಿರ್ವಹಣೆಯ ಜೊತೆಗೆ ಗಂಡನ ಜೊತೆ ಸರಿಸಮಾನವಾಗಿ ಕೆಲಸ ಮಾಡಬೇಕಾಗುತ್ತದೆ. ಹೀಗಾಗಿ ಇವರಿಗೆ ಬಿಡುವೆ ಇಲ್ಲದಂತಾಗಿದೆ.

ದೇವದುರ್ಗ ತಾಲೂಕಿನ ಸ್ತ್ರೀ ಪುರುಷರ ಸಂಖ್ಯೆಯಲ್ಲಿ ದೊಡ್ಡ ವ್ಯತ್ಯಾಸವೇನು ಇಲ್ಲ. ಆದರೆ ಅಕ್ಷರ ಜ್ಞಾನದ ಸಂಖ್ಯೆಯ ದೃಷ್ಟಿಯಲ್ಲಿ ಮಹಿಳಾ ಅಕ್ಷರಸ್ಥರು ತುಂಬಾ ಕಡಿಮೆಯಿದ್ದಾರೆ. ಪುರುಷರಲ್ಲಿ ಶೇ ೪೦. ೯೧ ಇದ್ದರೆ, ಸ್ತ್ರೀಯರಲ್ಲಿ ಶೇಕಡ ೧೮.೧೪ರಷ್ಟಿದೆ. ಸ್ವತಂತ್ರ್ಯ ದೊರೆತ ಮೇಲೂ ಆದ ಸುಧಾರಣೆಯಿದ್ದು ಹಲವು ಯೋಜನೆ ಕಡ್ಡಾಯ ಶಿಕ್ಷಣ ಪದ್ಧತಿ ಜಾರಿಗೆ ಬಂದ ಮೇಲು ಆದ ಬದಲಾವಣೆಯಾಗಿವೆ. ಹೀಗಾಗಲಿಕ್ಕೆ ಮುಖ್ಯ ಕಾರಣವೇನೆಂದರೆ ಹೆಣ್ಣು ಮಕ್ಕಳಿಗೆ ಎಷ್ಟು ಕಲಿಸಿದರೇನು ಎನ್ನುವ ಉದಾಸೀನತೆ ಇಲ್ಲದೆ ಗಂಡುಮಕ್ಕಳ ಓದಿಗೆ ಅಥವಾ ಖರ್ಚಿಗೆ ಅಡ್ಡಿಯಾಗದಿದ್ದಾಗ ಮಾತ್ರ ಅಕ್ಷರಸ್ಥರಾದವರಲ್ಲಿ ಬಹುತೇಕ ಜನರು ಒಂದೇ ವರ್ಗದ ಮೂಲದಿಂದ ಬಂದವರಾಗಿದ್ದಾರೆ. ಮೀಸಲಾತಿ ಪದ್ಧತಿಯಿಂದ ಸಂಖ್ಯೆಯಲ್ಲಿ ಸ್ವಲ್ಪ ವ್ಯತ್ಯಾಸವಾಗಿರುವುದನ್ನು ಕಾಣುತ್ತೇವೆ. ೧೯೯೮-೯೯ರ ಸಮೀಕ್ಷೆಯ ವರದಿಯನ್ನು ನೋಡಿದಾಗ ಪ್ರೌಢಶಾಲೆ, ಪ್ರಾಥಮಿಕ ಶಾಲೆಗಳ ಸಂಖ್ಯೆ ತುಂಬಾ ಕಡಿಮೆಯಿರುವುದು ಕಂಡುಬರುತ್ತವೆ. ಜಿಲ್ಲಾ ಪಂಚಾಯತ್ ಈ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗೆ ಬಗೆಹರಿಸಿದರೂ ಕೂಡ ಶಾಲೆಗಳ ಸಂಖ್ಯೆ ಹೆಚ್ಚಾಗಿರಬೇಕಾಗಿದೆ. ಹೆಣ್ಣು ಮಕ್ಕಳನ್ನು ಹೊರಗೆ ಕಳುಹಿಸಿ ಓದಿಸುವಷ್ಟು ತಂದೆ ತಾಯಿ ಧೈರ್ಯಶಾಲಿಗಳಾಗಿಲ್ಲ ಬಾಹ್ಯ ಸೌಲಭ್ಯಗಳ ಕೊರತೆಯಿದ್ದಾಗಲೂ ಸ್ತ್ರೀ ಶಿಕ್ಷಣ ಹಿಂದುಳಿಯುವ ಸಾಧ್ಯತೆಯಿರುತ್ತದೆ. "೧. ನಾನು ಕ್ಷೇತ್ರ ಕಾರ್ಯಕೈಗೊಂಡ ಹಿನ್ನಲೆಯಲ್ಲಿ ದೇವದುರ್ಗ, ಜಾಲಹಳ್ಳಿ, ಗಬ್ಬೂರು, ಅರಕೇರ ಮುಂತಾದ ಊರುಗಳ ಗ್ರಾಮಪಂಚಾಯತಿಗಳಿಗೆ ಭೇಟಿ ನೀಡಿ ಸಮೀಕ್ಷಿಸಿದಾಗ ಸರಕಾರದಿಂದ ಬರುವ ಯೋಜನೆಗಳು ಇಲ್ಲಿಯ ಜನರಿಗೆ ಸಮರ್ಪಕವಾಗಿ ಲಭಿಸುವಲ್ಲಿ ವಿಫಲವಾಗಿವೆ. ಅಲ್ಲದೇ ಇಲ್ಲಿ ಸತತವಾಗಿ ಕೈಕೊಡುವ ಮಳೆಯಿಂದ ಇಲ್ಲಿಯ ಜನತೆ ತಮ್ಮ ಬಡತನದ ನೀಗಿಸಿಕೊಳ್ಳುವಲ್ಲಿ ವಲಸೆ ಹೋಗುವುದು ಅನಿವಾರ್ಯವಾಗಿದೆ. ಬೇರೆ ಯಾವುದೇ ಆದಾಯದ ಮೂಲವಿಲ್ಲದೇ ಕಡು ಬಡತನದಿಂದಲೇ ಜೀವಿಸುವ ಈ ತಾಲೂಕಿನಲ್ಲಿ ಅನಕ್ಷರಸ್ಥ ದುಡಿಯುವ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ಅನಕ್ಷರಸ್ಥ ಮಹಿಳೆಯರ ಸಮಸ್ಯೆ ಒಂದು ತೆರನಾದರೆ ಅನಕ್ಷರಸ್ಥ ಮಹಿಳೆಯರದು

ಮತ್ತೊಂದು ತರ. ಪುರುಷನಷ್ಟೇ ಸಮನಾಗಿ ದುಡಿದರೂ ಕೂಲಿಯಲ್ಲಿ ಮಾತ್ರ ತಾರತಮ್ಯ. ಆಕೆಯ ದೈಹಿಕ ದುರ್ಬಲತೆ ಆಧಾರದ ಮೇಲೆಯೇ ಈ ವ್ಯತ್ಯಾಸ ಸರಕಾರಿ ಉದ್ಯೋಗದಲ್ಲಿರುವ ಮಹಿಳೆಯರಿಗೆ ಇರುವ ಯಾವ ವಿಶೇಷ ಸೌಲಭ್ಯಗಳು ಕಾರ್ಮಿಕ ಮಹಿಳೆಯರಿಗೆ ಇರುವುದಿಲ್ಲ. ತುಂಬಿದ ಬಸುರಿ ಬಾಣಂತಿಯರು ಹೊಟ್ಟೆಪಾಡಿಗಾಗಿ ಕಷ್ಟಪಡುವ ಚಿತ್ರಗಳು ಇಲ್ಲಿ ಸಾಮಾನ್ಯ. ೨. ದೇವದುರ್ಗ ತಾಲೂಕಿನಲ್ಲಿ ಗ್ರಾಮಪಂಚಾಯಾಯಿತಿ ತಾಲೂಕು ಪಂಚಾಯಿತಿಗಳಲ್ಲಿ ಸದಸ್ಯರಾದವರು ಸಾಮಾನ್ಯ ಜನತೆ ಕಡೆಗೆ ಸರಿಯಾಗಿ ಕಾಳಜಿ ವಹಿಸುವಲ್ಲಿ ವಿಫಲರಾಗಿದ್ದಾರೆ. ವಿಧವವೇತನ, ಪಿಂಚಣಿ ಅಂಗವಿಕಲರಿಗೆ ಕೊಡುವ ಮಾಸಾಶನ ಮುಂತಾದ ಸರಕಾರದ ಸೌಲಭ್ಯಗಳು ಇಲ್ಲಿಯೇ ಜನರಿಗೆ ಇಲ್ಲದಂತಾಗಿದೆ. ಮೇಲೆ ತಿಳಿದ ಸದಸ್ಯರ ದರ್ಪ ಹಾಗೂ ದಬ್ಬಾಳಿಕೆಯಿಂದ ಸರಕಾರದ ಸೌಲಭ್ಯಗಳು ಇವರಿಗೆ ಹಾಗೂ ಇವರ ಸಂಬಂಧಿಕರ ಪಾಲಾಗಿವೆ. ಹೊರತು, ಕಡುಬಡತನದಿಂದ ಬದುಕುತ್ತಿರುವ ಸಾಮಾನ್ಯ ಜನರ ಸ್ಥಿತಿಮಾತ್ರ ತುಂಬಾ ಚಿಂತಾಜನಕವಾಗಿದೆ. ನಿರ್ಗತಿಕರಾಗಿ ನಿರ್ವಸತಿ ಹೀನಾಯವಾಗಿ ಎಷ್ಟೋ ಕುಟುಂಬಗಳು ಬೇರೊಂದು ಕಡೆ ವಲಸೆ ಹೋಗಿ ತಮ್ಮ ಉಪಜೀವನ ನಡೆಸುತ್ತಿದ್ದಾರೆ.

## ದೇವದುರ್ಗ ಸಮೂಹ ಸಂಸ್ಥೆ ಪರಿಚಯ

ಸಮೂಹ ಎಂದರೆ 'ಸಂಘಟಿತ ಸಾಮಾಜಿಕ ಗುಂಪು' ಅಥವಾ 'ಸಮಾಜ' ಎಂದು ಈ ಅರ್ಥವು ಸಮೂಹ ಸಂಸ್ಥೆಯ ಅಭಿವೃದ್ಧಿ ಪರಿಕಲ್ಪನೆ ಹಾಗೂ ನಂಬಿಕೆಯನ್ನು ಪ್ರತಿನಿಧಿಸುತ್ತದೆ. ಯಾಕೆಂದರೆ ಸಾಮಾಜಿಕ ಪ್ರಕ್ರಿಯೆಯಿಂದ ಮಾತ್ರ ನಿರಂತರ ಅಭಿವೃದ್ಧಿಯ ಪ್ರಕ್ರಿಯೆಯು ಜೀವಂತವಾಗಿರಲು ಸಾಧ್ಯ ಎಂಬುದು ಸಮೂಹ ಸಂಸ್ಥೆಯ ಬಲವಾದ ನಂಬಿಕೆಯಾಗಿದೆ.

## ದೇವದುರ್ಗವೇ ಏಕೆ?

೧೯೮೭ರಲ್ಲಿ ಸಮೂಹ ಸಂಸ್ಥೆಯನ್ನು ಸಾಮಾಜಿಕ ಅಭಿವೃದ್ಧಿ ರಂಗದಲ್ಲಿ ಆಸಕ್ತರಾದ ವ್ಯಕ್ತಿಗಳ ಗುಂಪು ಆರಂಭಿಸಿತು.

ಸಮೂಹ ಒಂದು ಸರ್ಕಾರೇತರ ಅಭಿವೃದ್ಧಿ ಸಂಸ್ಥೆಯಾಗಿದ್ದು, ರಾಯಚೂರು, ಕೊಪ್ಪಳ, ಉತ್ತರಕನ್ನಡ ಮತ್ತು ಬೆಂಗಳೂರು ನಗರಗಳಲ್ಲಿ ಕೆಲಸ ನಿರ್ವಹಿಸುತ್ತಿದೆ. ಸಂಸ್ಥೆಯ ಪ್ರಮುಖ ಗುರಿ ಸಂಕಷ್ಟದಲ್ಲಿರುವ ಮಕ್ಕಳು, ಮಹಿಳೆಯರು ಅಂಗವಿಕಲರು ಮಳೆ, ನೀರನ್ನು ಆಶ್ರಯಿಸಿ ಬದುಕುತ್ತಿರುವ ಜನ, HIVಗೆ ತುತ್ತಾದ, ತುತ್ತಾಗಬಹುದಾದ ಜನ ಮತ್ತು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರ ಜೀವನ ಮಟ್ಟವನ್ನು ಸುಧಾರಿಸಬಹುದಾಗಿದೆ.

ಸಮೂಹ ಸಂಸ್ಥೆಯು ತನ್ನ ಮೊಟ್ಟ ಮೊದಲ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ೧೯೮೭ರಲ್ಲಿ ದೇವದುರ್ಗ ತಾಲೂಕಿನ ಜಾಲಹಳ್ಳಿ ಹೋಬಳಿಯ ಸುತ್ತಮುತ್ತಲಿನ ೨೬ ಗ್ರಾಮಗಳಲ್ಲಿ ಪ್ರಾರಂಭಿಸಿತು. ಯೋಜನೆಯ ಪ್ರಮುಖ ಕಾರ್ಯಕ್ರಮಗಳೆಂದರೆ ಗ್ರಾಮ ಸಂಸ್ಥೆಗಳ ಸ್ಥಾಪನೆ, ನೂತನ

ಮಾದರಿ ಸಹಾಯಕ ಶಾಲೆಗಳು, ಸಮುದಾಯ ಆರೋಗ್ಯ ಕಾರ್ಯಕ್ರಮ, ಅಂಗವಿಕಲರ ಪುನಶ್ಚೇತನ, ಕಾರ್ಯಕ್ರಮ, ಕೃಷಿ, ತೋಟಗಾರಿಕೆ, ಅಭಿವೃದ್ಧಿ ಹೈನುಗಾರಿಕೆ ಅಭಿವೃದ್ಧಿ ಚಟುವಟಿಕೆಗಳನ್ನು ಯಜನೆಯ ಅಂತಿಮ ಭಾಗದಲ್ಲಿ ೧೯ ಯೋಜನಾ ಗ್ರಾಮಗಳು ಒಂದುಗೂಡಿ ತಮ್ಮದೇ ಆದಂತಹ ಗ್ರಾಮೀಣ ಅಭಿವೃದ್ಧಿ ಯೋಜನೆಗಳನು ಸ್ಥಾಪಿಸಿಕೊಂಡಿರುತ್ತಾರೆ. ಇದೇ ರೀತಿಯ ಸಂಸ್ಥೆಯ ದೇವದುರ್ಗ ಸುತ್ತಮುತ್ತಲಿನ ೫೦ ಹಳ್ಳಿಗಳಲ್ಲಿ ೧೯೮೭ರಿಂದ ಕೆಲವು ಹಳ್ಳಿಗಳಲ್ಲಿ ಮತ್ತು ೧೯೯೬ರಿಂದ ಮಿಕ್ಕ ಹಳ್ಳಿಗಳಲ್ಲಿ ಸುಮಾರು ೬೦೦೦ ಕುಟುಂಬಗಳೊಟ್ಟಿಗೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಾ ಬಂದಿದೆ.

ಸಮುದಾಯ ಮೇಲ್ವಿಚಾರಣೆ ಯೋಜನೆಯು ಕರ್ನಾಟಕ ಸರಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಯುನಿಸೆಫ್ ಮತ್ತು ಸಮೂಹವು ಜಂಟಿಯಾಗಿ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ದೇವದುರ್ಗ ತಾಲೂಕಿನಲ್ಲಿ ಅನುಷ್ಠಾನ ಮಾಡಲಾಗುತ್ತಿದೆ. ಈ ತಾಲೂಕಿನಲ್ಲಿ ಶಿಕ್ಷಣ, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆಯನ್ನು ರೂಪಿಸಲು ಮತ್ತು ಮೇಲ್ವಿಚಾರಣೆ ಮಾಡುವ ಪ್ರಕ್ರಿಯೆಯಾಗಿದೆ.”

ಹಲವು ದೃಷ್ಟಿಯಿಂದ ದೇವದುರ್ಗ ತಾಲ್ಲೂಕನ್ನು ಪರಿಗಣಿಸಿದಾಗ ಇಲ್ಲಿಯ ಭೌಗೋಳಕ ಪರಿಸರವು ತುಂಬ ವೈವಿದ್ಯಮಯದಿಂದ ಕೂಡಿದ್ದಾಗಿದೆ. ಉರಿಬಿಸಿಲಿನಿಂದ ಕೂಡಿದ ಇಲ್ಲಿ ಬೇಸಿಗೆ ಕಾಲ, ಕಡು ಬೇಸಿಗೆ ಎಂಬ ಎರಡು ಬೇಸಿಗೆ ಕಾಲಗಳು ಕಂಡು ಬರುತ್ತವೆ. ಕಡಿಮೆ ಮಳೆಬೀಳುವುದರಿಂದ ಇಲ್ಲಿ ಸಹಜವಾಗಿಯೇ ಈ ಪ್ರದೇಶವು ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತ ಬಂದಿದೆ. ಹೀಗಾಗಿ ಇಲ್ಲಿಯ ಜನತೆ ತಮ್ಮ ಜೀವನ ನಿರ್ವಹಣೆಗಾಗಿ ಬೇರೊಂದು ಕಡೆ ಒಲಸೆ ಹೋಗುವುದು ಸಹಜವಾಗಿ ಕಂಡು ಬರುತ್ತವೆ. ಫಲವತ್ತಾದ ಮಣ್ಣಿದ್ದರು ಇಲ್ಲಿಯ ರೈತರಿಗೆ ಮಳೆರಾಯನ ಕೃಪೆ ಸಮುದಾಯದವರಿಂದ ಒಳಗೊಂಡಿದೆ. ಹೀಗಾಗಿ ವಿಶಿಷ್ಟ ರೀತಿಯ ಕೆಲವೊಂದು ಆಚರಣಾ ಕ್ರಮಗಳು ಸಹ ಇಲ್ಲಿ ಕಂಡು ಬರುತ್ತವೆ. ಅಕ್ಷರ ಜ್ಞಾನದಿಂದ ತುಂಬಾ ದೂರನೇ ಇರುವ ಈ ತಾಲೂಕು ಶೈಕ್ಷಣಿಕವಾಗಿ ತುಂಬ ಹಿಂದುಳಿದಿದೆ. ಅಲ್ಲದೆ ಆರ್ಥಿಕವಾಗಿ, ರಾಜಕೀಯವಾಗಿ ಹಾಗೂ ಸಾಮಾಜಿಕವಾಗಿ ಸಹ ಹಿನ್ನಡೆಯನ್ನು ಹೊಂದಿದೆ. ಒಟ್ಟಾರೆ ಅನೇಕ ರೀತಿಯ ಅಂಧಕಾರದಲ್ಲಿ ಬಳಲುತ್ತಿರುವ ಇಲ್ಲಿಯ ಜನತೆಗೆ ಸರ್ಕಾರದ ಯೋಜನೆಗಳು ಸಹ ಸರಿಯಾದ ರೀತಿಯಲ್ಲಿ ಬಳಕೆಯಾಗುವಲ್ಲಿ ವಿಫಲವಾಗಿವೆ.

## ಸಮೂಹ ಸಂಸ್ಥೆಯ ಕಾರ್ಯಕ್ರಮಗಳು

| ಕ್ರ.ಸಂ | ಕಾರ್ಯಕ್ರಮ | ಚಟುವಟಿಕೆ | ಹಳ್ಳಿಗಳು |
|---|---|---|---|
| ೧. | ಸರಕಾರಿ ಶಾಲೆಗಳಿಗೆ ನೆರವು | ಶಿಕ್ಷಕರಿಗೆ ತರಬೇತಿ | ೪೧ |
| | | ಬೋಧನಾ ಮತ್ತು ಕಲಿಕಾ ಸಾಮಗ್ರಿಗಳು | |
| | | ಸರಕಾರಿ ಶಾಲೆಗೆ ಶಿಕ್ಷಣ ಸಹಾಯಕರ ನೆರವು | |
| ೨. | ಸಹಾಯಕ ಶಾಲೆಗಳು | ಸಹಾಯಕ ಶಾಲೆಗಳನ್ನು ನಡೆಸುತ್ತಿರುವುದು | ೦೮ |
| ೩. | ಅಂಗನವಾಡಿ ಕೇಂದ್ರಗಳಿಗೆ ನೆರವು | ಅಂಗನವಾಡಿ ಕಾರ್ಯಕರ್ತೆಯರಿಗೆ | |
| | | ಮಕ್ಕಳ ಆಟದ ಸಾಮಗ್ರಿಗಳ ಪೂರೈಕೆ | ೨೮ |
| ೪. | ಸಮುದಾಯ ಆರೋಗ್ಯ | ರೋಗ ನಿರೋಧಕ ಲಸಿಕಾ | |
| | | ಕಾರ್ಯಕ್ರಮಕ್ಕೆ ನೆರವು | ೪೯ |
| | | ಗರ್ಭಿಣಿ ಸ್ತ್ರೀಯರ ಆರೈಕೆ ಮತ್ತು | |
| | | ಚಿಕಿತ್ಸೆಗೆ ನೆರವು | ೪೯ |
| | | ಆರೋಗ್ಯ ತಿಳುವಳಿಕಾ ಕಾರ್ಯಕ್ರಮಗಳು | ೪೯ |
| ೫. | ಪರಿಸರ ನೈರ್ಮಲ್ಯ | ತೆರೆದ ಬಾವಿಗಳಿಗೆ ಬ್ಲೀಚಿಂಗ್ | |
| | | ಪುಡಿ ಹಾಕುವುದು | ೪೯ |

[illegible]

## ಅಡಿಟಿಪ್ಪಣಿ

೧. ಸಿರಿದುರ್ಗ, ಸಂ ಅಮರೇಶ ಬಲ್ಲಿದವ್ ಮತ್ತು ಚನ್ನಬಸವ ಮಲ್ಕಂದಿನ್ನಿ, ಪು-೧೧೨-೧೧೩,

೨. ಅದೇ, ಪು-೧೧೪

೩. ಅದೇ, ಪು-೧೨೧-೧೨೪

೪. ರಾಯಚೂರು ಜಿಲ್ಲೆ ದರ್ಶನ ಸಂ ಮೃತ್ಯುಂಜಯ ಹೊರಕೇರಿ ಮತ್ತು ಬಸವಲಿಂಗ ಸೊಪ್ಪಿನ ಮಠ, ಪು-೪೪

೫. ಕೃಷಿ ಬೆಳವಣಿಗೆ, ಲೇಖಕರು, ಡಿ. ವೆಂಕಟರಾವ್, ಪು-೩೭-೩೮-೩೯

# ಅಧ್ಯಾಯ - ಮೂರು

# ದೇವದುರ್ಗ ತಾಲೂಕಿನ ಕೃಷಿ ಕೂಲಿಕಾರ ಮಹಿಳೆಯರ ಸ್ಥಿತಿ-ಗತಿ

## ಅಧ್ಯಾಯ - ಮೂರು

# ದೇವದುರ್ಗ ತಾಲೂಕಿನ ಕೃಷಿ ಕೂಲಿಕಾರ ಮಹಿಳೆಯರ ಸ್ಥಿತಿ-ಗತಿ

ಭಾರತದ ಕೃಷಿಯಲ್ಲಿ ಮಹಿಳೆಗಿರುವ ಸ್ಥಾನ ಅಪೂರ್ವವಾದದು. ಗ್ರಾಮೀಣ, ಆರ್ಥಿಕತೆಗೆ ಮತ್ತು ಕೃಷಿಯ ಅಭಿವೃದ್ಧಿಗೆ ಅವಳ ಕೊಡುಗೆ ಅಪಾರ ಕೃಷಿಯನ್ನು ಆರಂಭ ಮಾಡಿದವಳೇ ಮಹಿಳೆ ಎನ್ನಲಾಗಿದೆ. ಕೃಷಿ ಕಲೆಯನ್ನು ಮೊದಲು ಕರಗತ ಮಾಡಿಕೊಂಡವಳೇ ಮಹಿಳೆ ಎಂದು ಕೃಷಿ ಇತಿಹಾಸ ಹೇಳುತ್ತದೆ. ಕೃಷಿಯನ್ನು ಮಹಿಳೆ ತಾನು ಕಲಿತ ನಂತರ ಪುರುಷರಿಗೆ ಕಲಿಸಿದಳು ಎನ್ನಬಹುದು. ಹಿಂದೆ ಉದರ ಪೋಷಣೆಗಾಗಿ ಕಾಡು ಪ್ರಾಣಿಯ ಬೇಟೆಯಾಡುತ್ತಿದ್ದಾಗಲೇ ಸೂಕ್ಷ್ಮಮತಿಯಾದ ಮಹಿಳೆ ನೈಸರ್ಗಿಕ ಬೆಳೆಯ ಮೇಲೆ ಕಣ್ಣಿಟ್ಟಳು. ಗಡ್ಡೆ, ಗೆಣಸು ಹಣ್ಣುಗಳ ರುಚಿಕಂಡ ಅವಳು ತನ್ನ ಜಾಣ್ಮೆಯನ್ನು ಉಪಯೋಗಿಸಿ ಬೀಜ ಚೆಲ್ಲಿದಳು. ವಿವಿಧ ಬಗೆಯ ಬೆಳೆಗಳನ್ನು ಬೆಳೆದಳು. ಕೃಷಿ ಪ್ರಕೃತಿಯ ಕೈಗೊಂಬೆ ಎನ್ನುವುದನ್ನು ಅರಿತಳು ತನ್ನ ಅನುಭವಗಳಿಂದ ಒಂದು ಕೃಷಿಗೆ ಅಲೆದಾಟದ ಬದುಕಿಗೆ ಹೊಸ ತಿರುವನ್ನು ಹೊಸ ಅರ್ಥವನ್ನು ಕೊಟ್ಟಳು. ಹೀಗೆ ಅಂದು ಮಹಿಳೆಯಿಂದ ಆರಂಭವಾದ ಕೃಷಿ ಇಂದು ಸಂಶೋಧನೆ, ವಿಜ್ಞಾನಗಳನ್ನು ಮೈಗೂಡಿಸಿಕೊಂಡು ಶಾಸ್ತ್ರಿಯ ಕೃಷಿ ಉದ್ಯಮವಾಗಿ ಪರಿಣಮಿಸಿದೆ.

"ಕೃಷಿಯಲ್ಲಿ ಮಹಿಳೆ ಭಾಗವಹಿಸುವುದು ಭಾರತದ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಭಾರತದ ಇತಿಹಾಸವನ್ನು ಅವಲೋಕಿಸಿದಾಗ ಬಹುಪೂರ್ವದಿಂದಲೂ ನಮ್ಮ ಮಹಿಳೆಯರು ಪುರುಷರ ಹಾಗೆ ಕೃಷಿಯಲ್ಲಿ ಕಾರ್ಯ ನಿರತರಾಗಿದ್ದು ಕಂಡುಬರುತ್ತದೆ. ಭಾರತದಲ್ಲಿ ಮಹಿಳೆ ಕೃಷಿಗೆ ಅಂಟಿಕೊಂಡೇ ಬೆಳೆದು ಬಂದಿದ್ದಾಳೆ. ಮಹಿಳೆಗೂ ಮಣ್ಣಿಗೂ ಬಿಗಿಯಾದ ನಂಟಿರುವುದು ರಾಮಾಯಣ ಮಹಾಭಾರತದ ಗ್ರಂಥಗಳಲ್ಲೂ ಕಾಣಬಹುದು. ಜನಕ ಮಹಾರಾಜ ತನ್ನ ಪತ್ನಿಯೊಂದಿಗೆ ಚಿನ್ನದ ನೇಗಿಲಿನಿಂದ ಬೆಳೆಯನ್ನು ಉತ್ಪಾದಿಸಲು ಸೀತಾಯಜ್ಞ ಮಾಡಬೇಕೆಂದು ಮಹಾನ್ ಸಂಸ್ಕೃತ ವಿದ್ವಾಂಸರು ಹೇಳಿದ್ದಾರೆ. ರಾಮಾಯಣದಲ್ಲಿ ಸೀತೆ ಎಂದರೆ ಉತ್ತ ಭೂಮಿಯಿಂದ ಉದ್ಭವವಾದವಳು ಎಂದು. ಪ್ರಾಚೀನ

[illegible]

[illegible]

[illegible]

[illegible]

[illegible]

ಗ್ರಂಥಗಳಲ್ಲಿ ಮಹಿಳೆ ಪುರುಷನೊಂದಿಗೆ ಸರಿಸಮಾನವಾಗಿ ದುಡಿಯುತ್ತಿದ್ದಳು ಎಂದು ಉಲ್ಲೇಖಿಸಲಾಗಿದೆ. ಕೇವಲ ಹಳ್ಳಿಯ ಮಹಿಳೆ ಮಾತ್ರವೇ ಅಲ್ಲ. ಪಟ್ಟಣದ ಮಹಿಳೆಯೂ ಕೃಷಿಯ ಬಗ್ಗೆ ಅಷ್ಟೇ ಆಸಕ್ತಿ ವಹಿಸುತ್ತಿದ್ದಳು ಎಂದು ಹೇಳಲಾಗಿದೆ. ಆಗ ಪ್ರತಿ ಗೃಹಿಣಿಯೂ ತರಕಾರಿಗಳ ಹಾಗೂ ಅವುಗಳನ್ನು ಯಾವ ಯಾವ ಕಾಲದಲ್ಲಿ ಬಿತ್ತನೆ ಮಾಡಬೇಕೆಂಬ ಬಗ್ಗೆ ತಿಳಿದಿದ್ದಳು. ಭಾರತದಲ್ಲಿ ಮಹಿಳೆ ಕೃಷಿಯಲ್ಲಿ ಪುರುಷನೊಂದಿಗೆ ಬಹುವಾಗಿ ಸಹಕರಿಸುತ್ತಿದ್ದಳು ಎಂಬ ಬಗ್ಗೆ ಪುರಾತನ ಕತೆಗಳಲ್ಲಿ ಅನೇಕ ನಿದರ್ಶನಗಳನ್ನು ಕಾಣಬಹುದು. ಸಾಂಚಿಯ ಕಲಾ ಕುಸುರಿಗಳು ಇದಕ್ಕೊಂದು ಉದಾ. ಜೈನರ ಕೃತಿಗಳಲ್ಲೂ ಮಹಿಳೆಯರು ಹೊಲಗಳಲ್ಲಿ ಹಾಡು ಹೇಳುತ್ತ ಗಲಾಟೆ ಮಾಡುತ್ತ ಮೃಗ ಪಕ್ಷಿಗಳನ್ನು ಬರ್ಚಿಸುತ್ತಿದ್ದರು ಎಂದು ಹೇಳಲಾಗಿದೆ. ಕಾಳಿದಾಸ ತನ್ನ ರಘುವಂಶ ಕಾವ್ಯದಲ್ಲಿ ಮಹಿಳೆ ಕಬ್ಬು ಬತ್ತದ ಗದ್ದೆಗಳಲ್ಲಿ ಇಂಪಾಗಿ ಹಾಡುತ್ತಿದ್ದ ಬಗ್ಗೆ ಹೇಳಿದ್ದಾನೆ. ಅವನು ತನ್ನ ಮೇಘದೂತದಲ್ಲಿ ಹೆಣ್ಣಿನ ಹಿರಿಮೆಯನ್ನು ಮತ್ತಷ್ಟು ಮನೋಜ್ಞವಾಗಿ ಚಿತ್ರಿಸಿದ್ದಾನೆ. "ಕಾಲಕ್ಕೆ ಸರಿಯಾಗಿ ಕೃಷಿ ಕಾರ್ಯಗಳನ್ನು ಕೈಗೊಳ್ಳುವುದು ಉತ್ತಮ ಬೆಳೆ ಪಡೆಯುವುದು ಇತ್ಯಾದಿಗಳಲ್ಲಿ ಮಹಿಳೆಯೂ ಪುರುಷನಷ್ಟೇ ಆಸ್ಥೆ ವಹಿಸಬಲ್ಲಳು" ಎಂದು ಕಾಳಿದಾಸ ಹೇಳಿದ್ದಾನೆ. ಹೀಗೆ ಪ್ರಾಚೀನ ಗ್ರಂಥಗಳು ಕೃಷಿಗೆ ಸಂಬಂಧಿಸಿದಂತೆ ಮಹಿಳೆಗೆ ಮಹೋನ್ನತ ಸ್ಥಾನ ನೀಡಿವೆ."[೧] (ದಿ.ಡಿ.ವೆಂಕಟೇಶ, ಪು-೧೯೦)

ಇಂದಿಗೂ ಗ್ರಾಮೀಣ ಮಹಿಳೆಯೇ ಕೃಷಿ ಕಾರ್ಯಗಳ ಸೂತ್ರದಾರಣಿ. ಅವಳಿಲ್ಲದೆ ಯಾವ ಕೃಷಿ ಕಾರ್ಯವೂ ನಡೆಯುವಂತಿಲ್ಲ. ಕೃಷಿಯ ಬಗ್ಗೆ ಗ್ರಾಮೀಣ ಮಹಿಳೆ ಹೊಂದಿರುವ ಜ್ಞಾನ ಭಂಡಾರ ಅಗಾಧವಾದದು. ಭೂಮಿಯ ಹದ, ಬೀಜಬಿತ್ತನೆ, ನಾಟಿಯ ಕೆಲಸ, ಕಳೆ ಕೀಳುವಿಕೆ, ಕಾಳು ಬಿಡಿಸುವಿಕೆ ಗೊಬ್ಬರ ಹಾಕುವಿಕೆ, ಬೆಳೆಯನ್ನು ಕಾಯುವುದು, ಹುಲ್ಲು ಆಯುವಿಕೆ, ಬೆಳೆಕುಯ್ಯಲು ಹೀಗೆ ಕೃಷಿಯ ಪ್ರತಿಯೊಂದು ಹಂತದಲ್ಲೂ ಅವಳು ಉತ್ಸಾಹದಿಂದ ಮೈ ಬಗ್ಗಿಸಿ ದುಡಿಯಲು ಸಿದ್ಧ. ಅವಳದ್ದಲ್ಲಿ ಕೃಷಿ ಕಾರ್ಯಗಳಲ್ಲೂ ಅಚ್ಚುಕಟ್ಟು, ಕೆಲಸಗಳೂ ಭರಭರನೆ ನಡೆದುಬಿಡುತ್ತವೆ. ಮಣ್ಣೆಂದರೆ ಗ್ರಾಮೀಣ ಮಹಿಳೆಗೆ ಅಪಾರ ಮಮತೆ. ಕೃಷಿಯಲ್ಲಿ ಗ್ರಾಮೀಣ ಗೃಹಿಣಿ ಎಷ್ಟರಮಟ್ಟಿಗೆ ತಲ್ಲೀನಳಾಗಿ ಬಿಡುತ್ತಾಳೆಂದರೆ ಅವಳು ಮಿಕ್ಕ ಎಲ್ಲವನ್ನು ಆಕ್ಷಣಕ್ಕೆ ಮರೆತು ಹೇಳತ್ತೀರದು. ಕೃಷಿ ಕಾರ್ಯಗಳು ನಿರೀಕ್ಷಿತ ಮಟ್ಟದಲ್ಲಿ ಸಾಗದಿದ್ದಾಗ, ಬೆಳೆಹಾಳಾದಾಗ, ಅವಳ ಕಳವಳ, ಪರದಾಟ ಹೇಳತೀರದು. ಕೃಷಿ ಕಾರ್ಯಗಳಲ್ಲಿ ಪತ್ನಿ ಜೊತೆಗಿದ್ದಲ್ಲಿ ಗಂಡನಿಗೆ ಹಿಗ್ಗು, ಆದರೆ ಅದೇ ಪತ್ನಿ ಯಾವುದಾದರೂ ಕಾರಣದಿಂದ ಕೃಷಿಯಲ್ಲಿ ಪಾಲ್ಗೊಳ್ಳಲು ಒಬ್ಬ ಹೆಣ್ಣಾಳು ದೊರೆತಳು ಎಂದು ಅದೇ ಮನೆಮಗಳು ಮದುವೆಯಾಗಿ ಗಂಡನ ಮನೆಗೆ ಹೊರಟು ನಿಂತರೆ ಸಂತಸದಲ್ಲೂ ತುಸು ವ್ಯಥೆ. ಕಾರಣ ಒಬ್ಬ ಹೆಣ್ಣಾಳು ಕಡಿಮೆಯಾದದ್ದರಿಂದ ಕೃಷಿಗಾಗುವ ನಷ್ಟ. ಹಳ್ಳಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ದೃಶ್ಯವೆಂದರೆ ಟೀ ಕಾಫಿ ರಬ್ಬರ್

[illegible]

ತೋಟಗಳಲ್ಲಿ, ಹೊಲಗದ್ದೆಗಳಲ್ಲಿ ಹೊತ್ತು ಗೊತ್ತಿಲ್ಲದೆ ಕಾರ್ಯ ನಿರತವಾಗಿರುವ ಹೆಣ್ಣಾಳುಗಳು ಇವರು ಎದುರಿಸುವ ಸಂಕಷ್ಟಗಳು ಗಂಡಾಳುಗಳಿಗಿಂತ ಹೆಚ್ಚು. ಇವರಿಗೆ ಸಿಗುವ ಕೂಲಿಯೂ ಗಂಡಾಳುಗಳಿಗಿಂತಲೂ ಕಡಿಮೆ. ಹೊಲಗದ್ದೆಗಳಲ್ಲಿ ಬೆವರು ಸುರಿಸಿ ದುಡಿದು ಬರುವ ಇವರು ಮನೆ ಗೆಲಸಗಳಲ್ಲೂ ತೊಡಗಬೇಕು. ಹೊಲದಿಂದ ಮೇವು ತರುವುದು, ಮೇವು ಕತ್ತರಿಸುವುದು, ಕೊಟ್ಟಿಗೆಯನ್ನು, ದನದ ಮೈಯ್ಯನ್ನು ತೊಳೆಯುವುದು ಹಾಲು ಕರೆಯುವುದು, ಬೆರಣಿ ಮಾಡುವುದು, ಮೊಸರು ಮತ್ತು ತುಪ್ಪ ಮಾಡುವುದು ಇತ್ಯಾದಿ ಕೆಲಸಗಳ ಹೊರೆಯನ್ನು ಗ್ರಾಮೀಣ ಮಹಿಳೆಯರೇ ಹೊರಬೇಕು. ವಿನೋದ ವಿವರಗಳು, ಜೀವಿಸಿರುವಷ್ಟು ದಿನವೂ ದುಡಿತವೊಂದೇ ಇವರ ಪಾಲಿಗೆ. ಇವರ ಗಂಡಂದಿರು ಆಗಾಗ್ಗೆ ಏನಾದರೂ ನೆಪದಲ್ಲಿ ಪಟ್ಟಣಕ್ಕೆ ಹೋಗುವುದುಂಟು ಅಲ್ಲಿ ಹೋಟೆಲು, ಸಿನಿಮಾ ಎಂದು ಮಜ ಮಾಡುವುದುಂಟು, ಆದರೆ ಇವೆಲ್ಲವೂ ಗ್ರಾಮೀಣ ಮಹಿಳೆಯರಿಗೆ ಮಾತ್ರ ಸೊನ್ನೆ, ಕುಟುಂಬದ ಹೊರೆಯೊಂದಿಗೆ ಕುಟುಂಬವನ್ನು ಪೋಷಿಸುವ ಹೊರೆಯನ್ನು ಇವರೇ ಹೊರಬೇಕು. "ಅದಕ್ಕಾಗಿ ಚಳಿಯನ್ನದೆ, ಮಳೆಯನ್ನದೆ ಉರಿಬಿಸಿಲಿನಲ್ಲಿ ಹೊಲಗದ್ದೆಗಳಲ್ಲಿ ತಮ್ಮ ಜೀವ ತೇಯಬೇಕು. ಅಂಜದೆ, ಅಳುಕದೆ ಎಂತಹ ಕಷ್ಟ ಕಾರ್ಪಣ್ಯಗಳ ಬಂದರೂ ನಿಭಾಯಿಸಿಕೊಂಡು ಹೋಗಬೇಕು. ಈ ಮಧ್ಯೆ ಅವರ ವೈಯಕ್ತಿಕ ಆರೋಗ್ಯವೂ ಕೂಡ ಮುಖ್ಯ ಭಾರತದಲ್ಲಿ ಕೃಷಿಯಲ್ಲಿ ನಿರತವಾಗಿರುವ ಶೇಕಡ ೭೦% ಮಂದಿಯಲ್ಲಿ ಅರ್ಧದಷ್ಟು ಮಹಿಳೆಯರೇ ಎಂದು ತಿಳಿದು ಬಂದಿದೆ. ಇವರೆಲ್ಲರ ಸ್ಥಿತಿಯೂ ಒಂದೇ ಕೃಷಿಕಾರ್ಯಗಳ ಬಹುಪಾಲು ಭಾರ ಇವರ ಪತ್ನಿಯ ಮೇಲೆ. ಆದರೆ ಅದರ ಹೆಗ್ಗಳಿಕೆ ಮಾತ್ರ ಪುರುಷರಿಗೆ."[೨] (ದಿ.ಡಿ.ವೆಂಕಟೇಶ, ಪು-೧೯೦, ೧೯೮೫)

ಮನುಕುಲದ ಇತಿಹಾಸವನ್ನು ನಾವು ಒಮ್ಮೆ ತಿರುವಿಹಾಕಿದಾಗ ಅಲ್ಲಿ ನಡೆದಿರುವ ಲಿಂಗ ಪಕ್ಷಪಾತದ ರಾಜಕಾರಣ ಹೇರಳವಾಗಿ ಕಂಡುಬರುತ್ತದೆ ಆದಿಮ ಕಾಲಘಟ್ಟದಿಂದಲೂ ಮಹಿಳೆಯರು ಆಹಾರ ಉತ್ಪಾದನೆ, ಪಶುಸಂಗೋಪನೆ, ಬಟ್ಟೆ ನೇಕಾರಿಕೆ, ಕರಕುಶಲವಸ್ತುಗಳ ತಯಾರಿಕೆಯಿಂದ ವಿಶಿಷ್ಠ ಕೆಲಸಗಳನ್ನು ಮಾಡಿರುವುದನ್ನು ನಾವು ಕಾಣಬಹುದು. ಆದರೆ ಭಾರತಕ್ಕೆ ಸಂಬಂಧಿಸಿದಂತೆ ಮಹಿಳೆಯ ಪಾತ್ರ ಗೃಹ ಕೇಂದ್ರಿತವಾಗಿರುವುದು ಮಾತ್ರ ಸರ್ವವಿಧಿತ. ಪುರುಷ ನಿಷ್ಟವಾಗಿರುವ ಕೆಲವು ಮಿಥ್‌ಗಳು ಮಹಿಳೆಗೆ ಪುರುಷನಿಗೆ ಬೇರೆ ಬೇರೆ ಪಾತ್ರಗಳನ್ನು ಆರೋಪಿಸಿ ಲಿಂಗವಿಭಜನಾ ಕಾರ್ಯಗಳನ್ನು ಸೃಷ್ಟಿಸಿ ಮಹಿಳೆಯನ್ನು ಸಾರ್ವಜನಿಕ ಕ್ಷೇತ್ರದ ಪರದಿಯಿಂದ ದೂರ ಉಳಿಯುವಂತೆ ಮಾಡಿದವು ಮಹಿಳೆಯರ ಕೆಲಸಗಳು ಗೃಹಕೃತ್ಯಗಳಿಗೆ ಸೀಮಿತಗೊಂಡಿದ್ದರಿಂದ ಅವಳ ಕೆಲಸ ಖಾಸಗಿಯಾಗಿ ಪುರುಷನ ಕೆಲಸ ಸಾರ್ವಜನಿಕವಾಗಿ ರೂಪ ಪಡೆಯಿತು. ಹೀಗಾದುದರಿಂದಲೇ ಮಹಿಳೆ ದಿನನಿತ್ಯ ಮಾಡುವ ೧೬-೧೯ ಗಂಟೆ ಕೆಲಸ ಕೆಲಸ ಎಂದು ಸಾಮಾಜಿಕವಾಗಿ ಗುರುತಿಸಲಾಗದೆ ಹೋಯಿತು. ಏಕೆಂದರೆ ಅದಕ್ಕೆ ಯಾವುದೇ

[illegible]

[illegible]

ಸಂಭಾವನೆ ಇರುವುದಿಲ್ಲ ಎಂಬದೊಂದೆ ಮಾನದಂಡವಾಯಿತು. ಇದು ಎಷ್ಟರ ಮಟ್ಟಿಗೆ ಸಾಮಾಜಿಕ ಜೀವನದಲ್ಲಿ ವ್ಯಾಪಿಸಿತೆಂದರೆ ಪುರುಷರನೇ ದುಡಿಮೆಯ ವಾರಸುದಾರನಾದ. ಈ ಕಾರಣದಿಂದಲೆನೋ "ಉದ್ಯೋಗಂ ಪುರುಷ ಲಕ್ಷಣಂ" ಎಂಬ ಚಿಂತನೆ ಬಂದಿದ್ದು. ಇದರಿಂದ ಹೊರ ಬಂದು ಮಹಿಳೆ ಸಾರ್ವಜನಿಕ ಕೆಲಸ ಮಾಡಿ ಅವಳು ಸಂಪಾದನೆ ಮಾಡಿದರೂ ಕೂಡ ಅದು ದುಡಿಮೆ ಎನಿಸಿಕೊಳ್ಳಲಾರದು. ಏಕೆಂದರೆ ಅದು ಅವಳು ಪುರುಷನಿಗೆ ಸಹಾಯ ಒದಗಿಸುವಲ್ಲಿ ಸಹಕಾರಿಯಾಗುತ್ತಿದ್ದಳೆಂಬ ಉಡಾಫೆಯ ನೆಲೆಯಲ್ಲಿ ಗುರುತಿಸಲ್ಪಡುತ್ತದೆ.

ಆಧುನಿಕ ಯುಗದಲ್ಲಿಯೂ ಕೂಡ ದುಡಿಮೆಯ ಪರಿಕಲ್ಪನೆಯಾಗಿ ಬೆಳೆದು ಪುರುಷ ಸಂವಾದಿಯಾಗಿಯೇ ಬೆಳೆಯಿತು. ಅದರ ಅಳೆಯುವಿಕೆ ವೈಜ್ಞಾನಿಕವಾಗಿತ್ತು ನಿಖರವಾಗುತ್ತಲೇ ಹೋದ ಹಾಗೆ ಸ್ತ್ರೀಯರ ದುಡಿಮೆ ಅದರಿಂದ ದೂರ ಬಂದಿತು. ವರಮಾನ ತರುವ, ಪರಿಮಾಣಾತ್ಮಕವಾಗಿ ಅಳೆಯಲು ಸಾಧ್ಯವಾಗುವ, ಮಾರುಕಟ್ಟೆಯ ವಸ್ತುಗಳನ್ನು ಉತ್ಪಾದಿಸುವ, ಹಣದ ವಿನಿಮಯಕ್ಕೆ ಒಳಪಡುವ ಕೆಲಸಗಳನ್ನು ಮಾತ್ರ ದುಡಿಮೆ ಎಂದು ಪರಿಗಣಿಸಲಾಯಿತು. ಮಹಿಳೆಯರ ದುಡಿಮೆಗಳು ಪುರುಷನಂತೆ ದುಡಿಮೆಗೆ ಸೇರುವುದಿಲ್ಲವಾದ್ದರಿಂದ ಇಷ್ಟು ದುಡಿಮೆಯಿಂದ ಅನತಿ ದೂರ ಪತ್ನಿ ಉಳಿಯುತ್ತಾಳೆ. ಆದ್ದರಿಂದಲೆ ಸಮಾಜ ವಿಜ್ಞಾನಗಳು, ಸಮಾಜ, ಕುಟುಂಬಗಳು ಅವಳ ಕೆಲಸಕ್ಕೆ ಸಾರ್ವಜನಿಕ ಮಾನ್ಯತೆ ನೀಡಿಲ್ಲ.

ಪ್ರಸ್ತುತ ಅಧ್ಯಯದಲ್ಲಿಯೂ ಕೂಡ ಅಗೋಚರವಾಗಿ ಉಳಿದಿರುವ ಮಾನ್ಯತೆ ಇಲ್ಲಿನ ಮಹಿಳಾ ದುಡಿಮೆಯನ್ನು ಶೋಧಿಸುವುದರ ಜೋತೆಗೆ ಕೆಲಸದ ಸ್ಥಳದಲ್ಲಿನ ಅವಳ ಸ್ಥಿತಿಗತಿಯನ್ನು ಒರೆಗೆ ಹಚ್ಚುವ ಪ್ರಯತ್ನ ಮಾಡಲಾಗಿದೆ. ಕೃಷಿ ಕಾರ್ಮಿಕ ಮಹಿಳೆಯರು ತಾವು ನಿರ್ವಹಿಸುತ್ತಿರುವ ದುಡಿಮೆಯ ಪರಿಭಾಷೆಯನ್ನು ವಿಶ್ಲೇಷಿಸಲು ಕ್ಷೇತ್ರಕಾರ್ಯದುದ್ದಕ್ಕೂ ಸಕಾರಾತ್ಮಕವಾಗಿ ಉತ್ತರಿಸಿದ್ದಾರಲ್ಲದೆ. ಒಂದು ಕಡೆ ಇವರು ಕೂಡ ತಮ್ಮ ದುಡಿಮೆ ನಿಷ್ಠತೆಯಿಂದ ಕೂಡಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಅಂದರೆ ಸಾಂಪ್ರದಾಯಿಕ ಸಮಾಜದಲ್ಲಿ ಮಹಿಳೆ ನಿರ್ವಹಿಸುತ್ತಿರುವ ಕೃಷಿ ಕಾರ್ಯಗಳ ಕುರಿತಾದ ದುಡಿಮೆ ಸಾಮಾಜಿಕ ಮಾನ್ಯತೆಗೆ ಒಳಗಾಗಿಲ್ಲ. ತಾನು ದುಡಿದ ಹಣದಲ್ಲಿ ಅವಳಿಗೆ ರಿಯಾಯಿತಿ ಬಗೆಯ ಹಕ್ಕುದಾರಿಕೆಯಾಗಲಿ ಅಥವಾ ಅದರ ಮೇಲೆ ನಿಯಂತ್ರಣವಾಗಲಿ ಇಲ್ಲ.

ಸಮಾಜದಲ್ಲಿ ಸ್ತ್ರೀ ಪುರುಷನಿಗೆ ಬಾಲ್ಯದಲ್ಲಿಯೇ ಗಂಡು ಮಕ್ಕಳ ಕೆಲಸ ಹೆಣ್ಣು ಮಕ್ಕಳ ಕೆಲಸ ಬೇರೆ ಬೇರೆ ಎಂಬಂತೆ ಅವರಿಗೆ ಆರಂಭದಲ್ಲಿ ಲಿಂಗ ವಿಭಜನೆಯನ್ನು ಮಾಡಲಾಗುತ್ತಿದೆ. ಹೀಗಿರುವುದರಿಂದಲೇ ಅವರು ದೊಡ್ಡವರಾದ ಮೇಲೆ ಇದು ಮತ್ತಷ್ಟು ವಿಸ್ತರಿಸುತ್ತದೆ. ಇಲ್ಲಿ

[illegible]

[illegible]

[illegible]

[illegible]

ಮುಖ್ಯವಾಗಿ ಗಮನಿಸಬೇಕಾಗಿರುವುದೇನೆಂದರೆ ಗಂಡಸರ ಕಾರ್ಯಕ್ಷೇತ್ರದಲ್ಲಿ ಅಪ್ಪಿತಪ್ಪಿಯೂ ಕೂಡ ಮಹಿಳೆಯರು ಪ್ರವೇಶಿಸುವಂತಿಲ್ಲ. ಹಾಗೊಂದು ವೇಳೆ ಅವಳು ಪ್ರವೇಶಿಸಿದರೆ ಅವಳನ್ನು ಹೀಯಾಳಿಸಲಾಗುತ್ತದೆ. ಪುರುಷ, ಮಹಿಳೆಯರು ಮಾಡುವ ಕೆಲಸ ನಿರ್ವಹಿಸಿದರೆ ಅವನನ್ನು ಹೆಣ್ಣು ಎಂದು ಬಗೆಯಲಾಗುತ್ತದೆ. ಈ ಬಗೆಯ ಪಕ್ಷಪಾತಿತನಗಳು ಜೀವನದುದ್ದಕ್ಕೂ ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ದುಡಿಮೆಯ ಮೇಲೆ ಸಂಪೂರ್ಣವಾಗಿ ನಿಯಂತ್ರಣ ಹೊಂದಿದ ಪುರುಷ ಸಹಜವಾಗಿಯೇ ಅವಳ ಹಾಗೂ ಕುಟುಂಬದ ಮೇಲೆ ಸಂಪೂರ್ಣ ನಿಯಂತ್ರಣ ಹೊಂದುತ್ತಾನೆ. ಮಹಿಳೆಯೂ ಕೂಡ ಸಂಪಾದನೆ ಮಾಡುವವಳಾದರೆ ಅದರಿಂದ ಅವಳಿಗೆ ಯಾವುದೇ ರೀತಿಯ ಮೌಲ್ಯವು ಬರಲಾರದು ಕಾರಣ ಎಂದರೆ ಅವಳಿಗಿರುವ ಸಾಮಾಜಿಕ ಮೌಲ್ಯಗಳ ಪಕ್ಷಪಾತಿತನ.

ಪ್ರಸ್ತುತ ಅಧ್ಯಯನದಲ್ಲಿ ಅಸಂಘಟಿತ ವಲಯದಲ್ಲಿ ಮಹಿಳೆ ನಿರ್ವಹಿಸುವ ಕೆಲಸಕ್ಕೆ ಇರುವ ಅಡ್ಡಿ ಆತಂಕಗಳು, ಕೆಲಸದ ಸ್ಥಳದಲ್ಲಿನ ದೌರ್ಜನ್ಯ, ಶೋಷಣೆ, ಲಿಂಗಾಧಾರಿತವಾದ ಶ್ರಮ ವಿಭಜನೆಯನ್ನು ಕುರಿತಾದ ಅಂಶಗಳ ಮೇಲೆ ಬೆಳಕು ಚೆಲ್ಲುವುದರ ಜೊತೆಗೆ ಅವಳಿಗೆ ಅವಳ ದುಡಿಮೆಗೆ ಸಮಾಜದಲ್ಲಿ ನೀಡಲಾಗಿರುವ ಸ್ಥಾನಮಾನ, ಗೌರವಗಳನ್ನು ಕುರಿತು ಅರಿಯಲು ಪ್ರಯತ್ನಿಸಲಾಗಿದೆ.

### ೩.೧. ಸಾಮಾಜಿಕ ಸ್ಥಿತಿಗತಿ

ಸಂಪೂರ್ಣ ದೇಶದ ಅಭಿವೃದ್ಧಿಯೆಂದರೆ ಕೇವಲ ಪುರುಷ ಪ್ರಧಾನವಾಗಿದ್ದರೆ ಸಾಲದು, ಮಹಿಳೆಯರು ಅದರಲ್ಲಿ ಕ್ರಿಯಾಶೀಲರಾಗಿದ್ದರೆ ಮಾತ್ರ ಅನೇಕ ವಲಯಗಳಲ್ಲಿ ಅಭಿವೃದ್ಧಿ ಹೊಂದಿ ಆರ್ಥಿಕತೆಯು ಸದೃಢತೆಗೊಳ್ಳಲು ಸಾಧ್ಯ ಅದರಲ್ಲಿ ಮಹಿಳೆ ದುಡಿಮೆಯ ವಲಯಕ್ಕೆ ಬರಬೇಕು. ಆದರೆ ಭಾರತದಂಥ ದೇಶದಲ್ಲಿ ಪುರುಷ ಪ್ರಧಾನ ದುಡಿಮೆಗೆ ಹೆಚ್ಚು ಅನುಕೂಲ ಮತ್ತು ಅವಕಾಶ. ಪುರುಷನ ದುಡಿಮೆಯೇ ಶ್ರೇಷ್ಠವೆಂದು, ಉತ್ಪಾದನೆಯ ಮೌಲ್ಯ ಹೊಂದಿದ್ದಾನೆಂದು ಪುರಾಣ ಕಾಲದಿಂದಲೂ ಅದರ ಪರಿಕಲ್ಪನೆಯು ಬೇರೂರಿರುವುದು ಸಾಮಾನ್ಯ ಮಹಿಳೆಯರ ದುಡಿಮೆಗೆ ಅಷ್ಟೊಂದು ಪ್ರಾಮುಖ್ಯತೆಯಿಲ್ಲ. ಅದರಲೂ ಸಾಮಾನ್ಯ ಕೂಲಿಕಾರ ಮಹಿಳೆಯ ದುಡಿಮೆಯ ಸ್ಥಿತಿಯಂತೂ ಅಷ್ಟಕಷ್ಟೆ. ಭಾರತದೇಶ ಏನೆಲ್ಲಾ ಯೋಜನೆಗಳನ್ನು ಹಾಕಿಕೊಂಡರೂ ಮಹಿಳೆಯರಿಗೆ ಅದರ ಪ್ರಯೋಜನ ಸಿಗುತ್ತದೆಯೇ? ಸಿಕ್ಕರೆ ಅದು ಯಾವ ಮಟ್ಟದಲ್ಲಿ? ಮತ್ತೆ ಯಾವ ಹಿನ್ನಲೆಯಲ್ಲಿ? ಅದರ ಸಂಪೂರ್ಣ ಯೋಜನೆಗಳ ಫಲ ತಲುಪುವುದರಲ್ಲಿ ಎದುರಾಗುವ ಸವಾಲು ಮತ್ತು ಸಾಧ್ಯತಯೇನಾದರೂ ಇವೆಯೇ ಎನ್ನುವ ಪ್ರಶ್ನೆಗಳೇ ಅಧ್ಯಯನದ ದಿಕ್ಕನ್ನು ತಿರುಚು ಮುರುಚುಗೊಳಿಸುವ ಹತ್ತು ಹಲವು ತಾತ್ವಿಕ ಚಿಂತನೆಗಳಿಗೆ ಇಂಬುಕೊಟ್ಟಂತಾಗುತ್ತದೆ.

ಸರಕಾರಿ ಯೋಜನೆಗಳಾಗಲೀ, ಸರಕಾರೇತರ ಸಂಘ-ಸಂಸ್ಥೆಗಳ ಹಲವು ಕಾರ್ಯಕ್ರಮಗಳ ದುಡಿಮೆಯ ಮಹಿಳೆಯ ಪರ ನಿಲ್ಲಬೇಕು. ನಿಲ್ಲುತ್ತದೆ ಎಂಬ ಧೋರಣೆ ಕೇವಲ ಲೆಕ್ಕ ಪತ್ರಗಳೇ ವಿನಃ ಅದರ ವ್ಯಾಪ್ತಿ ಬದುಕಿನ ಸಮೀಪ ಬರುವುದು ಕನಸಿನ ಮಾತು. ಬದುಕಿನ ಎಲ್ಲಾ ಸ್ತರದ ಆಯಾಮಗಳು ಅವಳನ್ನು ನಿರ್ಲಿಪ್ತ ಸ್ಥಿತಿಗೆ ಕೊಂಡೊಯ್ದು ನಿಲ್ಲಿಸಿ ಬಿಡುತ್ತದೆ. ಮಹಿಳೆಯ ದುಡಿಮೆಯನ್ನು ಉತ್ಪಾದಕ ಮೌಲ್ಯವೆಂದು ಗುರುತಿಸಬೇಕು ಎಂದು ಅನೇಕ ಸ್ತ್ರೀವಾದಿಗಳು ಒತ್ತಿ ಹೇಳುತ್ತಾರೆ. ದೈಹಿಕವಾಗಿ ಪುರುಷ ಎಷ್ಟೇ ಸಾಮರ್ಥ್ಯ ಹೊಂದಿದ್ದರೂ, ಹೊಲ ಗದ್ದೆಗಳಲ್ಲಿ ದುಡಿಯುವುದಷ್ಟೆ ಅಲ್ಲ, ಮನೆಗೆಲಸಗಳಲ್ಲಿಯೂ, ಮಕ್ಕಳ ಗೆಲಸಗಳಲ್ಲಿಯೂ ಅವನು ಸಂವೇದನಾ ಶೀಲತೆಯಿಂದ ಮಾಡಿಕೊಂಡು ಹೋಗಬೇಕು. ಅದಿಲ್ಲದಿದ್ದರೆ ಪುರುಷನ ಪೌರುಷತನಕ್ಕೆ ಆಕೆ ತುತ್ತಾಗುವ ಸಂಭವವೇ ಹೆಚ್ಚು. ದೌರ್ಜನ್ಯವೆಂಬುದು ನೇರವಾಗಿ ಇಲ್ಲವೇ ನಾಜೂಕಾಗಿ ಹೇರುವುದು ಕಂಡು ಬರುತ್ತದೆ. ದುಡಿಮೆಯ ಪಾಲು ಮಾತ್ರ ನನ್ನದು ಆದರ ಹೊರ ಒಳ ಸಂಬಂಧಗಳ ಗೋಜಿನಿಂದ ಬಲುದೂರ ಉಳಿದು ಬಿಡುತ್ತಾನೆ. ಹಾಗಂದ ಮಾತ್ರಕ್ಕೆ ಎಲ್ಲಾ ಪುರುಷರ ಮನಸ್ಥಿತಿ ಒಂದೇ ಆಗಿರುವುದಿಲ್ಲ, ಕೂಲಿಕಾರ ಮಹಿಳೆಯರು ಪುರುಷರು ಪರಸ್ಪರ ಅನೋನ್ಯವಾಗಿ ಒಬ್ಬರ ಕೆಲಸಕ್ಕೆ ಒಬ್ಬರು ಸಹಾಯಕರಾಗಿ ನಿಂತಿರುವುದು ನಾವು ಗ್ರಾಮೀಣ ಪ್ರದೇಶಗಳಲ್ಲಿ ನೋಡುತ್ತೇವೆ. ಆದರೆ ಅದರ ಪ್ರೇರಿತ ಕನಿಷ್ಟ ಮತ್ತು ಪರಿಗಣನೆಯ ಸ್ಥಿತಿಗೆ ತಲುಪುವಷ್ಟು ಪ್ರಭಾವ ಕಡಿಮೆಯೆನ್ನಬಹುದು.

## ಕಡಿಮೆ ಕೂಲಿ ಪಡೆಯುವವರ ಪ್ರಮಾಣ ಕೋಷ್ಟಕ-೧

| ಕ್ರ.ಸಂ. | ಕೃಷಿಕೂಲಿಕಾರರು | ಮಹಿಳೆಯರು | ಪುರುಷರು | ಸ್ತ್ರೀ ಪುರುಷರು |
|---|---|---|---|---|
| | ಒಟ್ಟು ಸಂಖ್ಯೆ | ಕೂಲಿ | ಕೂಲಿ | ಕೂಲಿಯ ಅಂತರ |
| ೧. | ೨೦-೩೦ | ೩೦-೪೫ | ೭೦-೮೦ | ೪೫ |
| ೨. | ೩೦-೪೫ | ೩೦-೪೫ | ೭೦-೮೦ | ೪೫ |
| ೩. | ೪೫-೫೦ | ೪೦-೪೫ | ೭೦-೮೦ | ೪೫ |
| ೪. | ೫೦-೬೦ | ೪೦-೪೫ | ೭೦-೮೦ | ೪೫ |
| ೫. | ೬೫- | ೪೦-೪೫ | ೮೦-೯೦ | ೫೫ |

ಮೇಲಿನ ಕೋಷ್ಟಕ-೧ರಲ್ಲಿ ತೋರಿಸಿರುವಂತೆ ಕೃಷಿ ಕೂಲಿಕಾರರ ಕೂಲಿಯ ಪ್ರಮಾಣದಲ್ಲಿ ಅತ್ಯಂತ ಹೆಚ್ಚಿನ ಅಂತರವಿರುವುದನ್ನು ಕಾಣಬಹುದಾಗಿದೆ. ಸಾಮಾನ್ಯವಾಗಿ ಕೃಷಿ ಕಾರ್ಯಗಳು ಸ್ತ್ರೀಪುರುಷರು ಸಮಸಮವಾಗಿ ಹಂಚಿಕೊಂಡು ಚಾಕಚಕ್ಯತೆಯಿಂದ ನಿರ್ವಹಿಸಿದರೂ ಕೂಡ ಕೂಲಿಕಾರರ ಪ್ರಮಾಣದಲ್ಲಿ ಮಾತ್ರ ಪಾರಂಪರಿಕವಾದ ಸ್ಥಾಪಿತ ಪುರುಷನಿಧಿ ಆಲೋಚನೆಗಳನ್ನು, ಕುರುಹುಗಳನ್ನು ಇನ್ನಷ್ಟು ವಿಸ್ತರಿಸಲಾಗುತ್ತಿದೆ. ಲಿಂಗದ ಕಾರಣದಿಂದಲೆ ಕೆಲಸದ ಸ್ಥಳದಲ್ಲಿ ಲಿಂಗ ಆಧಾರಿತ ಶ್ರಮವಿಭಜನೆಯನ್ನು ಮಾಡುತ್ತಲೇ ಮಹಿಳೆಯರಿಗೆ ಪುರುಷರ ವೇತನಕ್ಕಿಂತ ಅರ್ಧದಷ್ಟು ವೇತನ ಮಾತ್ರವೆ ನೀಡಲಾಗುತ್ತಿದೆ.

## ಕಡಿಮೆ ಕೂಲಿ ಪಡೆಯುವವರ ಪ್ರಮಾಣ ಕೋಷ್ಟಕ-೨

| ಕ್ರ.ಸಂ. | ವಾಸಸ್ಥಳವ ಸ್ವರೂಪ | ಪ್ರಮಾಣ |
|---|---|---|
| ೧. | ಸ್ವಂತ | ೩೦% |
| ೨. | ಬಾಡಿಗೆ | ೪೧% |
| ೩. | ಸರಕಾರದಿಂದ ನೀಡಿದ್ದು | ೨೯% |
| ೪. | ಮಣ್ಣಿನ ವಲಸೆ | ೬೭% |
| ೫. | ಆರ್.ಸಿ.ಸಿ | ೦೧% |
| ೬. | ಹಂಚು | ೧೭% |
| ೭. | ಇತರೆ ಜೋಪಡಿ | ೬೯% |

ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ವಾಸಕ್ಕಾಗಿ ಇರುವ ಮನೆಗಳಲ್ಲಿ ಜೋಪಡಿಗಳ ಪಾಲು ಶೇ ೬೯% ಹಾಗೆಯೇ ಮಣ್ಣಿನ ಮನೆಗಳ ಪಾಲು ಶೇ ೬೭% ಇದೆ. ಬೇರೆ ಸ್ಥಳಗಳಲ್ಲಿ ಅತಿವೃಷ್ಟಿ ಅಥವಾ ಅನಾವೃಷ್ಟಿಗಳ ಕಾರಣದಿಂದ ಪರ ಊರಿಗೆ ವಲಸೆ ಬರುವವರು ಸಾಮಾನ್ಯವಾಗಿ ಬಾಡಿಗೆ ಮನೆಯಲ್ಲಿಯೇ ಕಾಲದುವವರಾಗಿದ್ದಾರೆ. ಅಲ್ಲದೆ ಕ್ಷೇತ್ರ ಕಾರ್ಯದ ಸಮಯದಲ್ಲಿ ಗಮನಿಸಿದಂತೆ ಇವರು ವಾಸಿಸುವ ಮನೆಗಳು ಅತ್ಯಂತ ದುಸ್ಥಿತಿಯಲ್ಲಿವೆ. ದಿನನಿತ್ಯದ ದುಡಿಮೆ ಹೊಟ್ಟೆಗಾಗಿ ಮಾತ್ರವೆ ಸೀಮಿತವಾಗುತ್ತಿರುವುದರಿಂದ ಮನೆಯ ಬಗ್ಗೆ ಯಾವುದೇ ಗಮನಹರಿಸಲು ಇವರು ಅಶಕ್ತರಾಗಿದ್ದಾರೆ. ಇದರಲ್ಲಿ ಕೆಲವರು ಹೇಗೂ ಸರಕಾರದ ನೆರವಿನಿಂದ ಅಲ್ಲಲ್ಲಿ ಆಶ್ರಸಿ, ಅಂಬೇಡ್ಕರ್ ಯೋಜನೆಯ ಪ್ರಯೋಜನ ಪಡೆದಿದ್ದಾರೆ. ಅವರ ಪಾಲೂ ಕೂಡ ಅತ್ಯಂತ ಕಡಿಮೆ ಶೇ ೨೯% ಮಾತ್ರವಿದೆ.

[illegible]

## ಕಡಿಮೆ ಕೂಲಿ ಪಡೆಯುವವರ ಪ್ರಮಾಣ ಕೋಷ್ಟಕ-೩

| ಕ್ರ.ಸಂ. | ಕೃಷಿಕೂಲಿಕಾರರು | ಮಹಿಳೆಯರು | ಪುರುಷರು |
|---|---|---|---|
| ೧. | ಮಹಿಳೆಯರಿಗೆ | ೧೩೦೦ | ೧೫೬೦೦ |
| ೨. | ಪುರುಷರಿಗೆ | ೨೨೫೦ | ೨೭೩೭೫ |

ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಸ್ತ್ರೀ ಪುರುಷರ ನಡುವೆ ಏರ್ಪಟ್ಟಿರುವ ಲಿಂಗಸಂಬಂಧಿ ಶ್ರಮವಿಭಜನೆಯ ಕಾರಣದಿಂದ ಅವರ ತಿಂಗಳ, ವಾರ್ಷಿಕ ವರಮಾನಗಳಲ್ಲಿ ತುಂಬ ಅಂತರವಾದ ಏರುಪೇರು ಕಂಡು ಬಂದಿದೆ. ಪುರುಷನಿಗೆ ಸರಿಸಮನಾಗಿ ಎಷ್ಟೇ ದೈಹಿಕ ಕೆಲಸ ಮಾಡಿದರೂ ಮಹಿಳೆ ಪುರುಷನಿಗಿಂತ ಅತ್ಯಂತ ಕಡಿಮೆ ಸಂಭಾವನೆಯನ್ನು ಪಡೆಯುವಂತಾಗಿದೆ. ಅಲ್ಲದೆ ಅವರ ವಾರ್ಷಿಕ ಹೊಟ್ಟೆ ಬಟ್ಟೆಯ ಖರ್ಚನ್ನೆಲ್ಲಾ ತಗೆದು ಉಳಿಯುವುದು ಅತ್ಯಲ್ಪ. ಮಹಿಳೆ ವಾರ್ಷಿಕ ವರಮಾನದ ತಿಕ್ಕವಲ್ಲಿ ೧೫೬೦೦% ಮಾತ್ರ ಪಡೆಯುತ್ತಿದ್ದಾಳೆ. ಪುರುಷ ಅದಕ್ಕಿಂತ ದುಪಟ್ಟು ಅಂದರೆ ೨೭೩೭೫% ಗಳನ್ನು ಪಡೆಯುತ್ತಿದ್ದಾನೆ.

## ಕಡಿಮೆ ಕೂಲಿ ಪಡೆಯುವವರ ಪ್ರಮಾಣ ಕೋಷ್ಟಕ-೪

| ಕ್ರ.ಸಂ. | ದೌರ್ಜನ್ಯದ ಸ್ವರೂಪ | ಪ್ರಮಾಣ | ಯಜಮಾನನಿಂದ | ಗುತ್ತಿಗೆದಾರನಿಂದ | ಇತರರಿಂದ |
|---|---|---|---|---|---|
| ೧. | ದೈಹಿಕವಾಗಿ | ೧೨% | ೦೩% | ೦೭% | ೦೨% |
| ೨. | ಲೈಂಗಿಕವಾಗಿ | ೬೯% | ೩೧% | ೧೧% | ೦೪% |
| ೩. | ಮಾನಸಿಕವಾಗಿ | ೧೦% | ೦೭% | ೦೨% | ೦೧% |
| ೪. | ಇತರೆ | ೦೯% | ೦೨% | ೦೬% | ೦೧% |
| | | ೧೦೦% | | | |

ಮೇಲಿನ ಕೋಷ್ಟಕ-೪ರಲ್ಲಿ ತಿಳಿಸಿರುವಂತೆ ತನ್ನ ಜೀವನೋಪಾಯದ ಸಲುವಾಗಿ ನಿರ್ವಹಿಸುತ್ತಿರುವ ಕೃಷಿ ಕೆಲಸದಲ್ಲಿ ಹೆಣ್ಣು ಎಂಬ ಕಾರಣಕ್ಕಾಗಿ ಹತ್ತು ಹಲವು ಬಗೆಯಲ್ಲಿ ಲೈಂಗಿಕ ದುರ್ಬಳಕೆಗೆ ಬಲಿಯಾಗುತ್ತಿದ್ದಾಳೆ. ಇದರಲ್ಲಿ ಅವಳ ಯಜಮಾನನದೆ ಅತ್ಯಧಿಕ ಪಾಲಾಗಿದೆ ಶೇ ೬೯ ಅವನಿಂದ ಲೈಂಗಿಕ ದುರ್ಬಳಕೆಗೆ ಬಲಿಯಾಗುತ್ತಿದ್ದಾಳೆ. ಅಲ್ಲದೆ ಇತರ ಗುತ್ತಿಗೆದಾರ ಹಾಗೂ ಕೆಲಸಗಾರರಿಂದಲೂ ಕೂಡ ಕ್ರಮವಾಗಿ ೧೧ ಹಾಗೂ ೦೪ ರ ಅನುಪಾತದಲ್ಲಿ ಲೈಂಗಿಕವಾಗಿ ಬಲಿಯಾಗುತ್ತಿದ್ದಾಳೆ. ಅವರ ಇಚ್ಛೆಯಂತೆ ಇವಳು ವರ್ತಿಸದಿದ್ದರೆ ಅಥವಾ ಪತಿ ಸ್ಪಂಧಿಸದಿದ್ದಲ್ಲಿ ಕೆಲಸಕ್ಕೆ ತೆಗೆದುಕೊಳ್ಳದೆ ಹೊರಗಿಡುತ್ತಾರೆ. ಒಂದು ವೇಳೆ ಯಾವುದೇ ಕಾರಣದಿಂದ ಅವಳು ಹೇಗೂ ಕೆಲಸ ಮಾಡುತ್ತಿದ್ದರೂ ಮಾನಸಿಕವಾಗಿ ಅವಳಿಗೆ ಮಾನಸಿಕ ಹಿಂಸೆಯನ್ನು ಕೂಡಲಾಗುತ್ತದೆ. ಇದರಲ್ಲಿ ಯಜಮಾನನ ಪಾಲು ೦೭%, ಗುತ್ತಿಗೆದಾರರ ಪಾಲು ೦೨% ಹಾಗೂ ಇತರರ ಪಾಲು ಶೇ ೦೧% ಪಾಲು ಪಡೆದಿದ್ದಾರೆ. ಹಾಗೆಯೇ ದೈಹಿಕವಾಗಿ ೧೨%, ೦೩% ಮತ್ತು ೦೨% ದೈಹಿಕ ದುರ್ಬಳಕೆ ನಡೆಯುತ್ತಿದೆ.

[illegible]

## ಕಡಿಮೆ ಕೂಲಿ ಪಡೆಯುವವರ ಪ್ರಮಾಣ ಕೋಷ್ಟಕ-೫

| ಕ್ರ.ಸಂ. | ದೌರ್ಜನ್ಯದ ಸ್ವರೂಪ | ಪ್ರಮಾಣ |
|---|---|---|
| ೧. | ಮನೆಯ ಖರ್ಚಿಗಾಗಿ | ೬೩% |
| ೨. | ತನಗಾಗಿ | ೦೩% |
| ೩. | ಇತರರಿಗೆ | ೦೧% |
| ೪. | ಸಾಲಕ್ಕಾಗಿ | ೦೧% |
| ೫. | ಸಾಲಗಾರರಿಗಾಗಿ | ೧೨% |
| | ಒಟ್ಟು | ೧೦೦% |

ಕೋಷ್ಟಕ-೫ರಲ್ಲಿ ತಿಳಿಸಿರುವಂತೆ ಇರುವಂತೆ ತನ್ನ ಸ್ಥಿರ ದುಡಿಮೆಯ ಮೇಲೆ ನಿಯಂತ್ರಣ ಹೊಂದಿರುವ ಮಹಿಳೆಯರ ಪ್ರಮಾಣ ಕೇವಲ ೦೩ ಮಾತ್ರ. ಅದು ಕೂಡ ಕೆಲಸದ ಸ್ಥಳದಲ್ಲಿ ಬಾಹ್ಯ ಚಟುವಟಿಕೆಗಳಾದ ಟೀ, ಅಡಿಕೆ ಎಲೆ ಇತರ ಸಾಮಾನ್ಯ ಕೆಲಸಗಳಿಗಾಗಿ ಅವಳು ವಿನಿಯೋಗಿಸುತ್ತೆಂಬ ಪ್ರಮಾಣ, ತಾನೆ ಸ್ವತಃ ದುಡಿದರೂ ಕೂಡ ಅದರ ಮೇಲೆ ಅವಳು ಯಾವುದೇ ನಿಯಂತ್ರಣ ಪಡೆಯಲು ಸಾಧ್ಯವಾಗಿಲ್ಲ. ತಾನು ದುಡಿದ ಒಟ್ಟು ಕೂಲಿಯಲ್ಲಿ ಶೇ ೬೩% ಮನೆಯ ಯಜಮಾನನಿಗೆ ಒಪ್ಪಿಸಿ ತಾನು ಅವರಿಂದ ದೂರ ಉಳಿಯುತ್ತಿದ್ದಾಳೆ. ಹಾಗೆಯೇ ತಾನು ಕೂಡ ಕೆಲವು ಕಡೆ ೨೦-೩೦ ರೂಪಾಯಿ ಸಾಲವನ್ನು ಕೊಡುತ್ತಿದ್ದಾಳೆ. ಸಾಲದ ಋಣಬಂಧುತ್ವದಿಂದ ಬಳಲುತ್ತಿರುವ ಅವಳು ದುಡಿದ ಹಣದ ಶೇ ೧೨% ಸಾಲಗಾರರಿಗೆ ನೀಡುತ್ತಿದ್ದಾಳೆ.

## ಕಡಿಮೆ ಕೂಲಿ ಪಡೆಯುವವರ ಪ್ರಮಾಣ ಕೋಷ್ಟಕ-೬

| ಕ್ರ.ಸಂ. | ವಯಸ್ಸು | ಪ್ರಮಾಣ |
|---|---|---|
| ೧. | ೧೫-೨೫ | ೧೧% |
| ೨. | ೨೬-೩೫ | ೧೩% |
| ೩. | ೩೬-೪೫ | ೪೬% |
| ೪. | ೪೬-೬೦ | ೧೪% |
| ೫. | ೬೧-೭೦ | ೦೬% |
| | | ೧೦೦% |

ಮೇಲಿನ ಕೋಷ್ಟಕ-೬ ರಲ್ಲಿ ತಿಳಿಸಿರುವಂತೆ ಕೃಷಿ ಕೂಲಿಯಲ್ಲಿ ಸಹ ಭಾಗಿಯಾಗುತ್ತಿರುವ ಮಹಿಳೆಯರ ಸಂಖ್ಯೆ ಅತಿಯಾಗಿದೆ. ಅದರಲ್ಲಿ ಹದಿಹರೆಯದ ವಯಸ್ಸಿನಲ್ಲಿ ೧೫-೨೫ನೇ ವಯಸ್ಸಿನಲ್ಲಿರುವವರ ಪಾಲು ಶೇ ೧೧% ಇದೆ, ಈ ವಯಸ್ಸಿನಲ್ಲಿ ಸಾಮಾನ್ಯವಾಗಿ ಮಹಿಳೆಯರು ಕಲಿಯುವ, ಬೆಳೆಯುವ ಹಂತದವರಾಗಿರುತ್ತಾರೆ. ಅಲ್ಲದೆ ವಿವಿಧ ಬಗೆಯ ಕನಸುಗಳನ್ನು ಹೊಂದಿರುತ್ತಾರೆ. ಆದರೆ ಮನೆಯ ಆರ್ಥಿಕ ದುಸ್ಥಿತಿಯ ಕಾರಣದಿಂದ ಚಿಕ್ಕ ವಯಸ್ಸಿನಲ್ಲಿಯೇ ದುಡಿಮೆಗೆ ಬರುತ್ತಿದ್ದಾರೆ. ಹಾಗೆಯೇ ೨೬-೩೫ರ ವಯೋಮಾನದವರ ಪಾಲು ಶೇ ೧೩% ಇದೆ. ಇವರು ಮಧ್ಯವಯಸ್ಕರಾಗಿರುವರು. ಅತಿ ಹೆಚ್ಚು ಅಂದರೆ ೪೬% ಪ್ರಮಾಣ ಆವರಿಸಿರುವವರು ೩೬-೪೫ರ ವಯೋಮಾನದವರು, ೪೬-೬೦ರ ಆಸು ಪಾಸಿನವರ ಪ್ರಮಾಣ ೧೪% ಹಾಗೂ ಶೇ.೦೬%, ೬೧-೭೦ರ ವಯೋವೃದ್ಧರ ಪಾಲುಸೇರಿದೆ.

### ೩.೧.೧. ಮಹಿಳಾ ದುಡಿಮೆಯ ಸ್ತ್ರೀವಾದಿನಿರ್ವಚನ

ಮಹಿಳಾ ದುಡಿಮೆಯ ನಿರ್ವಚನ ಅಂದರೆ ಮಹಿಳಾ ದುಡಿಮೆಯ ವ್ಯಾಖ್ಯೆ ಎಂದರ್ಥ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರಗಳನ್ನು ಜ್ಞಾನ ಶಿಸ್ತುಗಳೆಂದು ಕರೆಯಲಾಗುತ್ತದೆ. ಈ ಜ್ಞಾನ ಶಿಸ್ತುಗಳಲ್ಲಿ ಅನೇಕ ವಿಭಾಗಗಳಿರುತ್ತದೆ. ಕೆಲವು ಸಾಮಾಜಿಕ ವಿಜ್ಞಾನಗಳಾಗಿದ್ದರೆ, ಕೆಲವು ಪ್ರಕೃತಿ ವಿಜ್ಞಾನಗಳಾಗಿರುತ್ತವೆ. ಇನ್ನು ಕೆಲವು ಜಾತಿ ವಿಜ್ಞಾನಗಳಾಗಿರುತ್ತದೆ. ಕೆಲವನ್ನು ಮಾನವಿಕಗಳೆಂದು ಕರೆಯುತ್ತಾರೆ. ಈ ತರದ ಜ್ಞಾನಗಳ ವರ್ಗೀಕರಣ ಇದೆ. ಈ ಎಲ್ಲಾ ಜ್ಞಾನಶಾಖೆಗಳನ್ನು ನಾವು ಲಿಂಗ ನಿರಪೇಕ್ಷ ಜ್ಞಾನಶಿಸ್ತುಗಳೆಂದು ಕರೆಯಬಹುದಾಗಿದೆ. ಅಲ್ಲದೆ ಇವುಗಳನ್ನು ಲಿಂಗ ಪಕ್ಷಪಾತಗಳೆಂದೂ ಕರೆಯಬಹುದು. ಅಂದರೆ ಈ ಜ್ಞಾನಶಿಸ್ತುಗಳು ಪುರುಷನನೇ ಪರಿಗಣಿಸುತ್ತವೆಯೇ ಹೊರತು ಕೋಶಲಿಂಗದ ಆಧಾರದ ಮೇಲೆ ವರ್ಗೀಕರಣ ಮಾಡುವುದಿಲ್ಲ. ಪುರುಷರು ಮತ್ತು ಮಹಿಳೆಯರು ಎನ್ನುವ ಅಸ್ಥಿತ್ವವನ್ನು ಅವು ಗುರುತಿಸುವುದಿಲ್ಲ. ಅಖಂಡವಾದ ಪರಿಕಲ್ಪನೆಯನ್ನು ಇವು ಹೊಂದಿದೆ. ಆದರೆ ನಾವು ಅಖಂಡತೆಯ ಒಳಗಡೆ ಹೋಗಿ ಸೂಕ್ಷ್ಮವಾಗಿ ನೋಡಿದಾಗ ಅದರಲ್ಲಿ ಬಡವರು, ಶ್ರೀಮಂತರು, ಗ್ರಾಮೀಣ ಜನ ಮತ್ತು ನಗರ ಪ್ರದೇಶದವರು, ಓದಿದವರು ಮತ್ತೆ ಓದಿಲ್ಲದವರು, ಉದ್ಯೋಗಿಗಳು ಮತ್ತು ನಿರುದ್ಯೋಗಿಗಳೆಂದು ವರ್ಗೀಕರಿಸಬಹುದು. ಆದರೆ ಈ ಜ್ಞಾನ ಶಿಸ್ತುಗಳು ಈ ವರ್ಗೀಕಣವನ್ನು ಒಂದು ಹಂತದವತರೆಗೆ ಒಪ್ಪಿಕೊಳ್ಳಬಹುದಾದರೂ ಸಾಮಾನ್ಯವಾಗಿ ಈ ಎಲ್ಲಾ ಜ್ಞಾನಶಿಸ್ತುಗಳು ಅಖಂಡ ಪರಿಕಲ್ಪನೆಯನ್ನು ಹಿಡಿದುಕೊಳ್ಳುತ್ತವೆ. ಅವುಗಳು ಒಳಗಡೆ ಇರುವ ವರ್ಗೀಕರಣವನ್ನಾಗಲಿ, ಭಿನ್ನತೆಯನ್ನಾಗಲಿ, ಅದು ಗುರುತಿಸುವುದಿಲ್ಲ. ಮಹಿಳೆಯರ ದೃಷ್ಟಿಯಿಂದಲೂ ಸಹ ಅಷ್ಟೇ ಪುರುಷರು ಮತ್ತು ಮಹಿಳೆಯರು ಎಂದು ಅವು ವಿಂಗಡಿಸುವುದಿಲ್ಲ.

ಆದರೆ ಈ ಜ್ಞಾನಶಿಸ್ತುಗಳಲ್ಲಿ ಈ ರೀತಿಯ ವರ್ಗೀಕರಣಕ್ಕೆ ಅವಕಾಶವಿರುವುದಿಲ್ಲ. ಅದಕ್ಕೆ ಅವುಗಳನ್ನು ಅವು ಲಿಂಗನಿರಪೇಕ್ಷ ಜ್ಞಾನಶಿಸ್ತುಗಳಾಗಿರುತ್ತವೆ. ಪುರುಷರಿಗೆ ಏನು ಅನ್ವಯವಾಗುತ್ತದೆಯೇ ಅದು ಮಹಿಳೆಯರಿಗೆ ಸಹ ಅನ್ವಯವಾಗುತ್ತದೆ. ಎಂದು ಅವು ತಿಳಿಯುತ್ತವೆ. ದುಡಿಮೆಗೆ ಸಂಬಂಧಪಟ್ಟಂತೆ ಸಹ ಹಾಗೆಯೇ. ಈ ಕಾರಣದಿಂದಾಗಿ ಈ ಜ್ಞಾನ ಶಿಸ್ತುಗಳಲ್ಲಿ ಮಹಿಳಾ ದುಡಿಮೆ ಎಂಬುದು ಇಲ್ಲ. ಕೇವಲ ದುಡಿಮೆಯೆಂದರೆ ದುಡಿಮೆ ಅಷ್ಟೇ ಅಲ್ಲದೆ ಈ ದುಡಿಮೆಯನ್ನು ಹೇಗೆ ನಿರ್ವಹಿಸಲಾಗಿದೆ ಎಂದರೆ ದುಡಿಮೆ ಎಂದರೆ ಮಾರುಕಟ್ಟೆಗಾಗಿ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವಂಥ ಕ್ರಿಯೆಯನ್ನೇ ದುಡಿಮೆ ಎಂದು ಕರೆಯಲಾಗುತ್ತದೆ. ಇದು ಅರ್ಥಶಾಸ್ತ್ರದಲ್ಲಿ ಅಥವಾ ಸಮಾಜಶಾಸ್ತ್ರದಲ್ಲಿ ದುಡಿಮೆಯ ನಿರ್ವಚನವಾಗಿದೆ. ಮಾರಾಟದ ಉದ್ದೇಶದಿಂದ ವಸ್ತುಗಳನ್ನು ಸರಕಗಳನ್ನೇ ತಯಾರಿಸುವಂಥ ಒಂದು ಚಟುವಟಿಕೆಯನ್ನು ದುಡಿಮೆಯೆಂದು ಕರೆಯಲಾಗುತ್ತದೆ. ದುಡಿಮೆಯೆಂಬುದು ಮಾರುಕಟ್ಟೆ ಸಂಬಂಧಿಸಿರುತ್ತದೆ. ಮಾರುಕಟ್ಟೆಯನ್ನು ಹೊರತು ಪಡಿಸಿ ದುಡಿಮೆಯನ್ನು ಪರಿಭಾವಿಸಿ ಕೊಳ್ಳುವುದಕ್ಕೆ ಅರ್ಥಶಾಸ್ತ್ರದಲ್ಲಿ ಸಾಧ್ಯವಿಲ್ಲ.

ಇದು ದುಡಿಮೆಯ ನಿರ್ವಚನದ ಬಹುಮುಖ್ಯವಾದಂಥ ನೆಲೆ, ಇಲ್ಲಿ ಮಾರುಕಟ್ಟೆಗೆ ದುಡಿಮೆ ಸಂಬಂಧಿಸಿರುತ್ತದೆ ಮತ್ತು ದುಡಿಮೆಯಿಂದ ಏನಾದರೂ ಭೌತಿಕವಾಗಿ ಉತ್ಪನ್ನ ಬರಬೇಕಾಗುತ್ತದೆ. ಸರಕು ಮತ್ತು ಸೇವೆಗಳಿಂದಾದ ಪ್ರಯತ್ನದಿಂದ ಪ್ರತಿಫಲ ಉತ್ಪನ್ನದ ರೂಪದಲ್ಲಿ ಬರದೇ ಇದ್ದರೆ ಅದು ದುಡಿಮೆ ಎಂದೆನಿಸಿಕೊಳ್ಳುವುದಿಲ್ಲ. ಮೂರನೆಯದಾಗಿ ಸರಕು ಸೇವೆಗಳಿಗೆ ಸಂಬಂಧಿಸಿದ್ದಾಗಿದ್ದು, ದುಡಿಮೆಯನ್ನು ಹಣದ ರೂಪದಲ್ಲಿ ಗುರುತಿಸಲಾಗುತ್ತದೆ. ಮಾಪನ ಮಾಡಲಾಗುತ್ತದೆ. ಹಣವಿಲ್ಲದೇ ದುಡಿಮೆಯನ್ನು ಪರಿಭಾವಿಸಿಕೊಳ್ಳುವುದೂ ಸಾಧ್ಯವಿಲ್ಲ ಮತ್ತೊಂದು ರೀತಿಯಿಂದಲೂ ಸಹ ದುಡಿಮೆಯನ್ನು ಹೇಗೆ ಪರಿಭಾವಿಸಿಕೊಳ್ಳಲಾಗುತ್ತದೆ ಮತ್ತು ನಿರ್ವಚಿಸಿಕೊಳ್ಳಲಾಗಿದೆ ಎಂಬುದನ್ನೆ ನೋಡಬಹುದು. ಈ ಸಮಾಜ ವಿಜ್ಞಾನಗಳಲ್ಲಿ ದುಡಿಮೆಯನ್ನು ಮನುಷ್ಯನಿಗೆ ಬಾಹ್ಯವಾದ ಸಂಗತಿ ಎಂದು ಪರಿಭಾವಿಸಿಕೊಳ್ಳಲಾಗುತ್ತದೆ. ದುಡಿಮೆಗಾರರು ತಮ್ಮ ದುಡಿಮೆಯನ್ನು ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಹೊರತು ಮನುಷ್ಯರಿಂದ ಕೂಲಿ ಅಲ್ಲ. ಈ ಹಿನ್ನೆಲೆಯಲ್ಲಿ ದುಡಿಮೆ ಮನುಷ್ಯನಿಗೆ ಬಹಳವಾದುದು ಎಂದು ಹೇಳಲಾಗುತ್ತದೆ.

ಹೀಗೆ ದುಡಿಮೆಯನ್ನು ಗುರುತಿಸಿಕೊಂಡು, ಅರ್ಥೈಸಿಕೊಂಡು, ನಿರ್ವಚಿಸಿಕೊಂಡು ಬರಲಾಗಿದೆ. ಈ ರೀತಿ ದುಡಿಮೆಯನ್ನು ನಿರ್ವಚಿಸಿ ಕೊಂಡಿದ್ದಕ್ಕಾಗಿ ಈ ವ್ಯಾಖ್ಯೆಯ ಒಳಗಡೆ ಬರಲಾಗದ ಅನೇಕ ಸಂಗತಿಗಳಿವೆ ಅಂದರೆ ಮಾರುಕಟ್ಟೆಗೆ ಸಂಬಂಧಪಡದೇ ಇರುವ ಸಂಗತಿಗಳಿವೆ. ಸರಕು ಮತ್ತು ಸೇವೆಗಳ ಉತ್ಪಾದನೆಯಲ್ಲಿ ಪರ್ಯಾವಸಾನ ಇರುವ ಅನೇಕ ದುಡಿಮೆಗಳಿರುತ್ತದೆ. ಚಟುವಟಿಕೆಗಳಿರುತ್ತವೆ ಮತ್ತು ಹಣಕ್ಕೆ ಸಂಬಂಧಪಟ್ಟ ಅನೇಕ ಚಟುವಟಿಕೆಗಳಿರುತ್ತವೆ. ಆದರೆ ಈ ರೀತಿಯ ವ್ಯಾಖ್ಯೆಯಿಂದ ಹೊರತಾಗಿ ಉಳಿಯುವ ಚಟುವಟಿಕೆಗಳನ್ನು ಬಹುಪಾಲನೇ ಮಾಡುವವರು ಮಹಿಳೆಯರೇ ಆಗಿರುತ್ತಾರೆ. ಆದ್ದರಿಂದ ಮಹಿಳೆಯರ ದುಡಿಮೆಯ ಚಟುವಟಿಕೆಗಳನ್ನು ಸಾಂಪ್ರದಾಯಿಕ ಜ್ಞಾನಶಿಸ್ತುಗಳು ತಮ್ಮ ವ್ಯಾಪ್ತಿಯ ಒಳಗಡೆ ಸೇರಿಸಿಕೊಂಡಿಲ್ಲ. ಆದ್ದರಿಂದಲೇ ಈ ಎಲ್ಲಾ ಜ್ಞಾನಶಿಸ್ತುಗಳು ಲಿಂಗ ತಾರತಮ್ಯವನ್ನು ಎಣಿಸುತ್ತಿವೆ ಎಂದು ಟೀಕಿಸಲಾಗುತ್ತದೆ. ಆದರೆ ಈ ವ್ಯಾಖ್ಯಾಯ ಒಳಗಡೆ ಇರದೇ ಇರುವ ಚಟುವಟಿಕೆಗಳೂ ಸಹ ದುಡಿಯಲು ವ್ಯಾಖ್ಯೆಯಲ್ಲಿ ಸೇರಿಕೊಳ್ಳಬೇಕು ಎಂಬುದೊಂದು ಪ್ರತಿಪಾದನೆಯಿದೆ. ಮಹಿಳಾ ಅಧ್ಯಯನ ಮತ್ತು ಸ್ತ್ರೀವಾದ ಪ್ರತಿಪಾದನೆ ಎಂದರೆ ಮಾರುಕಟ್ಟೆಗೆ ಸಂಬಂಧಿಸಿದ ಚಟುವಟಿಕೆಗಳಾಗಿವೆ ಅಥವಾ ಹಣಕ್ಕೆ ಸಂಬಂಧಿಸದ ಚಟುವಟಿಕೆಗಳೇನಿವೆಯೋ ಅವಾಸಹ ದುಡಿಮೆಯುಂದು ಪರಿಗಣಿಸಬೇಕು. ದುಡಿಮೆಯೆಂದು ಗುರುತಿಸಬೇಡದಂಥ ಅಗತ್ಯ ಇದೆ. ಈ ಬಗೆಯ ಚಟುವಟಿಕೆಗಳು ಬಹುಭಾಗವನ್ನು ಮಹಿಳೆಯರೇ ನಿರ್ವಹಿಸುತ್ತಾರೆ.

"ಮಹಿಳಾ ದುಡಿಮೆಗಾರರು ವ್ಯಾಖ್ಯೆಯನ್ನು ಪ್ರತ್ಯೇಕವಾಗಿ ಶ್ರಮದ ಲಕ್ಷಣಗಳ ಆಯಾಮಗಳೇನು ಎಂಬುದನ್ನು ಚರ್ಚೆ ಮಾಡುತ್ತಾರೆ. ಆದರೆ ಮಹಿಳೆಯರ ಮತ್ತು ಪುರುಷರ ದುಡಿಮೆಗಳನ್ನು ಪ್ರತ್ಯೇಕವಾಗಿ ಚರ್ಚೆ ಮಾಡುವಂಥ ಶ್ರಮ ಮತ್ತು ಪದ್ಧತಿ ಅಲ್ಲಲ್ಲಿ ಕಂಡುಬರುತ್ತದೆ. ಮಹಿಳಾ ಅಧ್ಯಯನಕಾರರು ಒತ್ತಾಯ ಪಡಿಸುತ್ತಿರುವಂಥದೇನೆಂದರೆ ಲಿಂಗ ತಾರತಮ್ಯ ಹೋಗಲಾಡಿಸಬೇಕಾದರೆ,

ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನ ದೊರೆಯಬೇಕೆಂದರೆ, ಮಹಿಳೆಯರ ದುಡಿಮೆಯನ್ನು ಪರಿಗಣಿಸದೇ ಇರುವುದರಿಂದ ಅವರ ದುಡಿಮೆಯನ್ನು ದುಡಿಮೆಯ ವ್ಯಾಖ್ಯಾನವ ಒಳಗಡೆ ಸೇರಿಸುತ್ತಿಲ್ಲ. ಅವರ ದುಡಿಮೆಯೂ ಇದರಿಂದ ಅದೃಶ್ಯಗೊಳ್ಳುತ್ತಿದೆ. ದುಡಿಮೆಗಾರರು ಎಂದು ಗುರುತಿಸುವ ಪ್ರಮೇಯವೇ ಇಲ್ಲದಂತಾಗಿದೆ. ಅಂದರೆ ವರಮಾನಗಳಿಕೆದಾರರು, ವರಮಾನದ ಸಂಪಾದನಕಾರರೆಂದು ಮಹಿಳೆಯರನ್ನು ಗುರುತಿಸತೊಡುತ್ತಿಲ್ಲ. ಹಾಗಾಗಿ ಮಹಿಳೆಯರ ಚಟುವಟಿಕೆ ಅದೃಶ್ಯವಾಗುತ್ತದೆ. ಮಹಿಳೆಯರನ್ನೇ ಮೂಲತಃ ಕೇವಲ ಗೃಹಿಣಿಯರೆಂದು ಗುರುತಿಸಲಾಗುತ್ತಿದೆಯೇ ಹೊರತು ದುಡಿಮೆಗಾರರು ಎಂದು ಗುರುತಿಸುತ್ತಿಲ್ಲ. ಗೃಹಿಣಿಯರನ್ನು House wife ಎಂದು ಪರಿಗಣಿಸಲಾಗುತ್ತಿದೆಯೇ ಹೊರತು ಅವಳು ಪುರುಷನಷ್ಟೆ ಸಮಾನಗಳು ಎಂದು ಪರಿಗಣಿಸುತ್ತಿಲ್ಲ."[೬] (ಮಹಿಳಾ ಆರ್ಥಿಕತೆ, (ಸಂ) ಡಾ.ಎಚ್.ಎಸ್.ಶ್ರೀಮತಿ, ಪುಟ-೨೨) ಆದ್ದರಿಂದ ಗೃಹಿಣಿಯ ಚಟುವಟಿಕೆಗಳುಕೆಲಸಗಳು ದುಡಿಮೆ ಎಂದು ಪರಿಗಣಿಕೆವಾಗುತ್ತಿಲ್ಲ. ಅದು ಮಾರುಕಟ್ಟೆಗೆ ಸಂಬಂಧಿಸಿರುವುದಿಲ್ಲ. ತನಗೆ ಸಂಬಂಧಿಸಿರುತ್ತದೆ. ಅದು ಉತ್ಪಾದನೆ ಮತ್ತು ಹಣಕ್ಕೆ ಸಂಬಂಧ ಪಟ್ಟಿರುವುದಿಲ್ಲ. ಗೃಹಿಣಿಯ ಚಟುವಟಿಕೆಗೆ ಯಾರೂ ಕೂಲಿ ಕೊಡುವುದಿಲ್ಲ. ಉತ್ಪಾದನೆ ಮಾಡದಂಥ ಸರಕುಗಳನ್ನು ಮಾರಾಟ ಮಾಡುವುದಿಲ್ಲ. ಹೀಗಾಗಿ ಸಾಂಪ್ರಾದಾಯಿಕ ಜ್ಞಾನ ಶಿಸ್ತುಗಳಲ್ಲಿ ಗೃಹಿಣಿಯ ಕೆಲಸ ಕಾರ್ಯಗಳು ದುಡಿಮೆ ಎಂದು ಪರಿಗಣಿತವಾಗಿಲ್ಲ. ಬದಲಿಗೆ ಒಂದು ಸೇವೆ ಉಚಿತನೀತಿ ಎಂದೂ ಪರಿಗಣವಾಗುತ್ತದೆ. "ಈ ಕಾರಣದಿಂದಾಗಿ ಮಹಿಳೆಯರ ದುಡಿಮೆ ಸಮಾಜದಲ್ಲಿ ಮನ್ನಣೆಗೆ ಒಳಗಾಗುವುದಿಲ್ಲ. ಎರಡನೇದಾಗಿ ಆರ್ಥಿಕವಾದಂಥ ಯಾವುದೇ ದಾಖಲಗೆ ಒಳಗಾಗುವುದಿಲ್ಲ. ರಾಷ್ಟ್ರೀಯ ವರಮಾನದಲ್ಲಿ ಇವರ ಗಳಿಕೆಯೂ ಸೇರ್ಪಡೆಗೊಳ್ಳುತ್ತಿಲ್ಲ. ಗೇಣಿ, ಕೂಲಿ, ಬಡ್ಡಿ, ಲಾಭಾಂಶ ಇವುಗಳ ಒಟ್ಟು ಮೊತ್ತವನ್ನು ರಾಷ್ಟ್ರೀಯ ಏಕೀಕರಣ ಎಂದು ಕರೆಯಲಾಗುತ್ತದೆ. ಶ್ರಮ ಮತ್ತು ಸಂಪಾದನೆಯ ಗಣನೆಗೆ ಗೃಹ ಕೃತ್ಯಗಳು ಸೇರುವುದಿಲ್ಲ. ಅದಕ್ಕೆ ಮನ್ನಣೆ ಇಲ್ಲ. ಜ್ಞಾನಶಿಸ್ತುಗಳನ್ನು ಪರಿಗಣಿಸುವುದಿಲ್ಲ. ಸರ್ಕಾರದ ಗಣನೆಯಲ್ಲಿ ಅದು ಒಳಗೊಳ್ಳುವುದಿಲ್ಲ. ಈ ಹಲವಾರು ಕಾರಣಗಳಿಂದಾಗಿ ಮಹಿಳೆಯರ ದುಡಿಮೆಯು ಅದೃಶ್ಯವಾಗುತ್ತದೆ. ಹೀಗೆ ಲಿಂಗ ತಾರತಮ್ಯ ಇರಬಹುದು ಅದೃಶ್ಯವಾಗಿ ಪರಿಣಮಿಸಬಹುದು. ಈ ತರಹದ ಮಿತಿಗಳನ್ನು ಲೋಪಗಳನ್ನು ಸರಿಪಡಿಸಿಕೊಳ್ಳಬೇಕಾದರೆ ಮಹಿಳಾ ದುಡಿಮೆಯನ್ನು ಖಚಿತವಾಗಿ ನಿರ್ವಚಿಸಿಕೊಳ್ಳಬೇಕಾಗಿದೆ."[೭] (ಚಂದ್ರಶೇಖರ ಟಿ.ಆರ್, ೨೨. ೨೦೦೭)

### ೩.೧.೨ ಮಹಿಳಾ ದುಡಿಮೆಯ ಸ್ವರೂಪ

ಸಾಮಾಜಿಕ ಜೀವನದಲ್ಲಿ ವ್ಯಕ್ತಿಗಳು ನಿರ್ವಹಿಸುವ ಕಾರ್ಯಗಳು ಅವರಿಗೆ ಒಂದು ಸಾಮಾಜಿಕ ಚಹರೆಯನ್ನು ತಂದುಕೊಡುತ್ತವೆ. ಪುರುಷ ಹೊರಗೆ ದಿನನಿತ್ಯ ಹತ್ತು ರೂಪಾಯಿ ಸಂಪಾದಿಸಿದರೂ ಕೂಡ ಅವನಿಗೆ ಅಪಾರ ಮನ್ನಣೆ ಸಿಗುತ್ತದೆ. ಆದರೆ ಮಹಿಳೆಯಾದವಳು ದಿನಕ್ಕೆ ನೂರು ರೂಪಾಯಿ ಸಂಪಾದಿಸಿದರೂ ಅವಳಿಗೆ ಯಾವುದೇ ಬಗೆಯ ಗೌರವ ಸಿಗುವುದಿಲ್ಲ. ದುಡಿಮೆ ಎಂಬುದು ಮೂಲತಃ

ಪುರುಷಮಯವಾಗಿದೆ. ಅದು ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ತಂದುಕೊಡಬಾರದಂತಹ ಉದ್ಯೋಗವಕಾಶಗಳನ್ನು ಸಂಕುಚಿತ ನೆಲೆಯಲ್ಲಿ ಒದಗಿಸಿಕೊಟ್ಟಿದೆ ಎಂದರೆ ತಪ್ಪಾಗರಾದು. ಆದರೆ ವಾಸ್ತವಾಂಶಗಳ ಆಧಾರದ ಮೇಲೆ ಅವಲೋಕಿಸಿದಂತೆ ನಮ್ಮ ಭಾರತೀಯ ಸಾಂಪ್ರದಾಯಿಕ ಪರಂಪರೆಯುದ್ದಕ್ಕೂ ಅವಾಹತವಾಗಿ ನಡೆದುಕೊಂಡು ಬಂದಿರುವ ಪುರುಷ ನಿರ್ದೇಶಿತ ಅಂಶಗಳು ಅವಳ ಅಸ್ತಿತ್ವವನ್ನೇ ಗೌಣವಾಗಿಸಿವೆ.

ಮಹಿಳೆ ಸಾಮಾಜಿಕ ಚಹರೆ ಹಾಗೂ ದುಡಿಮೆಯ ಕುರಿತಾಗಿ "ಅಮಾರ್ತ್ಯಸೇನರು ಹೇಳುವ ಬಾರ್ಗೆನಿಂಗೆ ಮಾಡಲ್ ಆಫ್ ಹೌಸ್ ಹೋಲ್ಡ್" ಎಂಬ ಸಿದ್ಧಾಂತವು ಮೇಲಿನ ಮಹಿಳಾ ಸಾಮಾಜಿಕ ಚಹರೆಗೆ ಪೂರಕವಾದ ಮಾಹಿತಿಯನ್ನು ಒದಗಿಸುತ್ತದೆ. ಇವರ ಪ್ರಕಾರ ಕೌಟುಂಬಿಕ ವ್ಯವಸ್ಥೆ ಎನ್ನುವುದು ಪರಸ್ಪರ ಚೌಕಾಸಿಗಳನ್ನು ಮಾಡುವಂಥ ಪಾರ್ಟಿಗಳನ್ನು ಕೊಡಿಸುವ ಸಂಸ್ಥೆಗಳನ್ನು ಲಿಂಗಾಧಾರಿತವಾದ ಸಂಸ್ಥೆಗಳೆನ್ನುತ್ತಾರೆ. ಅವರು ಹೇಳುವಂತೆ ಕೌಟುಂಬಿಕ ವ್ಯವಸ್ಥೆಯಲ್ಲಿ ಸಂಪನ್ಮೂಲ ಹಂಚಿಕೆ ನಿರ್ಧಾರ ಕೈಗೊಳ್ಳುವಿಕೆ, ಜವಾಬ್ದಾರಿ ಹಂಚಿಕೆ, ಚೌಕಾಶಿ ಮಾಡಲು ಅವಕಾಶವಿರುತ್ತದೆ. ಚೌಕಾಶಿ ಮಾರುಕಟ್ಟೆಯಲ್ಲಿ ಬರ್ಗೆನಿಂಗ್ ಮಾಡಲ್ ಉನ್ನತವಾದ ಮಾದರಿ ಒಳ್ಳೆಯ ಫಲಿತಾಂಶ ಕೊಡುತ್ತದೆ. ಮಾದರಿಯನ್ನು ಕುಟುಂಬದಲ್ಲಿ ತಂದು ಸೇರಿಸಿದಾಗ ಸ್ತ್ರೀಪುರುಷರಿಬ್ಬರಿಗೂ ಚೌಕಾಶಿ ಮಾಡುವ ಅಧಿಕಾರ ಬರುತ್ತದೆ. ಆದರೆ ಚೌಕಾಶಿಯಲ್ಲಿ ಭಿನ್ನತೆ ಇರುತ್ತದೆ. ಮಹಿಳೆ ಕಡಿಮೆ ಬರುತ್ತದೆ. ಆದರೆ ಚೌಕಾಶಿಯಲ್ಲಿ ಭಿನ್ನತೆ ಇರುತ್ತದೆ. ಮಹಿಳೆ ಕಡಿಮೆ ಬಾರ್ಗೆನಿಂಗ್ ಪವರ್ ಹೊಂದಿದ್ದು ಕುಟುಂಬ ರಚನೆ ಪುರುಷ ಪ್ರಧಾನತೆಯಿಂದ ಕೂಡಿದ್ದರಿಂದ ಪುರುಷ ಪ್ರಭಲ ಬಾರ್ಗೆನಿಂಗ್ ಪವರ್ ಪಡೆದಿರುತ್ತಾನೆ."[೫] (ಛಾಯಾ ದೇಗಾಂವಕರ್, ೩೦.೨೦೦೭) ಮನೆಯ ಕೌಟುಂಬಿಕ ಜವಾಬ್ದಾರಿಗಳು ಮೂಲತಃ ಲಿಂಗಾಧಾರಿತವಾದ ಮೂಲ ನೆಲೆಯಲ್ಲಿ ತುಂಬ ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿವೆ. ಮಹಿಳೆಗೆ ತನ್ನ ದುಡಿಮೆಯಿಂದ ಸಾಮಾಜಿಕ, ಕೌಟುಂಬಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹಿಡಿತ ಅಥವಾ ಅಸ್ತಿತ್ವ ಪಡೆಯಲು ಸಂಪನ್ಮೂಲಗಳ ಮೇಲೆ ನಿಯಂತ್ರಿಸಿರಲೇಬೇಕು ಎಂಬುದು ಅತಿ ಮುಖ್ಯ ಎಂದು ಮೇಲಿನ ವಿಚಾರಧಾರೆ ವಿಶ್ಲೇಷಿಸುತ್ತದೆ.

ಪ್ರಾಪಂಚಿಕ ಜೀವನದಲ್ಲಿ ನಡೆಯುವ ಪ್ರತಿಯೊಂದು ಕಾರ್ಯಚಟುವಟಿಕೆಗಳ ಆಯಾ ವ್ಯಕ್ತಿಗಳು ಸಂಪನ್ಮೂಲಗಳ ಮೇಲೆ ಹೊಂದಿರುವ ಹಿಡಿತ ಆಧರಿಸಿರುವಂಥದ್ದೆ. ಇಲ್ಲಿ ಮಹಿಳೆಗೆ ಸಂಪನ್ಮೂಲಗಳ ಮೇಲೆ ನಿಯಂತ್ರಣ ಹಾಗೂ ಮಾನವ ಬಂಡವಾಳ ಹೆಚ್ಚಿಸಲಿಕ್ಕೆ ಬೇಕಾದಂತಹ ಸಂಪನ್ಮೂಲಗಳನ್ನು ಸದೃಢಗೊಳಿಸಲಿಕ್ಕೆ ಅವಳಿಗೆ ಸಂಪನ್ಮೂಲಗಳ ಮೇಲೆ ನಿಯಂತ್ರಣವಿರುತ್ತದೆ. ಆದರೆ ಪುರುಷನಾದವನು ತನ್ನ ಅಧಿಕಾರದ ಮೇಲೆ ನಿಶಕ್ತತೆ ಹೆಚ್ಚಿಸಿ ಸಂಪನ್ಮೂಲ ಪಡೆದು ತನ್ನ ಮಾನವ ಬಂಡವಾಳವನ್ನು ಹೆಚ್ಚಿಸಿಕೊಳ್ಳುತ್ತಾನೆ. ಇದರಿಂದ ಸಹಜವಾಗಿ ಅವನಿಗೆ ಬಾಹ್ಯ ಜಗತ್ತಿನಲ್ಲಿ ಶ್ರಮಶಕ್ತಿ ಭಾಗವಹಿಸುವಿಕೆಯಲ್ಲಿ ಸಬಲತೆ ಸಾಧ್ಯವಾಗುತ್ತದೆ.

ಹೀಗೆ ಸಮಾಜದಲ್ಲಿ ಮಹಿಳೆಯ ಕುರಿತಾಗಿರುವ ಅವೈಚಾರಿಕವಾದ ಪುರುಷನಿಷ್ಠವಾದ ಚಿಂತನೆಗಳು ಮರೆಯಾಗಬೇಕು ಮಹಿಳೆಯರ ದುಡಿಮೆಗೆ, ಸಹಭಾಗಿತ್ವಕ್ಕೆ, ವ್ಯಕ್ತಿತ್ವ, ಅಸ್ತಿತ್ವ, ಸೃಜನಶೀಲತೆಗಳಿಗೆ ಅವಕಾಶ ಸಿಗಲು ಸ್ಥಾಪಿತ ಪುರುಷ ನಿಷ್ಠ ಮೌಲ್ಯಗಳ ಮರು ರಚನೆ ಅಗತ್ಯ. ಇದು ಸಾಮಾಜಿಕರಣದಿಂದಲೇ ಮಾತ್ರ ಸಾಧ್ಯ. ಕುಟುಂಬದ ಒಳಗಡೆ ಬದಲಾವಣೆ ಆಗಬೇಕೆಂದರೆ, ಪುರುಷ ದೃಷ್ಠಿಕೋನ ಬದಲಾವಣೆ ಆಗಬೇಕು. ಅವಳ ಕೆಲಸಕ್ಕೆ ಕುಟುಂಬ, ಸಮಾಜದಲ್ಲಿ ಮಾನ್ಯತೆ ಸಿಕ್ಕು ಅವಳಿಗೂ ಒಂದು ಸಾಮಾಜಿಕ ಮೌಲ್ಯ ಒದಗಿಸಿದರೆ ಲಿಂಗ ನಿರಾಪೇಕ್ಷ ಪ್ರಮೀಳಾ ಸಾಮ್ರಾಜ್ಯದ ಸ್ಥಾಪನೆಗೆ ರಹದಾರಿ ಸಿಗಬಲ್ಲದು.

ಮಹಿಳಾ ಸಾಮಾಜಿಕ ಸ್ಥಿತಿಗತಿ ಕುರಿತಂತೆ ಹೆಚ್ಚಿನ ವಿಷಯ ತಿಳಿಯಲು ಕೋಷ್ಠಕಗಳನ್ನು ಹಾಕಲಾಗಿದೆ. ಇವುಗಳ ಮೂಲಕ ಹೆಚ್ಚು ವಾಸ್ತವಾಂಶಗಳ ಚಿತ್ರಣ ದೊರೆಯಬಲ್ಲದು ಎಂಬ ವಿಶ್ವಾಸದೊಂದಿಗೆ ಕ್ಷೇತ್ರಕಾರ್ಯಾಧಾರಿತವಾದ ವಾಸ್ತವಾಂಶಗಳಡಿಯಲ್ಲಿ ಕೃಷಿ ಕಾರ್ಮಿಕ ಮಹಿಳೆಯ ನೈಜಸ್ಥಿತಿಯನ್ನು ಅವಳ ಸಾಮಾಜಿಕ ಸ್ಥಿತಿಗತಿಗೆ ತಕ್ಕಂತೆ ಚಿತ್ರಿಸಲಾಗಿದೆ.

**೩.೨. ಆರ್ಥಿಕ ಸ್ಥಿತಿಗತಿ**

ಯಾವುದೇ ಒಂದು ಪ್ರದೇಶ ಅಭಿವೃದ್ಧಿಯಾಗಬೇಕಾದರೆ ಆ ಪ್ರದೇಶದಲ್ಲಿರುವಂಥ ಮಹಿಳೆಯರು ಸಮಾನಾಗಿ ಆರ್ಥಿಕ ವಲಯದಲ್ಲಿ ತೊಡಗಿಸಿಕೊಳ್ಳಬೇಕು. ಕೃಷ್ಣವಲಯಕ್ಕೆ ಬರಬೇಕು ಅಂದಾಗ ಮಾತ್ರ ಆ ಪ್ರದೇಶದಲ್ಲಿ ಪ್ರಗತಿ ಅಥವಾ ಅಭಿವೃದ್ದಿಯಾಗುತ್ತದೆ. ಆದರೆ ವಿಪರ್ಯಾಸವೆಂದರೆ ಕೃಷಿಯಲ್ಲಿ ಕೇವಲ ಪುರುಷನಲ್ಲದೆ ಮಹಿಳೆಯರ ಪಾತ್ರವು ಪ್ರಮುಖವಾದುದಾಗಿರುತ್ತದೆ. ಕೃಷಿಯಲ್ಲಿ ಮಹಿಳೆಯರ ಪಾಲು ಎಷ್ಟೇ ಇದ್ದರೂ ಸಹ ಅಲ್ಲಿ ಪ್ರಮುಖನಾಗಿ ಪುರುಷನು ಕಾಣಿಸಿಕೊಳ್ಳುತ್ತಾನೆ. ಪುರುಷನು ನಿಭಾಯಿಸುವ ಕೆಲಸವನ್ನು ಶ್ರೇಷ್ಠವೆಂದು ಉತ್ಪಾದನೆಯ ಮೌಲ್ಯ ಹೊಂದಿದ್ದಾನೆಂದು ನಿರ್ವಚಿಸಿ ಅವನ ದುಡಿಮೆಗೆ ಮೌಲ್ಯ ಒದಗಿಸಲಾಗಿದೆ. ಆದರೆ ಮಹಿಳೆಯರು ನಿರ್ವಹಿಸಿಕೊಂಡು ಹೋಗುವ ದುಡಿಮೆಗೆ ಮೌಲ್ಯವಿಲ್ಲ. ಅದು ಯಾವುದೇ ಆಗಿರಬಹುದು. ಗೃಹಕೃತ್ಯವಾಗಿರಬಹುದು ಅಥವಾ ಮರು ಉತ್ಪಾದನಾ ಕ್ರಿಯೆಯಾಗಿರಬಹುದು. ಇವುಗಳಿಗೆ ಉತ್ಪಾದನೆಯ ಮೌಲ್ಯವಿಲ್ಲ, ಮಹಿಳೆಯು ಈ ಜೈವಿಕ ವ್ಯತ್ಯಾಸದಿಂದ ಮತ್ತು ನೈಸರ್ಗಿಕ ಕ್ರಿಯೆಯಾದ ಮರು ಉತ್ಪಾದನೆಯು ಮೌಲ್ಯವಿಲ್ಲದಂತಾಗಿ ಪುರುಷನಿಂಗಿಂತಲೂ ಕನಿಷ್ಠ ಎಂದು ಪರಿಗಣಿಸಲಾಗುತ್ತಿದೆ.

ಮಹಿಳೆಯರ ದುಡಿಯುತ್ತಿರುವ ಉತ್ಪಾದಕ ಮುಖ್ಯವೆಂದು ಗುರುತಿಸಬೇಕು ಅವಳು ಮರುಉತ್ಪಾದನಾ ಸಮರ್ಥ್ಯವನ್ನು ಅಲಕ್ಷಿಸದೇ ಮೌಲ್ಯೀಕರಿಸಬೇಕೆಂದು ಅನೇಕ ಸ್ತ್ರೀವಾದಿಗಳು ಪದೇ ಪದೇ ಧ್ವನಿಯನ್ನು ಎತ್ತುತ್ತಾರೆ. ದೈಹಿಕವಾಗಿ ಪ್ರಬಲನೆನಿಸಿಕೊಂಡಿರುವ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿರುವಂತಹ ಪುರುಷನು ಮನೆಯ ಯಾವುದೇ ಕೆಲಸವನ್ನು ಮಾಡುವುದಿಲ್ಲ. ಅವನದು ಏನಿದ್ದರೂ ಹೊರಗೆ ಹೋಗಿ ದುಡಿಯುವ ಪ್ರವೃತ್ತಿಹಾಗೆ ಕೃಷಿಯಲ್ಲಿ ಉಳುಮೆ ಮಾಡುವುದು ಪ್ರಮುಖದಾಗಿರುತ್ತದೆ. ಈ ಪುರುಷ ಪ್ರಧಾನ ವ್ಯವಸ್ಥೆಯು ಗಾಡಿನ ಕೆಲಸವನ್ನು ಶ್ರೇಷ್ಠವೆಂದು ಪರಿಗಣಿಸುತ್ತಾರೆ. ಆದರೆ ಮಹಿಳೆಯು ಅಡಿಗೆ

ಮಾಡಿದಾಗಿನಿಂದ ಹಿಡಿದು ಮಕ್ಕಳ ಪಾಲನೆ ಪೋಷಣೆ ಹೊಲದಲ್ಲಿ ಕಳೆಕಾಸಿಗೆ, ನಾಟಿಮಾಡುವುದು ಕೊಯಲ್ಲ ಕೊಯ್ಯುವುದು ಆಹಾರ ಧಾನ್ಯಗಳನ್ನು ಶುಚಿಗೊಳಿಸುವುದು, ಬಿತ್ತನೆ ಬೀಜಗಳನ್ನು ಸುರಕ್ಷಿತವಾಗಿಡುವುದು. ಬಿತ್ತನೆ ಮಾಡುವುದು. ಇನ್ನೂ ಮುಂತಾದ ಅನೇಕ ಕೆಲಸಗಳನ್ನು ಅವಳೇ ನಿಭಾಯಿಸುತ್ತಾಳೆ. ಆದರೆ ಇಲ್ಲಿ ಅವಳ ಕೆಲಸವು, ಅವಳ ಶ್ರಮವು ಇಲ್ಲಿ ಕನಿಷ್ಟವೆಂದು ಪರಿಗಣಿಸುತ್ತಾರೆ ಪುರುಷನ ಶ್ರಮವೆ ಕನಿಷ್ಠ ಎಂದು ಪರಿಗಣಿಸುತ್ತಾರೆ. ಪುರುಷನ ಜೊತೆ ಜೊತೆಯಾಗಿ ಮಹಿಳೆಯು ಭಾಗಿಯಾದರೂ ಸಹ ಅವಳು ತಾರತಮ್ಯಕ್ಕೆ ಒಳಗಾಗುತ್ತಾಳೆ. ಅದು ಶ್ರಮವು ಆಗಿರಬಹುದು. ಕೂಲಿಯಾಗಿರಬಹುದು ಎರಡರಲ್ಲಿಯೂ ತಾರತಮ್ಯವಿದೆ. ಶ್ರಮದ ವಿಷಯಕ್ಕೆ ಬಂದಾಗ ಪುರುಷ ಮತ್ತು ಮಹಿಳೆಯರ ಮಧ್ಯೆ. ಶ್ರಮವಿಭಜನೆಯನ್ನು ಮಾಡಲಾಗಿದೆ. ಮಹಿಳೆಯು ದೈಹಿಕ ಶ್ರಮಕ್ಕನುಗುಣವಾಗಿ, ಕಷ್ಟಕರವಲ್ಲದ ಕೆಲಸಗಳನ್ನು ನಿರ್ವಹಿಸಿಕೊಂಡು ಹೋಗಲು ಶ್ರಮವಿಭಜನೆಯನ್ನು ಮಾಡಲಾಗಿದೆ.

ಈ ಜಗತ್ತಿನಲ್ಲಿ ಮಾನವ ಎಂದು ಉಗಮವಾಗುತ್ತಾನೆಯೇ ಅಂದಿನಿಂದಲೇ ಸ್ತ್ರೀ ಪುರುಷರಿಬ್ಬರೂ ಶ್ರಮವಹಿಸಿ ದುಡಿಯುತ್ತಿದ್ದು ಯಾವುದೇ ತಾರತಮ್ಯವಿರಲಿಲ್ಲ. ಮಾನವನ ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ ಪ್ರಥಮವಾಗಿ ಮಹಿಳೆಯರದ್ದೇ ಎಂಬ ಹೆಗ್ಗಳಿಗೆ ಹೆಣ್ಣಿಗಿದೆ. ಅವಳ ಪುರುಷನಿಗಿಂತಲೂ ಮೊದಲೇ ದುಡಿಯುವವಳಾಗಿದ್ದಳು ಮೊದಲು ಕೃಷಿಕಳು ಮಹಿಳೆಯೇ ಆಗಿದ್ದಳು. ಯಾವುದೇ ಒಂದು ಹಂತದಲ್ಲಿ ಪುರುಷರ ಕೆಲಸ ಶ್ರೇಷ್ಠ ಎನಿಸಿಕೊಳ್ಳಲಾರಂಭಿಸಿದರೆ ಸ್ತ್ರೀಯರ ಕೆಲಸ ಕರ್ತವ್ಯವಾಗಿ ಮುಂದುವರೆಯಿತು. ಯಾವಾಗ ಶ್ರಮವು ಮಾರುಕಟ್ಟೆಗೆ ವಸ್ತುಗಳ ವಿನಿಮಯಕ್ಕೆ ವಿಸ್ತಾರಗೊಂಡಿತೋ ಹಾಗೂ ಕೆಲಸವು ಹಣದ ವಿನಿಮಯಕ್ಕೆ ಒಳಪಟ್ಟಿತೋ ಆವಾಗಿನಿಂದ ಕೆಲಸವು ದುಡಿಮೆಯಾಗಿ ಪರಿವರ್ತನೆಗೊಂಡಿತು.

ಆಧುನಿಕತೆಯಲ್ಲಿ ಮಹಿಳೆಯರನ್ನು ನೇಮಿಸಿಕೊಂಡರೆ, ಪುರುಷರನ್ನು ನೇಮಿಸಿಕೊಂಡರೆ ಆಗುವುದಕ್ಕಿಂತ ಹೆಚ್ಚಿನವೇಗದಲ್ಲಿ ಆರ್ಥಿಕತೆಯ ಬೆಳಣಿಗೆಯನ್ನು ಸಾಧಿಸಲು ಸಹಾಯವಾಗುತ್ತದೆ ಎಂದು ಹೇಳಿ ಮಹಿಳೆಯರ ಶ್ರಮದ ಪ್ರಾಮುಖ್ಯತೆಯನ್ನು ಎತ್ತಿಹಿಡಿದರು. ಸರದಿ ವ್ಯವಸಾಯ ಪದ್ಧತಿಯಿರುವ ಪ್ರದೇಶಗಳಲ್ಲಿ ಆಹಾರ ಬೆಳೆಯುವ ಕೆಲಸವನ್ನು ಸಂಪೂರ್ಣವಾಗಿ ಹೆಂಗಸರೇ ಮಾಡುತ್ತಾರೆ. ಮರಗಳನ್ನು ಕಡಿಮೆ ಭೂಮಿಯನ್ನು ಎತ್ತುವುದಕ್ಕೆ ಸಿದ್ಧ ಪಡಿಸುವ ಕೆಲಸವನ್ನು ಮಾತ್ರ ಗಂಡಸರು ಮತ್ತು ಗಂಡು ಮಕ್ಕಳು ಮಾಡುತ್ತಾರೆ. ಗಂಡು ಮಕ್ಕಳು ಮತ್ತು ಹೆಂಗಸರು ಸೇರಿ ಮಾಡುವ ಕೆಲಸಗಳಿಂದ ಮನೆ ಯಜಮಾನ ಶ್ರೀಮಂತನಾಗುತ್ತಾನೆ. ಹೆಂಡತಿಯರ ದುಡಿಮೆಯಿಂದಲೇ ಕುಟುಂಬದ ಆದಾಯ ಹೆಚ್ಚಾಗುತ್ತದೆ.

ಕೃಷಿ ಎಂಬುದನ್ನು ಪುರುಷರಿಗೆ ಮಾತ್ರ ನಿಗದಿಪಡಿಸಲಾಗಿದೆ. ಪುರುಷನೇ ಸಂಪೂರ್ಣ ಅದರಲ್ಲಿ ತೊಡಗಿಸಿಕೊಳ್ಳುತ್ತಾನೆ ಎಂಬುದು ಎಲ್ಲರ ಬಯಕೆ ಆದರೆ ಕೃಷಿಯಲ್ಲಿ ಮಹಿಳೆಯರು ಮಾಡುವ ಅನೇಕ ಕೆಲಸಗಳು ಮುಖ್ಯವಾಗಿ ಗೃಹವಾರ್ತೆ ಕೆಲಸಗಳು ಇನ್ನೂ ಅನೇಕ ಕೆಲಸಗಳಲ್ಲಿ ಸಂಪಾದನೆ ಸಂಪಾದನೆ ಒದಗಿಸುವುದಿಲ್ಲ ಈ ಕೆಲಸಗಳಿಗೆ ವಿನಿಮಯ ಮಹತ್ವವಿಲ್ಲ ಈ ಕೆಲಸಗಳು ಕೇವಲ ಉಪಯುಕ್ತ

ಮಹತ್ವ ಪಡೆದಿವೆ. ಮಹಿಳೆಯರು ಆರ್ಥಿಕವಾಗಿ ಪುರುಷರನ್ನು ಅವಲಂಬಿಸಿಕೊಂಡಿರಬೇಕು ಎಂಬುದು ಅಲಿಖಿತ ನಿಯಮವಾಗಿದೆ. ಗಂಡು ನಿರುದ್ಯೋಗಿಯಾಗಿದ್ದು ಹೆಣ್ಣು ಉದ್ಯೋಗಸ್ಥೆಯಾಗಿದ್ದ ಸಂದರ್ಭದಲ್ಲಿಯೂ ಗೃಹವಾರ್ತೆಯೂ ಮತ್ತು ಮಕ್ಕಳ ಪಾಲನೆ ಕೆಲಸಗಳು ಮಾತ್ರ ಹೆಣ್ಣಿಗೆ ಮೀಸಲಾಗಿದೆ. ಮಹಿಳೆಯ ದುಡಿಯುತ್ತಿರುವ ದುಡಿಮೆಯನ್ನು ಮೌಲ್ಯವಾಗಿಸದೆ ಉತ್ಪಾದಕವೆಂದು ಪರಿಗಣಿಸದೇ ಇರುವುದರಿಂದಾಗಿ ಮಹಿಳೆಯ ದುಡಿಮೆಯು ಕೃಷಿಯಲ್ಲಿ ಅದರಲ್ಲಿ ಆರ್ಥಿಕವಲಯದಲ್ಲಿ ಹಿಂದೆ ಬೀಳುತ್ತಿದೆ. ಅವರ ಜೈವಿಕ ಕಾರಣಗಳನ್ನು ಮುಂದೆ ಮಾಡಿ ಮಹಿಳೆ ದುರ್ಬಲಳೆಂದು ಅವಳ ದುಡಿಮೆಯನ್ನು ಮಾನ್ಯ ಮಾಡದೇ ಇರುವುದು ಶೋಚನೀಯವಾಗಿದೆ. ಮಹಿಳೆಯರು ಮಾಡುವ ಗೃಹಕಾರ್ಯ ಮಕ್ಕಳ ಪಾಲನೆ ಪೋಷಣೆಯೂ ಹಿರಿಯರ ಅವಶ್ಯಕತೆಗಳ ಪೂರೈಕೆ, ಅವರ ಆರೈಕೆ, ಸಂತಾನೋತ್ಪತ್ತಿ ಇವೆಲ್ಲವುಗಳನ್ನು ಹೆಣ್ಣಿನ ಕರ್ತವ್ಯವಾಗಿದೆ. ಈ ಒಂದು ಕೆಲಸಗಳಿಗೆ ಯಾವುದೇ ಮೌಲ್ಯವಿಲ್ಲ. ಈ ಆರೈಕೆಯನ್ನು ಆಸ್ಪತ್ರೆಯಲ್ಲಿನ ನರ್ಸಗಳು ನಿರ್ವಹಿಸಿದರೆ ಅವರ ಸೇವೆಗೆ ಸಂಬಳವನ್ನು ಕೊಡಲಾಗುತ್ತದೆ. ಅವರ ಸೇವೆ ಕೆಲಸವೆನಿಸಿಕೊಳ್ಳತ್ತದೆ. ಆದರೆ ಮನೆಯಲ್ಲಿ ಮಾಡುವ ಈ ಕೆಲಸಗಳಿಗೆ ಮೌಲ್ಯವಿಲ್ಲದ ದುಡಿಮೆಯಾಗಿದೆ.

ದೇವದುರ್ಗ ತಾಲೂಕಿನ ವ್ಯಾಪ್ತಿಯೊಳಗಡೆ ಬರುವ ಹಳ್ಳಿಗಳಲ್ಲಿ ಹೊಲಗದ್ದೆಗಳಲ್ಲಿ ದುಡಿಯುತ್ತಿರುವ ಮಹಿಳೆಯರನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಿದಾಗ ಮತ್ತು ನಾನು ಕೂಡ ಆಪ್ರದೇಶದವನಾಗಿದ್ದರಿಂದ ಪ್ರತಿಯೊಂದು ಹಳ್ಳಿಗಳಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ ಬೆಳಗಾಗುವುದರೊಳಗೆ ಎಲ್ಲಿ ನೋಡಿದರೂ ಸಹ ಮಹಿಳೆಯರೇ ಕಾಣುತ್ತಾರೆ. ಹಾಗೆ ಅವರ ದಿನನಿತ್ಯದ ಕೆಲಸವೂ ಕೂಡ, ಪುರುಷನು ಕೇವಲ ರಂಟೆ ಕುಂಟೆ ನೇಗಿಲು ಕೆಲಸ ಮಾಡುತ್ತಾನೆ. ಆದರೆ ಮಹಿಳೆಯು ಬಿತ್ತನೆಯಿಂದ ಹಿಡಿದು ಕೊಯ್ಲು ಕೊಯ್ಯುವ ರಾಶಿ ಮಾಡುವವರಿಗೆ ಮಹಿಳೆ ಕೆಲಸವಾಗಿರುತ್ತದೆ. ಆದರೆ ಅದೇ ಸರಕುಗಳನ್ನು ಮಾರ್ಕೇಟಿಂಗ್‌ಗೆ ಹೊಯ್ದು ಹಣ ತರುವುದು ಪುರುಷನ ಕೆಲಸವಾಗಿರುತ್ತದೆ. ಅದರಲ್ಲಿ ಹೆಚ್ಚಿನ ಶ್ರಮ ಮಹಿಳೆಯದ್ದಾಗಿರುತ್ತದೆ. ಆದರೆ ಅವಳ ಶ್ರಮವು ಅಲ್ಲಿ ಕನಿಷ್ಠವಾಗಿ ಪುರುಷನ ಶ್ರಮ ಗರಿಷ್ಠವಾಗಿರುತ್ತದೆ. ಹಾಗೆ ಆ ಭಾಗದ ಎಲ್ಲಾ ಮಹಿಳೆಯರು ದಿನಗೂಲಿಗಳಾಗಿ ಹೊಲಗಳಿಗೆ ಹೋಗುತ್ತಾರೆ. ಅದರಲ್ಲಿ ಹೆಚ್ಚು ಮಳೆ ಬಂದರೆ ಮಳೆಯ ಪ್ರಮಾಣ ಕಡಿಮೆಯಾದರೂ ಬೇರೆ ಊರುಗಳಿಗೆ ಹೋಗಬೇಕಾಗುತ್ತದೆ. ಜೊತೆಗೆ ತಮ್ಮ ಮಕ್ಕಳನ್ನು ಸಹ ಕರೆದೊಯ್ಯುತ್ತಾರೆ. ಹಾಗೆಯೇ ಮನೆಯ ಮುಕ್ಕಾಲು ಭಾಗ ಆದಾಯ ಈ ಮಹಿಳೆಯರ ಸಂಪಾದನೆಯಿಂದಲೇ ಬರುತ್ತದೆ. ಹೀಗಿದ್ದರೂ ಅವಳನ್ನು ಬಡವರು ಮತ್ತು ಹೆಂಗಸರೆಂಬ ಕಾರಣದಿಂದ ಅವಳ ಮೇಲೆ ಅನೇಕ ಅನರ್ಹತೆಗಳನ್ನು ಹೊದಿಸಿ ಅವಳನ್ನು ಅಬಲೆಯರನ್ನಾಗಿ ಮಾಡಲಾಗಿದೆ. ಇದರಿಂದ ಈ ಮಹಿಳೆಯರು ಜೀವನ ಮಾಡುವುದಕ್ಕೋಸ್ಕರ ದೊಡ್ಡ ಹೋರಾಟವೇ ಮಾಡಬೇಕಾಗುತ್ತದೆ. ಹಾಗೆ ಪುರುಷರಿಗಿಂತ ಹೆಚ್ಚು

[illegible]

ಶ್ರಮದಾಯಕ ಕೆಲಸ ಮಾಡಿದರೂ ಅವರಿಗಿಂತ ಕಡಿಮೆ ಕೂಲಿ ಪಡೆಯುತ್ತಾರೆ. ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವಂತ ಕಾಯಿದೆ ಕಾನೂನುಗಳು ಇದ್ದರೂ ಅವರು ಕಡಿಮೆ ವೇತನ ಪಡೆಯುತ್ತಿದ್ದಾರೆ.

ಉದಾ:- ಭತ್ತ ಬೆಳೆಯುವ ಕಡೆಗಳಲ್ಲಿ ಭತ್ತದ ಸಸಿ ನೆಡುವ ಸಂಪೂರ್ಣವಾಗಿ ಮಹಿಳೆಯರೆ ಮಾಡುತ್ತಾರೆ. ಇದಕ್ಕೆ ಹೆಚ್ಚಿನ ದೈಹಿಕ ಶ್ರಮ ಕೌಶಲ್ಯ ಮತ್ತು ಹಲವು ವರ್ಷಗಳ ಅನುಭವ ಬೇಕಾಗುತ್ತದೆ. ಚುರುಕುತನ ಹಾಗೂ ಎಚ್ಚರಿಕೆಯಿಂದ ನಿರ್ಧಾರ ಕೈಗೊಳ್ಳಬೇಕಾಗಿದ್ದು ಉರಿಬಿಸಿನಲ್ಲಿ ಅರ್ಧ ಬಗ್ಗಿಕೊಂಡು ಕೆಸರಿನಲ್ಲಿ ನಿಂತು ಕೆಲಸ ಮಾಡಬೇಕಾಗುತ್ತದೆ. ಆ ಕೆಸರಿನಲ್ಲಿ ಕೀಟಗಳು, ಹುಳುಗಳು ಕಚ್ಚಿ ಗಾಯಮಾಡುತ್ತವೆ. ಕಾಲಿಗೆ ಜಿಗಣೆ ಕಚ್ಚಿ ಅವರ ರಕ್ತ ಹಿರುತ್ತದೆ. ಆದರೆ ಪುರುಷ ಔಷಧಿ ಹೊಡೆಯುವುದು ಗೊಬ್ಬರ ಹಾಕುವುದು ಮುಂತಾದ ಸುಲಭವಾದ ಕೆಲಸಗಳನ್ನು ಮಾಡಿದರೂ ಕೌಶಲ್ಯವುಳ್ಳ ಕೆಲಸ ಮಾಡುತ್ತಾರೆ ಎಂದು ಅವರಿಗೆ ಹೆಚ್ಚು ಕೂಲಿಯನ್ನು ನೀಡುತ್ತಾರೆ.

ಪ್ರತಿಯೊಂದು ಕೆಲಸದಲ್ಲಿ ಮತ್ತು ಕೃಷಿ ಕೆಲಸಗಳಲ್ಲಿ ಕಾರ್ಮಿಕ ಮಹಿಳೆಯರು ಪುರುಷರಿಗಿಂತ ಹೆಚ್ಚು ಶ್ರಮದಾಯಕ ಕೆಲಸ ಮಾಡಿದರೂ ಅವರು ಪುರುಷರ ಕೂಲಿಯ ಶೇ, ೪೦ರಿಂದ ೬೦ರಷ್ಟನ್ನು ಮಾತ್ರ ಪಡೆಯುತ್ತಾರೆ ಎಂದು ಅಂದಾಜು ಮಾಡುತ್ತಾರೆ. ಈ ಕೆಲಸಗಳ ಕೌಶಲ್ಯದ ಶ್ರೇಣೀಕರಣವು ಕೆಲಸ ಎಷ್ಟು ಮಾಡುತ್ತಾರೆ, ಅಥವಾ ಎಷ್ಟು ಶ್ರಮವಿರುತ್ತದೆ. ಎಂಬುದನ್ನು ಆಧರಿಸಿರುವುದಿಲ್ಲ. ಆದರೆ ಮಹಿಳೆಯರು ಕಡಿಮೆ ಮುಟ್ಟದ ಕೆಲಸ ಮಾಡುತ್ತಾರೆ ಎಂಬ ಊಹೆಯ ಆಧಾರದ ಮೇಲೆ ಕೆಲಸವನ್ನು ಶ್ರೇಣೀಕರಿಸುತ್ತಾರೆ.

ದೇವದುರ್ಗ ತಾಲೂಕಿನ ವ್ಯಾಪ್ತಿಯೊಳಗಡೆ ಬರುವ ಹಳ್ಳಿಗಳಲ್ಲಿ ಹೊಲಗದ್ದೆಗಳಲ್ಲಿ ದುಡಿಯುತ್ತಿರುವ ಮಹಿಳೆಯರನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸಂದರ್ಶಿಸಿದಾಗ ಮತ್ತು ನಾನು ಆ ಪ್ರದೇಶದವನಾಗಿದ್ದರಿಂದ ನಾನು ಗಮನಿಸಿದಂತೆ ಪ್ರತಿಯೊಂದು ಹಳ್ಳಿಗಳಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಏಕೆಂದರೆ ಬೆಳಗಾಗುವುದರೊಳಗೆ ಎಲ್ಲಿ ನೋಡಿದರೂ ಸಹ ಮಹಿಳೆಯರೇ ಕಾಣುತ್ತಾರೆ. ಅವರ ದಿನ ನಿತ್ಯದ ಕೆಲಸವೂ ಕೂಡ ಪುರುಷನ ಕೇವಲ ರಂಟೆ, ಕುಂಟೆ, ನೇಗಿಲು ಕೆಲಸ ಮಾತ್ರ ಮಾಡುತ್ತಾರೆ. ಆದರೆ ಮಹಿಳೆಯರು ಬಿತ್ತನೆಯಿಂದ ಹಿಡಿದು ಕೊಯ್ಲು ಕೊಯ್ಯುವತನಕ ಹಾಗೂ ರಾಶಿ ಮಾಡಿ ಅವು ಮಾರ್ಕೇಟಿಂಗೆ ಹೋಗುವವರೆಗೂ ಮಹಿಳೆಯ ಪಾತ್ರ ಅತ್ಯಂತ ಮಹತ್ವದಾಗಿದೆ. ಇಷ್ಟೆಲ್ಲಾ ಮಾಡಿದರೂ ಸಹ ಅವುಗಳನ್ನೂ ಮರ್ಕೇಟಿಗೆ ಹೊಯ್ದು ಹಣ ತಂದಾಗ ಪುರುಷನೆ ಶ್ರೇಷ್ಠನೆನಿಸಿಕೊಳ್ಳುತ್ತಾನೆ, ಮಹಿಳೆಯರ ಶ್ರಮ ಅಲ್ಲಿ ಬಳಕೆಗೆ ಬರುವುದೇ ಇಲ್ಲ.

ಹಾಗೆ ಆ ಭಾಗ ಎಲ್ಲಾ ಮಹಿಳೆಯರು ದಿನಗೂಲಿಗಳಾಗಿ ಹೊಲಗಳಿಗೆ ಹೋಗುತ್ತಾರೆ. ದಿನವೂ ತನ್ನ ಶ್ರಮವಹಿಸಿ, ತಾವು ಜೊತೆಗೆ ತಮ್ಮ ಮಕ್ಕಳನ್ನು ಸಹಿತವಾಗಿ ದುಡಿದು ತನ್ನ ಮನೆಯ ಜವಾಬ್ದಾರಿಯನ್ನು ನಿಬಾಯಿಸುತ್ತಾರೆ. ಹೀಗೆ ದಿನಂಪ್ರತಿ ಕಾರ್ಯನಿರತೆಯಲ್ಲಿ ತೊಡಗಿಸಿ ಕೊಂಡು ಆರ್ಥಿಕತೆಯನ್ನು ಸುಧಾರಿಸುತ್ತಾಳೆ. ಹಾಗೆ ವಾರಕ್ಕೆಮ್ಮೆ ಸ್ವಸಹಾಯ ಸಂಘಗಳಿಗೆ ಪ್ರತಿಯೊಂದು

[illegible]

ಹಳ್ಳಿಯೂ ಸಹ ಹೆಣ್ಣು ಮಕ್ಕಳು ೨೦ರಿಂದ ೫೦ರೂ ವರೆಗೆ ಕಟ್ಟುತ್ತಾರೆ. ಹೀಗೆ ಮಾಡಿದಂತೆಲ್ಲ ಎಷ್ಟೋ ಹಣವು ಉಳಿತಾಯವಾಗುತ್ತದೆ. ಜೊತೆ ಬ್ಯಾಂಕಿನಲ್ಲಿ ಹೆಚ್ಚಾದಂತೆಲ್ಲಾ ಸಬ್ಸಿಡಿಯಂತೆ ಲೋನ್ ಸಹ ಕೊಡುತ್ತಾರೆ. ಹೀಗೆ ವ್ಯವಹರಿಸಿದಂತೆಲ್ಲಾ ತಾವೇ ವ್ಯವಹಾರದಲ್ಲಿ ತೊಡಗಿಸಿಕೊಳ್ಳುತ್ತಾ ಅನಕ್ಷರಸ್ಥರಾದರೂ ಸಹಿತ ಬ್ಯಾಂಕುಗಳ ಮೂಲಕ ವ್ಯವಹಾರ ನಡೆಸುತ್ತಿರುವುದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡುತ್ತದೆ. ಹಾಗೆ ತಮಗೆ ಅಗತ್ಯವೆನಿಸಿದಾಗ ಅಥವಾ ತುರ್ತುಸಂದರ್ಭದಲ್ಲಿ ಈ ಹಣವನ್ನು ಉಪಯೋಗಿಸಿಕೊಳ್ಳುತ್ತಾರೆ. ಹೀಗೆ ತಮ್ಮ ಆರ್ಥಿಕತೆಯನ್ನು ಸುಧಾರಣೆಯ ಮಟ್ಟಕ್ಕೆ ತರುತ್ತಿದ್ದಾರೆ.

ದೇವದುರ್ಗ ತಾಲೂಕಿನ ಗಬ್ಬೂರು ಗ್ರಾಮದಲ್ಲಿ ಮಹಿಳೆಯರನ್ನು ಸಂದರ್ಶಿಸಿದಾಗ "ನೋಡ್ರಿ ಅಣ್ಣಾರೆ ನಮ್ ಜೀವನ ಬಹಳ ಕಷ್ಟ ದಿನಾಲು ಕೂಲಿ ಹೋಗಬೇಕು ತಂದು ತಿನ್‌ಬೇಕು ಅದು ಕೂಡ ಸರಿಯಾಗಿ ಕೂಲಿ ಕೊಡಂಗಿಲ್ಲ ಅವರು ಕೊಟ್ಟಾಗ ನಾವು ತಗೊಳ್‌ಬೇಕು. ಅದು ಕೂಡ ಬೆಳಿಗ್ಗೆ ೪ ಗಂಟೆಯಿಂದ ಸಂಜೆ ೫ ಗಂಡೆಯವರೆಗೆ ದುಡಿಸಿಕೊಳ್ಳುತ್ತಾರೆ. ಕೇವಲ ೨೦ ೨೫ ರೂಪಾಯಿ ಕೊಡ್ತಾರೆ, ಇದ್ರಲ್ಲಿ ನಾವು ಹೆಂಗೆ ಸಂಸಾರ ಮಾಡಬೇಕು. ಅದರಲ್ಲಿ ಮಕ್ಕಳು ಶಾಲೆಗೆ ಹೋಗ್ತಾರೆ ಅದ್ರಿಗೆ ನೋಟ್ಸ್ ಪುಸ್ತಕ, ಬಟ್ಟೆ ಅಂತ ಕೊಡಿಸಬೇಕು. ಮನೆಯಲ್ಲಿ ತಿನ್ನಲಿಕ್ಕೆ ಒಂದೊಂದು ದಿನ ಏನು ಸಿಗೋದಿಲ್ಲ ಉಪವಾಸವಿರ್ತೀವಿ ಹಿಂಗೈತಿ ನಮ್ಮ ಪರಿಸ್ಥಿತಿ" ಅಂತ ಹೇಳ್ತಾರೆ. ಇವತ್ತು ಜಗತ್ತು ಆಧುನಿಕ ನಾಗಲೋಟದಲ್ಲಿ ಸಾಗುತ್ತಿದ್ದರೂ ಸಹ ಒಂದೊತ್ತಿನ ಅನ್ನಕ್ಕಾಗಿ ಅಥವಾ ತನ್ನ ಅನ್ನದ ಚೀಲವನ್ನು ತುಂಬಿಸಿಕೊಳ್ಳಲು ಪರದಾಡುವ ಸ್ಥಿತಿ ಎದುರಿಸುತ್ತಿದ್ದಾರೆ. ಇವತ್ತು ನಮ್ಮ ರಾಜಕಾರಣಿಗಳು ಕೋಟಿಗಟ್ಟಲೆ ಹಣಗಳಿಸುತ್ತಾರೆ. ಆದರೆ ಅವರನ್ನು ಆ ಸ್ಥಾನಕ್ಕೆ ಆಯ್ಕೆ ಮಾಡಿದ್ದು ಯಾರು ಎಂದು ಯೋಚನೆ ಮಾಡುವುದಿಲ್ಲ ತನ್ನ ವಾಸಿಸಲಿಕ್ಕೆ ಮನೆ ಇಲ್ಲದೆ ಪರದಾಡುವ ಎಷ್ಟೋ ಜನರು ಗುಡಿಸಲು ಮನೆಮಾಡಿಕೊಂಡು ಮಳೆ ಬಂದರೆ ರಾತ್ರಿಯೆಲ್ಲ ಭಜನೆ ಮಾಡುವಂತಹ ಸ್ಥಿತಿ ಈ ಪ್ರದೇಶದಲ್ಲಿ ಇಂದಿಗೂ ಕಂಡುಬರುತ್ತಿದೆ. ಆ ಭಾಗಕ್ಕೆ ತೆರಳಿದರೆ ಹಳ್ಳಿಗಳಲ್ಲಿ ಇವತ್ತಿಗೂ ಇಂತಹ ಸ್ಥಿತಿ ಇದೇ ನಾ ಎಂದು ದುಃಖ ಅನಿಸುತ್ತದೆ.

ಗ್ರಾಮದ ೧೬ಮಸಸಂಕಲ್ ಊರಲ್ಲಿ ೬ ಲಿಂಗಮ್ಮರನ್ನು ಸಂದರ್ಶಿಸಿದಾಗ ಅವರ ಹಳಿಕೆ ಈ ಕೆಳಗಿನಂತಿದೆ. ಏನ್ ಕೆಲಸ ಮಾಡ್ತಿರಮ್ಮಾ "ನೋಡ್ರಿ ನಾನು ದಿನಾಲು ಕೂಲಿಹೋಗಬೇಕು ತಂದದ್ದನ್ನು ರಾತ್ರಿ ಅಕ್ಕಿ ಗಿಕ್ಕಿ ತಂದು ಮಾಡಿಕೊಂಡು ತಿನ್ನಬೇಕು. ನನ್ನ ಗಂಡ ಸುಮ್ನೆ ಊರಲ್ಲಿ ಇರ್ತಾನೆ ಏನು ಕೆಲಸ ಮಾಡಂಗಿಲ್ಲ ಬರೇ ಕುಡಿಯೋದು ತಿರುಗಾಡೋದು. ಏನಾದ್ರು ಕೇಳಿದ್ರೆ ಹಾಕಿಕೊಂಡು ಬಡೀತಾನೆ. ಮಕ್ಕಳು ಇಬ್ರು ಇದ್ದಾರೆ. ಅವರು ಸಣ್ಣವರು ಮನೆಯಲ್ಲಿ ಇರ್ತಾರೆ. ಈಗ ಎಷ್ಟೆಟ್ಟು ಸಲಿ ಬಂದಿದೆ. ಅದಕ್ಕೆ ಹೋಗ್ತಾರೆ ನಾನು ದಿಕ್ಕೆ ೨೦ ರೂಪಾಯಿ ತರ್ತೀನಿ ಅದರಲ್ಲಿ ಹೆಂಗ ಜೀವನ ಮಾಡಬೇಕು ಅದರಲ್ಲಿ ಬಟ್ಟೆ ಊಟ ಎಲ್ಲಾ ಅದರಲ್ಲಿ ಗಂಡ ಏನು ತರಂಗಿಲ್ಲ, ಬಿಡಂಗಿಲ್ಲ. ಎಷ್ಟು ಮೆಣಸಿನಕಾಯಿ ಯಾವುದಾದರೂ ಒಂದಿಲ್ಲಂದ್ರೆ ನಡೆಯಂಗಿಲ್ಲ, ಹಿಂಗೈತಿ ನಮ್ಮ ಪರಿಸ್ಥಿತಿ ಏನು ಮಾಡ್ಬೇಕು. ಒಂದಿನ ಸತ್ರೆಸಾಕು ಅಂತ ಅನಿಸಿಬಿಡ್ತದೆ. ಕೂಲಿ ಹೋದರೆ ಅವ್ರು ಸರಿಯಾಗಿ ಕೊಡಂಗಿಲ್ಲ ಅವ್ರು ಕೊಟ್ಟಾಗ

[illegible]

[illegible]

[illegible]

[illegible]

ನಾವು ತಗಬೇಕು. ಏನಾದ್ರು ಒತ್ತಾಯಮಾಡಿ ಕೇಳಿದ್ರೆ ಕೆಲಸಕ್ಕೆ ಬರಬೇಡ ಅಂತಾರೆ ಇದರಿಂದ ಹೇಗೆ ಜೀವನ ಮಾಡಬೇಕು.

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ಇವರು ಇನ್ನೂ ಎಂತಹ ಶೋಚನೀಯ ಸ್ಥಿತಿಯನ್ನು ಅನುಭವಿಸುತ್ತಾರಲ್ಲ ಎಂದೆನಿಸುತ್ತದೆ. ಮಹಿಳೆಗೆ ಮೀಸಲಾತಿ ಅಂತಾರೆ, ಮಹಿಳಾ ಕಲ್ಯಾಣ ಇಲಾಖೆಗಳು ಸ್ಥಾಪಿಸಿದ್ದಾರೆ, ಮಹಿಳಾ ಸಚಿವರಿದ್ದಾರೆ. ಆದರೆ ಹಳ್ಳಿಗಳಲ್ಲಿ ಇಂತಹ ನಿಕೃಷ್ಟ ಸ್ಥಿತಿಯನ್ನು ಎದುರಿಸುತ್ತಿರುವ ಮಹಿಳೆಯರನ್ನು ಕೇಳುವವರಾರು. ಅವರ ಸಮಸ್ಯೆಗಳಿಗೆ ಪರಿಹಾರ ಕೊಡುವವರ್‍ಯಾರು ಅವರ, ಆರ್ಥಿಕ ಪರಿಸ್ಥಿತಿ ಹೇಗೆ ಸುಧಾರಣೆಯಾಗುತ್ತದೆ ಎಂಬುದು ಯೋಚನೆ ಮಾಡಬೇಕಾಗುತ್ತದೆ.

ಒಟ್ಟಾರೆಯಾಗಿ ದೇವದುರ್ಗ ತಾಲ್ಲೂಕಿನ ಮಹಿಳಾ ಕೃಷಿ ಕೂಲಿಕಾರರು ಅದರಲ್ಲಿ ಹೊಲಗದ್ದೆಗಳಲ್ಲಿ ದುಡಿಯುತ್ತಿರುವ ಮಹಿಳಾ ಕೂಲಿಕಾರರನ್ನು ಸಂದರ್ಶಿಸಿದಾಗ ಅವರ ಆರ್ಥಿಕಸ್ಥಿತಿಗತಿ ಇನ್ನೂ ಇಷ್ಟು ವರ್ಷಗಳ ಕಳೆದರೂ ಸಹ ಸುಧಾರಣೆಯಾಗುವುದಿಲ್ಲ ಎಂದೆನಿಸುತ್ತದೆ. ದೇವದುರ್ಗ ಅಂತಂದ ಕೂಡಲೇ ಪ್ರತಿಯೊಂದು ರಂಗದಲ್ಲಿ ತುಂಬ ಹಿನ್ನಡೆಯನ್ನು ಪಡೆದುಕೊಂಡಿದೆ. ಅಲ್ಲದೆ ಇಲ್ಲಿಯ ಕೂಲಿಕಾರರ ಸ್ಥಿತಿಯಂತೂ ತುಂಬಾ ಚಿಂತಾಜನಕವಾಗಿದೆ. ಮಳೆ ಬಂದರೆ ಮಾತ್ರ ಹೊಲ ಗದ್ದೆಗಳಲ್ಲಿ ಕೆಲಸ ಕಾರ್ಯ ಇಲ್ಲವಾದರೆ ಊರು ಬಿಟ್ಟು ಊರಿಗೆ ಕೂಲಿಗಾಗಿ ತೆರಳಬೇಕಾಗುತ್ತದೆ. ಸುಮಾರು ೮ ೧೦ವರ್ಷಗಳಿಂದ ಬರಗಾಲ ಮಳೆ ಸರಿಯಾಗಿ ಆಗದೆ ಅತಂತ್ರ ಸ್ಥಿತಿಯಲ್ಲಿದ್ದಾರೆ. ಸರ್ಕಾರ ಸಾವಿರಾರು ಕೋಟಿಗಟ್ಟಲೆ ಹಣ ಮಂಜೂರಾತಿ ಮಾಡಿದರೆ ಬಡಜನರಿಗೆ ಅವು ಎಲ್ಲೋ ಮಧ್ಯವರ್ತಿಗಳ ಪಾಲಾಗಿ ಯಾವ ಒಂದು ಯೋಜನೆಯು ಬಡಜನರಿಗೆ ತಲುಪದೇ ಇರುವುದು ಖೇದಕರ ಸಂಗತಿ ಎಂದು ಹೇಳಬೇಕು, ಹಾಗಾಗಿ ಸರ್ಕಾರ ನೂರಾರು ಯೋಜನೆಗಳನ್ನು ಮಂಜೂರಾತಿ ಮಾಡಿದರೂ ಅವುಗಳು ಸರಿಯಾಗಿ ಸಾಮಾನ್ಯಜನರಿಗೆ ತಲುಪುತ್ತವೆಂಬುದನ್ನು ಪರಿಶೀಲಿಸಿ ಸಾಮಾನ್ಯಜನರಿಗೆ ತಲುಪಿದರೆ ಮಾತ್ರ ಕುಗ್ರಾಮಗಳು ಆರ್ಥಿಕ ಪರಿಸ್ತಿತಿಯನ್ನು ಸುಧಾರಿಸಬಹುದು. ಇಲ್ಲವಾದರೆ ಅದು ಎಷ್ಟು ಶತಮಾನ ಕಳೆದರೂ ಸುಧಾರಿಸುವುದಿಲ್ಲ.

### ೩.೩. ಶೈಕ್ಷಣಿಕ ಸ್ಥಿತಿಗತಿ

ಶಿಕ್ಷಣ ಎನ್ನುವುದು ಸಮಾಜದಲ್ಲಿ ಪುರುಷ ಪ್ರಧಾನವಾಗಿದೆ. ಶಿಕ್ಷಣವು ಮಾನವನಿಗೆ ಪ್ರಸ್ತುತ ಅವಿಭಾಜ್ಯ ಅಂಗ ಅದಿಲ್ಲದೆ ಕಣ್ಣಿದ್ದು ಕುರುಡನಂತಾಗುತ್ತಾನೆ. ಅದು ಸ್ತ್ರೀಯರಿಗೆ ಆರ್ಥಿಕ ಸ್ವಾತಂತ್ರ್ಯವನ್ನು ತಂದುಕೊಡಬಹುದಾದಂತಹ ಉದ್ಯೋಗಾವಕಾಶವನ್ನು ಒದಗಿಸಿಕೊಟ್ಟಿದೆ ಎನ್ನುವುದನ್ನು ಅಲ್ಲಗಳೆಯುವಂತಿಲ್ಲ. ಆದರೆ ನಿಜವಾದ ಅರ್ಥದಲ್ಲಿ ನೋಡಿದರೆ ಸನಾತನ ಕಾಲದಿಂದಲೂ ಬಂದಿರುವಂತಹ ಸಂಪ್ರದಾಯಗಳು ನಂಬಿಕೆಗಳು, ಹೆಣ್ಣಿನ ಅಲಂಕರಣ ವ್ಯಾಮೋಹ, ಅಂದಶ್ರದ್ಧೆ ಧರ್ಮವನ್ನು ಕುರಿತು ಯೋಚಿಸುವ ವಸ್ತುನಿಷ್ಟವಾಗಿ ಆಲೋಚಿಸುವ ಶಕ್ತಿಯನ್ನು ಪ್ರಚೋದಿಸುತ್ತಿಲ್ಲ ಬದಲಿಗೆ ಸ್ತ್ರೀಯರ ವೈಚಾರಿಕ ದಾರಿದ್ರ್ಯವನ್ನು ಹೋಗಲಾಡಿಸುವಂತಹ ಕಾರ್ಯದಲ್ಲಿ ವಿಫಲವಾಗುತ್ತಾ ಬಂದಿದೆ. ಶಿಕ್ಷಣವು ಪುರುಷನಿಗೆ ವಿಜ್ಞಾನ ತಂತ್ರಜ್ಞಾನವನ್ನು ಬೋಧಿಸುವುದರ ಜೊತೆ ಜೊತೆಗೆ ವೈಚಾರಿಕವಾಗಿ

ಶ್ರೀಮಂತವಾಗುವಂತೆ ಪ್ರೇರೇಪಿಸುತ್ತದೆ. ಪುರುಷರು ಶಿಕ್ಷಣ ವಲಯದಲ್ಲಿ ಸಾಧಿಸಿದ ಯಶಸ್ಸನ್ನು ದುಡಿಮೆಯ ವಲಯದಲ್ಲಿಯೂ ಸಾಧಿಸಿದ್ದಾರೆ. ಇದಕ್ಕೆ ಪುರುಷರು ದೈಹಿಕವಾಗಿ ಪ್ರಬಲರಾಗಿರುವುದು ಒಂದು ಕಾರಣವಾದರೆ, ದುಡಿಯಲು ನೀಡುವ ತರಬೇತಿಯು ಇನ್ನೊಂದು ಕಾರಣವಾಗಿದೆ. ದುಡಿಯುವ ಪುರುಷನಿಗೆ ಹೆಚ್ಚಿನ ಕೂಲಿ ಲಭ್ಯವಾಗುತ್ತದೆ. ಜೈವಿಕವಾಗಿ ದುರ್ಬಲಳಾದ ಮಹಿಳೆ ದುಡಿಮೆಗೆ ಸಂಬಂಧಿಸಿದ ಯಾವುದೇ ತರಬೇತಿಯನ್ನು ಪಡೆಯದೇ ಇರುವುದರಿಂದ ಹೆಚ್ಚು ಶ್ರಮವಹಿಸಿ ದುಡಿದರೂ ಕಡಿಮೆ ಕೂಲಿ ಲಭ್ಯವಾಗುತ್ತದೆ. ಮನೆಯ ಒಳಗೂ ಮತ್ತು ಮನೆಯ ಹೊರಗೂ ಮಹಿಳೆಯರು ದುಡಿಯುತ್ತಾರೆ. ಆದರೆ ಶಿಕ್ಷಣದಿಂದ ಈ ಭಾಗದ ಅಥವಾ ಪ್ರದೇಶ ಮಹಿಳೆಯಲು ತುಂಬಾ ವಂಚಿತರಾಗಿದ್ದಾರೆ. ಅತ್ಯಂತ ಹಿಂದುಳಿದ ತಾಲೂಕು ಎಂದು ಹೆಸರು ಪಡೆದಿರುವ ದೇವದುರ್ಗ ಇದಕ್ಕೆ ಪ್ರಮುಖ ಕಾರಣ ಶಿಕ್ಷಣ. ಶಿಕ್ಷಣಕ್ಕೆ ಪ್ರಮುಖ ಕಾರಣ ಆರ್ಥಿಕತೆ ಎಂದು ಹೇಳಬಹುದು. ನನ್ನ ಅಧ್ಯಯನಕ್ಕೆ ಒಳಪಟ್ಟ ದೇವದುರ್ಗ ತಾಲ್ಲೂಕಿನ ಹಳ್ಳಿಗಳಲ್ಲಿರುವ ಸ್ಥಿತಿಗತಿಯನ್ನು ಅವಲೋಕಿಸಿದರೆ ಅಲ್ಲಿ ಶೈಕ್ಷಣಿಕವಾಗಿ ತೀರಾ ಹಿಂದುಳಿದಿದೆ. ಅದರಲ್ಲಿ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿರುವ ಅನಕ್ಷರಸ್ಥ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಇದ್ದಾರೆ. ಶಿಕ್ಷಣದಿಂದ ವಂಚಿತರಾಗಲು ಕಾರಣವಾಗಿರುವ ಅಂಶಗಳನ್ನು ಕೆದಕುತ್ತಾ ಹೋದಾಗ ದೊರೆಯುವ ಉತ್ತರ ನಮ್ಮ ಸಮಾಜದಲ್ಲಿರುವ ಪುರುಷ ಪ್ರಧಾನ ವ್ಯವಸ್ಥೆ ಮತ್ತು ಸಂಪ್ರದಾಯಗಳು, ನಂಬಿಕೆಗಳು, ಅದಕ್ಕಿಂತ ಮುಖ್ಯವಾಗಿ ಆರ್ಥಿಕತೆ ಎಂದು ಹೇಳಬಹುದು. ಕೆಲವು ಗ್ರಾಮಗಳನ್ನು ನಾನು ಬೇಟಿ ಮಾಡಿ ಆ ಪ್ರದೇಶದಲ್ಲಿ ಸಂದರ್ಶಿಸಿದ ಮಹಿಳೆಯರಿಗೆ ಶಿಕ್ಷಣದಿಂದ ಏಕೆ ದೂರ ಉಳಿದಿರುವಿರಿ ಎಂದು ಪ್ರಶ್ನಿಸಿದಾಗ ಅವರ ಉತ್ತರ ಹೀಗೆ ಇದೆ. "ನಾವು ಬಡವರು, ತಿನ್ನಲಿಕ್ಕೆ ಅನ್ನ ಇಲ್ಲ, ಉಡಲು ಬಟ್ಟೆ ಇಲ್ಲ. ಅಂತಹದರಲ್ಲಿ ಶಾಲೆ ಕುರಿತು ನಾವು ಯಾವ ರಾಜ್ಯವನ್ನಾಳಬೇಕಿದೆ ನಮಗಿಷ್ಟು ಹೊಟ್ಟೆಬಟ್ಟೆಗಾದರೆ ಸಾಕು. ಒಳ್ಳೆಯ ಕೆಲಸವಿದ್ದರೆ ಕೊಡಿ, ನಮಗೆ ಓದು ಬರಹ ಬೇಡ, ನಾವು ಅಕ್ಷರ ಕಲಿತರೂ ಮತ್ತೆ ಗಂಡನ ಮನೆಯಲ್ಲಿ ಕೆಲಸ ಮಾಡುವುದು ತಪ್ಪುವುದಿಲ್ಲ. ಅಕ್ಷರ ಕಲಿತಿದ್ದಾಳೆ. ಅಂತ ನಮಗೆ ಕೆಲಸದಿಂದ ಮುಕ್ತಿಸಿಗಲ್ಲ. ತವರು ಮನೆಯಲ್ಲೂ ಒಲೆ ಮುಂದೆ ಕೊಡಬೇಕು. ಗಂಡನ ಮನೆಯಲ್ಲೂ ಹೋಗಿ ಒಲೆ ಮುಂದೆ ಕೂಡ ಬೇಕು ಹೀಗಿರುವಾಗ ನಾವು ಶಾಲಿ ಕಲಿಯದಿದ್ದರೆ ಒಳ್ಳೆಯದು" ಎಂದು ಉತ್ತರಿಸುತ್ತಾರೆ.

ಮಹಿಳೆಯರಿಂದ ಈ ರೀತಿಯಾಗಿ ಉತ್ತರ ಬರುವ ಹಿನ್ನಲೆ ಏನು ಎಂಬುದನ್ನು ಅವಲೋಕಿಸಿದಾಗ ಸಿಗುವ ಉತ್ತರ ನಮ್ಮ ಸಮಾಜದಲ್ಲಿರುವ ಪುರುಷ ಪ್ರಧಾನ ವ್ಯವಸ್ಥೆ ಸಂಪ್ರದಾಯ ಮತ್ತು ನಂಬಿಕೆಗಳು ಈ ಮಾತುಗಳು ಮಹಿಳೆಯರ ಬಾಯಿಂದ ಬಂದವಾಗಿವೆ. ಅದರ ಹಿಂದೆ ಆಡಿಸುವ ಸೂತ್ರಧಾರ ಪುರುಷನಾಗಿದ್ದಾನೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಇರದೇ ಇಲ್ಲದಿರುವಾಗ, ಮಹಿಳೆಯರು ಈ ರೀತಿಯಾಗಿ ಮಾತುಗಳನ್ನಾಡುವುದನ್ನು ಕಾಣುತ್ತೇವೆ. ಸನಾತನ ಕಾಲದಿಂದಲೂ ಬೆಳೆದು ಬಂದಿರುವಂತಹ ಗೃಹಿಣಿತ್ವವು ಹೆಣ್ಣಿಗಾಗಿ ರೂಪಿಸಲ್ಪಟ್ಟಿರುವ ಮೌಲ್ಯವಾಗಿದೆ. ಈ ಮೌಲ್ಯಗಳನ್ನು ಹೆಣ್ಣು ತನ್ನ

ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎನ್ನುವಂತಹ ಧೋರಣೆ ಪುರುಷ ಪ್ರಧಾನ ವ್ಯವಸ್ಥೆಯದು. ಈ ಸಾಂಪ್ರದಾಯಿಕ ಮೌಲ್ಯಗಳು ಹೆಣ್ಣಿನ ಸುತ್ತಲೂ ಆವರಿಸಿಕೊಂಡಿರುವುದರಿಂದ ಅವಳು ತನ್ನ ಸ್ವಂತಿಕೆಯನ್ನು ಕಳೆದುಕೊಂಡು ಸಂಪ್ರದಾಯ ನಂಬಿಕೆಗಳಿಗೆ ಬದ್ಧಳಾಗಿ ನಡೆಯುವಂತಾಗುತ್ತದೆ. ಓರ್ವ ಮಹಿಳೆ ಶಿಕ್ಷಣವನ್ನು ಕಲಿಯಲು ಹೊರಟರೆ ಶಾಲೆ ಕಲಿತು ಯಾರಿಗೂ ಉದ್ಧಾರ ಮಾಡುವ ಅವಶ್ಯಕತೆ ಇಲ್ಲ ಎನ್ನುವಂತಹ ಕಟು ಮಾತುಗಳು ಸುತ್ತಲಿನ ಜನರಿಂದ ಕೇಳಬೇಕಾಗುತ್ತದೆ. ಹೊಸ್ತಿಲು ದಾಟಿ ಹೊರಗೆ ಕಲಿಯಲು ಹೊರಟ ಮಹಿಳೆಯನ್ನು ಸಮಾಜ ಕಾಣುವ ದೃಷ್ಟಿಕೋನವೇ ಬೇರೆಯಾಗುತ್ತದೆ. ಹೆಣ್ಣನ್ನು ಸದಾ ಸಾಂಪ್ರದಾಯಿಕ ಚೌಕಟ್ಟಿನಲ್ಲಿಡುತ್ತಾ ಬಂದಿರುವ ಪುರುಷ ಪ್ರಧಾನ ವ್ಯವಸ್ಥೆಯು ಹುಟ್ಟುಹಾಕಿರುವ ಧರ್ಮವು ಕೂಡ ಮಹಿಳೆಯರು ಶಿಕ್ಷಣವನ್ನು ಪಡೆಯದಂತೆ ಮಾಡುತ್ತಾರೆ ಮತ್ತು ಶಿಕ್ಷಣದಿಂದ ವಂಚಿತರನ್ನಾಗಿಯೂ ಮಾಡುತ್ತದೆ.



ಸುಧಾರಣಾವಧಿ ಕಾಲಘಟ್ಟದಲ್ಲಿ ಶಿಕ್ಷಣವನ್ನು ಪಡೆಯಲು ಪ್ರೋತ್ಸಾಹಿಸಲಾಗುತ್ತಿತ್ತು. ಜಾರಿಗೆ ಬಂದಂತಹ ಶಿಕ್ಷಣವು ಹಿಂದೂ ಧರ್ಮದ ಮೇಲ್ವರ್ಗದ ಮಹಿಳೆಯರನ್ನು, ಮತ್ತೆ ಕ್ರಿಶ್ಚಿಯನ್ ಧರ್ಮದ ಮಹಿಳೆಯರಿಗೆ ನೀಡಲು ಮುಂದಾಯಿತು. ಹೇಳಿದಂತೆ ಮುಸ್ಲಿಂ ಮಹಿಳೆಯರು ಶಿಕ್ಷಣದಿಂದ ದೂರವೇ ಇರುವಂತಾಯಿತು. ಇಂದಿಗೂ ಕೂಡ ಈ ಧರ್ಮದವರಲ್ಲಿ ಕೆಲವರನ್ನು ಹೊರತು ಪಡಿಸಿದರೆ ಉಳಿದಂತಹ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿಯೇ ಇದ್ದಾರೆ.

ಶಿಕ್ಷಣದಿಂದ ವಂಚಿತರಾಗಲು ಪುರುಷ ಪ್ರಧಾನ ವ್ಯವಸ್ಥೆ ರೂಪಿಸಿರುವ ಮೌಲ್ಯಗಳಲ್ಲಿ ಒಂದಾದ ಮದುವೆಯು ಹೆಣ್ಣನ್ನು ಶಿಕ್ಷಣದಿಂದ ವಂಚಿತರಾಗುವಂತೆ ಮಾಡುತ್ತದೆ. ತಂದೆ ತಾಯಿಗಳಿಗೆ ಅರಿವಿನ ಕೊರತೆ, ಶಿಕ್ಷಣದ ಮಹತ್ವದ ಬಗ್ಗೆ ತಿಳುವಳಿಕೆಯಿರದೇ ಇರುವ ಹೆಣ್ಣಿಗೆ ಏಕೆ ಶಿಕ್ಷಣ ಕೊಡಿಸಬೇಕೆಂಬ ಮನೋಭಾವ ಇವೆಲ್ಲದರ ಪರಿಣಾಮ ಹೆಣ್ಣಿನ ಶಿಕ್ಷಣದ ಮೇಲಾಗುತ್ತದೆ.

ಪ್ರದೇಶದಲ್ಲಿ ಸಂದರ್ಶಿಸಿದ ಒಟ್ಟು ಮಹಿಳೆಯರಲ್ಲಿ ಜಾಲಹಳ್ಳಿ ೧೪ ಮಹಿಳೆಯರು ಪ್ರೌಢ ಶಿಕ್ಷಣ ಮುಗಿಸಿದವರು ಇದ್ದಾರೆ. ಓದು ಬರಹ ಕಲಿತ ನಿಮಗೆ ಹೇಗೆ ಅನಿಸುತ್ತದೆ. ಶಿಕ್ಷಣ ಬಿಡು ಅಂತಿರಾ ಅಥವಾ ಶಿಕ್ಷಣ ಬೇಡ ಅಂತಿರಾ ಎಂದು ಪ್ರಶ್ನಿಸಿದಾಗ "ಶಿಕ್ಷಣದಿಂದ ಈ ಭಾಗದಲ್ಲಿ ಎಷ್ಟೋ ಅನುಕೂಲಗಳಿವೆ, ನಮಗೆ ಓದಲು ಬರೆಯಲು ಬರುವುದರಿಂದ ವ್ಯಾಪಾರದಲ್ಲಿ ಮೋಸನಡೆದರೆ ಅದನ್ನು ಕಾದು ಹಿಡಿಯಬಹುದು, ಮುಗ್ಧ ಅನಕ್ಷರಸ್ಥ ಮಹಿಳೆಯರನ್ನು ಕಾಡದೆ ಮೋಸಮಾಡುವವರಿಗೆ ಮತ್ತಷ್ಟು ಅವಕಾಶವಿರುತ್ತದೆ. ಹೀಗಾಗಿ ನಾವು ಮೋಸಹೋಗುವುದನ್ನು ತಪ್ಪಿಸಿಕೊಳ್ಳಬಹುದು. ಶಿಕ್ಷಣವು ಒಂದು ಪ್ರಮುಖವಾದುದು. ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಆದ್ದರಿಂದ ನಮ್ಮ ಜನರು ಸೇರಿ ಪ್ರತಿಯೊಬ್ಬ ಮಹಿಳೆಯು ಶಿಕ್ಷಣವನ್ನು ಪಡೆಯಬೇಕು ಶಿಕ್ಷಣದಿಂದ ಲಾಭವಿದೆ. ಅನುಕೂಲತೊಗಳಿವೆ. ಹೊರತು ನಷ್ಟವೇನು ಅಲ್ಲ" ಎಂಬುದು ಉತ್ತರ ಕೊಟ್ಟರು

[illegible]

ಈ ಹದಿನಾಲ್ಕು ಜನರು ಶಿಕ್ಷಣವನ್ನು ಪಡೆಯಬೇಕೆಂದಾಗ ಈ ಮನೆಯ ಸದಸ್ಯರಿಂದ ಮಧ್ಯ ಕಲಿಯಬೇಕೆಂದು ಹಂಬಲದಿಂದಾಗಿ ಪ್ರೌಢಶಾಲೆಯವರೆಗೂ ಕಲಿತರು, ಮುಂದೆ ಮದುವೆ ಮಾಡಿ ಕೊಟ್ಟರು ಎಂದರು.

ಅರಕೇರಾ ಊರಲ್ಲಿ ಶಿಕ್ಷಣದ ಕಡೆಗೆ ಹೆಚ್ಚಿನ ಒಲವು ಇದೆ. ಸಂದರ್ಶಿಸಿದ ಕೆಲವು ಮಹಿಳೆಯರಲ್ಲೂ ಅನಕ್ಷರಸ್ಥರಿದ್ದಾರೆ. ಆದರೆ ಈ ಪ್ರದೇಶದಲ್ಲಿ ಶಿಕ್ಷಣ ಮಟ್ಟ ಹೆಚ್ಚಾಗಿದೆ. ಇಲ್ಲಿ ಪದವಿಯನ್ನು ಮುಗಿಸಿ ಸ್ನಾತಕೋತ್ತರ ಮೆಟ್ಟಿಲು ಹತ್ತಿದವರಿದ್ದಾರೆ. ಆದ್ದರಿಂದ ಇಲ್ಲಿ ಕೆಲವು ಮಹಿಳೆಯರು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಿ ಒಳ್ಳೆಯ ಶಿಕ್ಷಣ ಕೊಡಿಸಲು ಮುಂದಾಗಿದ್ದಾರೆ. ಮತ್ತು ಈಗ ಮುಖ್ಯವಾಗಿ ಎಲ್ಲಾ ಗ್ರಾಮಗಳಲ್ಲಿ ಅಂಗನವಾಡಿ ಕೇಂದ್ರಗಳಾಗಿದುದ್ದರಿಂದ ಎಲ್ಲಾರೂ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುತ್ತಿದ್ದಾರೆ. ದೇವದುರ್ಗ ತುಂಬಾ ಸಮೀಪವಿರುವುದರಿಂದ ಇವರು ಪ್ರೌಢಶಾಲೆಗೆ ಹೋಗಲು ಕಾಲೇಜಿಗೆ ಹೋಗಲು ಕೊರತೆಯಿಲ್ಲ. ಪದವಿ ಪೂರ್ವ ಕಾಲೇಜು, ಪ್ರಥಮದರ್ಜೆಕಾಲೇಜುಗಳು ಇರುವುದರಿಂದ ಶಿಕ್ಷಣವನ್ನು ಪಡೆಯಲು ಯಾವುದೇ ಕೊರತೆ ಕಂಡು ಬರುವುದಿಲ್ಲ. ಆದರೆ ಸಂದರ್ಶಿಸಿದ ಮಹಿಳೆಯರಲ್ಲಿ ಕೆಲವರೂ ಒಬ್ಬರಿಬ್ಬರು ಅಕ್ಷರಸ್ಥರು ಉಳಿದೆಲ್ಲ ಅನಕ್ಷರಸ್ಥರಾಗಿದ್ದರೆ. ಅವರ ಅನಕ್ಷರತೆಗೆ ತಂದೆ ತಾಯಿ ಮನೆಯಲ್ಲಿರುವ ಕೆಲಸ ಕಿತ್ತು ತಿನ್ನುವ ಬಡತನ, ಶಾಲೆಗೆ ಹೋದರೆ ಮನೆಯಲ್ಲಿರುವ ಕೆಲಸ ಚಿಕ್ಕಮಕ್ಕಳಿದ್ದರೆ ಅವರನ್ನೂ ನೋಡಿಕೊಂಡು ಹೋಗುವುದು ಇವೆಲ್ಲಾ ಕೆಲಸಗಳನ್ನು ಮಾಡುವುದು ಆಗುವುದಿಲ್ಲವೆಂದು ತಂದೆ ತಾಯಿಯರು ಶಿಕ್ಷಣದಿಂದ ವಂಚಿತರನ್ನಾಗಿ ಮಾಡಿದರು. ಮತ್ತು ಹೆಣ್ಣು ಶಿಕ್ಷಣ ಕಲಿತರೆ ಒಲೆಯ ಮುಂದೆ ಕೂಡುವುದು ತಪ್ಪಲ್ಲ ಎನ್ನುವ ಮನೋಭಾವನೆಯಿಂದಾಗಿ ಪುರುಷ ಕಲಿತರೆ ಉದ್ಯೋಗದಲ್ಲಿ ತೊಡಗಿ ಮನೆಯ ಸದಸ್ಯರನ್ನು ನೋಡಿಕೊಳ್ಳುತ್ತಾನೆ ಆದರೆ ಮಹಿಳೆ ಕಲಿತರೆ ಅದರ ಫಲವೆಲ್ಲ ಆಕೆಯ ಗಂಡನ ಮನೆಯವರಿಗೆ ಸಿಗುತ್ತದೆ. ನಾವು ಕಲಿಸಿದವರಿಗೆ ಏನೂ ದೊರೆಯದು, ಎಂಬ ತಂದೆ ತಾಯಿಯರ ನಕಾರಾತ್ಮಕ ಭಾವನೆಯನ್ನು ಹೆಣ್ಣು ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಾರೆ.

ಶಿಕ್ಷಣ ಎನ್ನುವದು ಪುರುಷನ ಪರವಾಗಿ ಮಹಿಳೆಯರ ವಿರುದ್ಧವಾಗಿಯೇ ನಿಂತಿದೆ. ಪುರುಷನಿಗೆ ವೈಚಾರಿಕ ಶಿಕ್ಷಣ ನೀಡಿದರೆ ಮಹಿಳೆಯರಿಗೆ ಅನೌಪಚಾರಿಕ, ಸಾಂಪ್ರದಾಯಿಕ ಶಿಕ್ಷಣವನ್ನು ನೀಡುತ್ತಾರೆ. ಒಟ್ಟಾರೆಯಾಗಿ ಶಿಕ್ಷಣವೆನ್ನುವುದು ಈ ಪ್ರದೇಶದ ಮಹಿಳೆಯರ ಪಾಲಿಗೆ ಮರೀಚಿಕೆಯಾಗುತ್ತಲೇ ಇದೆ.

ಈ ದೇವದುರ್ಗ ತಾಲೂಕಿನಲ್ಲಿ ಶಿಕ್ಷಣವೆಂದರೆ ಅದು ನಿಲುಕಲಾರದಂತಹದ್ದಾಗಿದೆ, ಕಾರಣ ಬಡತನ. ಬಡತನಕ್ಕೆ ಕಾರಣ ಆರ್ಥಿಕತೆ ಹಾಗಾಗಿ ಮಹಿಳೆಯರಲ್ಲಿ ಅಕ್ಷರಸ್ಥರ ಪ್ರಮಾಣ ತುಂಬಾ ಕಡಿಮೆ. ಇಡೀ ತಾಲ್ಲೂಕಿನಲ್ಲಿ ಅವಲೋಕಿಸುತ್ತ ಹೋದರೆ ಆರ್ಥಿಕವಾಗಿ ಪ್ರಬಲವಾಗಿರುವರು ಮಾತ್ರ ಅದರಲ್ಲಿ ಉದ್ಯೋಗಸ್ಥ ಕುಟುಂಬಗಳಲ್ಲಿ ಮಾತ್ರ ಅಲ್ಲಲ್ಲಿ ಕಲಿತಿರುವುದು ಕಂಡು ಬರುತ್ತದೆ. ಬೆರಳೆಣಿಕೆಯಷ್ಟು ಕಡಿಮೆ ಉದ್ಯೋಗದಲ್ಲಿದ್ದಾರೆ. ಹಾಗಾಗಿ ಕರ್ನಾಟಕದಲ್ಲೇ ಅತಿ ಹಿಂದುಳಿದ ಪ್ರದೇಶ ಎಂದು ಹೆಸರು ಪಡೆದ ದೇವದುರ್ಗದಲ್ಲಿ ಮಹಿಳಾ ಸಾರಕ್ಷರತಾ ಪ್ರಮಾಣ ತುಂಬಾ ಕಡಿಮೆ ಇದೆ ಎಂದು ಹೇಳಬಹುದು.

[illegible]

[illegible]

## ಪ್ರಕರಣ - ೧

ಹೆಸರು : ಹುಸೇನಿ ಬೀ

ವಯಸ್ಸು : ೪೦

ಜಾತಿ : ಲದಾಪ್ (ಮುಸ್ಲಿಂ)

ಶಿಕ್ಷಣ : ಅನಕ್ಷರಸ್ಥೆ

"ನಮಸ್ಕಾರಿಯಪ್ಪ ನಾನು ಹೊಲದಾಗ ಕೆಲಸ ಮಾಡಿದಾನಪ್ಪ. ನಾನು ನನ್ನ ಗಂಡ ಇಬ್ಬರು ದುಡಿದಿದ್ದರೂ ಸಾಲಂಗಿಲ್ಲರಿಯಪ್ಪ ಏನು ಮಾಡ್ಬೇಕೇಳಿ ಹೊಟ್ಟೆಪಾಡು ಐತೀರಿ; ಅದಕ್ಕೀರಿ ಹೊಲದಲ್ಲಿ ನಾನು ಕೆಲಸ ಮಾಡುತ್ತೇನ್ರೀ ಯಪ್ಪಾ" ನಿಮಗೆ ದಿನಕ್ಕೆ ಎಷ್ಟು ಹೊತ್ತು ದುಡಿಮೆ ಮಾಡಿತ್ತೀರಿ ಎಮ್ಮ ಇಲ್ಲೀರಿಯಪ್ಪಾ ನಾವು ಒಂದು ದಿವಸದಾಗ ೮-೯ ತಾಸು ದುಡಿತ್ತೀರಿಯಪ್ಪಾ ಏನು ಮಾಡ್ಬೇಕರಿ ಕೂಲಿ ಮಾಡಿದರೆ ಜೀವನರೀಯಪ್ಪ ಹೌರಮ್ಮ ನೀವು ದಿನದಲ್ಲಿ ೮ ೯ ತಾಸು ದುಡಿದರೆ ನಿಮಗೆ ಕಷ್ಟ ಅಗಲ್ಲವಾ ನಿಮಗೆ ಕಷ್ಟ ಆಗುವುದಿಲ್ಲ "ಆತದ್ರಿಯಪ್ಪ ಬಹಳ ತ್ರಾಸು ಆತ್ತದ ಹೊಟ್ಟೆತುಂಬಿಸಿಕೊಳ್ಳಲೇಕಪ್ಪ ಏನು ಮಾಡಬೇಕು" ಹೌದಮ್ಮ ನೀವು ಕೆಲಸ ಮಾಡವ ಹೊಲದಲ್ಲಿ ನಿಮಗೆ ಯಾರಾದ್ರು ಲೈಂಗಿಕ ದೌರ್ಜನ್ಯ ಕೊಡುತ್ತಾರೆ. ಏನ್ನಿಯತ್ಮ ಹಾಗಂದರೆ ಗೊತ್ತಿಲ್ಲಪ್ಪ ನಿಮ್ಮ ಹೊಲದ ಧಣಿ ನಿಮ್ಮನ್ನು ಹಿಡಿದುಕೊಳ್ಳುವುದು ಮತ್ತು ಮೈಮುಟ್ಟುವುದು ಮಾಡತ್ತನೇಯಮ್ಮ, ಇಲ್ಲರೀಯಪ್ಪ ಹಂಗೇನಿಲ್ಲ ನಮ್ಮ ಧಣಿಗಳು ಒಳ್ಳೆಯ ಮನುಷ್ಯಯಿರ್ತಾರೀಯಪ್ಪ ಹೌದೇನಮ್ಮ ನಿಮಗೆ ದಿನದ ಕೂಲಿಯೆಷ್ಟು ಕೊಡತ್ತಾರವ್ವ, ಇಲ್ಲರೀ ನಮಗೆ ದಿನಕ್ಕೆ ನಮ್ಮ ಧಣಿ ೪೦-೫೦ ಕೊಡುತ್ತಾರಿಯಪ್ಪ ಈ ಕೂಲಿಯಿಂದ ನಿಮಗೆ ಏನಾದರೂ ನಿಮ್ಮ ಮನೆಗೆ ಲಾಭವಾಗಿದಿಯಾ ಏನಾತ್ರೀರಿಯಪ್ಪ ಏನಾಗುವುದಿಲ್ಲ. ನಮ್ಮ ಹೊಟ್ಟೆ ಕೂಡ ಆಗುವುದಿಲ್ಲರೀ ಇನ್ನ ಬಟ್ಟೆಯಲ್ಲಿತರನಪ್ಪ, ನಮ್ಮ ಇದರಿಂದ ಏನಾಗುವುದಿಲ್ಲಪ್ಪ ಏನಾ ಮಾಡುತ್ರಿರಿಯಪ್ಪ ಕುಟುಂಬ ನಡೆಯಬೇಕಪ್ಪ ಅದಕ್ಕೆ ಹೊಲಕ ಕೆಲಸಹೋಗಲೇರಿಯಪ್ಪ. ಹೌದವ್ವ ನಿಮಗೆ ಕೂಲಿಯಲ್ಲಿ ಹೆಚ್ಚು ಕಮ್ಮಿ ಕೊಡತ್ತಾರೆನಮ್ಮ, ಹೌದ್ರಿಯಪ್ಪ ಗಂಡುಮಕ್ಕಳಿಗೆ ೭೦-೮೦ ಕೊಡುತ್ತಾರಿಯಪ್ಪ. ನಮಗೆ ಕಡಿಮೆ ಕೊಡುತ್ತಾರೆಯಪ್ಪ ಏನ್‌ಮಾಡಬೇಕುಯಪ್ಪ ತಿಳಿಯದುದಾಗಿದೆಯಪ್ಪ ಆದರೂ ನಾವು ರೋಗದಲ್ಲಿ ಕೆಲಸ ಮಾಡುತ್ತೀರಿಯಪ್ಪ ನೀವು ಮಾಡುವ ಹೊಲಗಳಲ್ಲಿ ಏನಾದರೂ ಆದರೆ ಅಂದರೆ ಅರಾಮ ಇಲ್ಲದಿದ್ದರೆ ಆರೋಗ್ಯಕೆ... ನಿಮ್ಮ ಧಣಿ ಏನಾದುದು ಔಚಾರಿ.. ಕೊಡಸ್ತಾನೆಮ್ಮ ಇಲಿರೀಯವು ಏನು ಕೊಡಸಂಗಿಲ್ಲರೀಯಪ್ಪ ನಾವು ತೋರಿನ ಬೇಕರಿಯಪ್ಪ ನಮಗೆ ನಾವು ದುಡಿದರಷ್ಟೇ ತೋರಿಸಬೇಕೂರಿಯಪ್ಪ ನೀವು ನಿಮ್ಮ ನಮ್ಮ ಸ್ಥಿತಿ ಹೇಗಿದೆ ಸ್ಥಿತಿ ಎಂದರೆ ನಮ್ಮ ಮನಿ ಪರಿಸ್ಥಿತಿಯಮ್ಮ ನಮ್ಮ ಮನಿ ಪರಿಸ್ಥಿತಿ

[illegible]

[illegible]

ಚೋಲ ಇದ್ರೆನಾವು ದುಡಿದತ್ತಿ ನಮ್ಮ ಮನಿನೆ ಊಟಕ್ಕೆ ಬಟ್ಟೆಗೆ ಇಡಿಯಪ್ಪ ಅದು ಬಿಟ್ಟರೆ ಏನು ಇಲ್ಲರಿಯಪ್ಪ ನೀವು ಹೊಲದಾಗ ಕೆಲಸಮಾಡಿದ್ದೇಯಲಮ್ಮ ಈಗ ಮಿಷನ್‌ಗಳು ಬಂದಾವಲ್ಲ ನಿಮಗೆ ಅದರಿಂದ ತ್ರಾಸ್ ಆತ್ತದೇನಮ್ಮ ಅಂತದಿಲ್ಲಪ್ಪ ಅದರಿಂದ ನಮಗೆ ಬಹಳ ...ಇದ್ದೀಯಪ್ಪ ಏನು ಮಾಬೇಕುರಿ ಮಿಷನ್ ಇದ್ದರೆ ಅವೇ ಕೆಲಸ ಮಾಡುತ್ತಾರೀಯಪ್ಪ ಅವುಗಳ ನಮ್ಮ ಕೆಲಸಕಡಿಮೆ ಮಾಡದೀಯಪ್ಪ ಹೌದಮ್ಮ ನಿಮಗೆ ಪರ್ಸ್‌ದಲ್ಲಿ ಎಷ್ಟು ದಿನ ಹೊಲದಲ್ಲಿ ಕೆಲಸ ಮಾಡುತ್ತೀರಿ ಪವರ್ತದಲ್ಲಿ ೩ ತಿಂಗಳು ಮಾಡ್ತೀರಿ ಕೆಲಸ ಮಾಡ್ತೀರಿ ಹೌರಮ್ಮ

## ಪ್ರಕರಣ - ೨

ಹೆಸರು : ಶಿವಮ್ಮ

ವಯಸ್ಸು : ೨೮,

ಜಾತಿ : ಎಸ್.ಸಿ ಮಾದಿಗ

ಊರು : ದೇವತಗಲ್

ಶಿಕ್ಷಣ : ಅನಕ್ಷರಸ್ಥೆ

ಏನಮ್ಮ ನಿನ್ನ ಹೆಸರು, ನನ್ನ ಹೆಸರು ಶಿವಮ್ಮ ರೀ.ಸರ್ ಹೌದಮ್ಮ ನೀನು ಹೋಲದಲ್ಲಿ ಕೆಲಸ ಮಾಡುತ್ತೀಯಾ ಏನು ಇಲ್ಲ, ಇಲ್ಲ ರೀ ನಾನು ಹೊಲದಲ್ಲಿ ಕೆಲಸಮಾಡತೀನಿರೀ, ಸರ ಹೌದು ಸರ್ ದಿನದಲ್ಲಿ ೯ ತಾಸಿಗೇ ಹೋದರೂ ಸೂರ್ಯ ಮುಣಗಿದ್ದಾಗ ಬರತ್ತೀವಿರೀ ಸರ, ಹೌದವ್ವ ನೀವು ದಿನದಲ್ಲಿ ಎಷ್ಟು ತಾಸು ಕೆಲಸಕ್ಕೆ ಹೋಗುತ್ತೀವಿರಿ ಸರ್ ನಾವು ಮುಂಚಾನೆ ಊಟಮಾಡಿ ೯ ಗಂಟೆಗೆ ಹೋದವರು ಪರ್ ಸಂಜೆ ಹೊತ್ತಿಗೆ ೬ ಗಂಟೆಗೆ ಬರುತ್ತೀವ್‌ರಿ ಸರ್ ದಿನಕ್ಕೆ ೭-೮ ತಾಸು ಆಗುತ್ತಿತ್ತಸರ್ ನಿಮಗೆ ಅಷ್ಟೇರ್ ಕೆಲಸ ಮಾಡಿದರೆ ನಿಮ್ಮ ಬೇಸರ ಬೋರಲ್ಲದೆ ನಮ್ಮ ಬರುತ್ತದ ಸರ್ ಏನಾಮಾಡಬೇಕು ನಿವೇ ಹೇಳಿ ನಿವೇನಾದರೂ ನಮಗೆ ಕೆಲಸ ಕೊಡ್ಸಿತ್ತೀವಿ ಸರ್ ನಾವುಲ್ಲಿ ಕೊಡಸ ಬರುತ್ತದಮ್ಮ ನಾವು ಖಾಲಿ ಓದಿರುವರು ಹೌದನ್ನೀಸರ್ ನಿಮಗೆ ಹೊಲದಲ್ಲಿ ಯಾರಾದರೂ ಲೈಂಗಿಕ ಕಿರುಕುಳ ಕೊಡುತ್ತಾವಿರೀ ನಮ್ಮ ಮಾಲಕ ಅಗಂದರೆ ನಿಮ್ಮ ಮೈಮುಟ್ಟುವುದು, ನಿಮ್ಮನ್ನು ಇಡಿದುಕೊಳ್ಳುವುದು ಮಾಡುತ್ತಾನೇನಿರಿ ನಿಮ್ಮ ದಣಿ ಇಲ್ಲರೀ ಸರ್ ಹಾಗೇ ಮಾಡಲ್ಲ, ನಮ್ಮ ಧಣಿ ಬಹಳ ಒಳ್ಳೆಯವರು ಇದ್ದಾರೆ ಸರ್, ನೀವು ಬೇಸ್ ಹೇಳುತ್ತೀರಿಬುಟ್ರಿ ಸರ್ ಆಮನುಷ್ಯ ಹಂಗಿಲ್ಲ ನೋಡ್ರೀ ಸರ್, ನಿಮಗೆ ಏನಾದರೂ ಕೂಲಿಯಲ್ಲಿ ವ್ಯತ್ಯಾಸ ಏನಾದರೂ ಇದೆಯಾ ವ್ಯತ್ಯಾಸ ಅಂದ್ರೆ ಗಣ್‌ಮಕ್ಕಳಿಗೆ ಬೇರೆ ನಿಮಗೆ ಬೇರೆ ಅವರಿಗೆ ರೊಕ್ಕಜಾಸ್ತಿ ಕೊಡುವುದು ನಿಮಗೆ ಕಡಿಮೆ ಕೊಡುವುದು ಮಾಡುತ್ತಾರೇ ರೀ ಸರ್, ಗಣ್‌ಮಕ್ಕಳಿಗೆ ೭೦ ಕೊಟ್ಟರೆ ನಮಗೆ ೪೦ ಕೊಡ್ತಾರೆ ಸರ್ ನಿಮ್ಮ ಕೌಟುಂಬಿಕ ಸ್ಥಿತಿಗತಿ ಹೇಗೆ ಇದೆ ಅಮ್ಮ ನಮ್ಮ ಕುಟುಂಬದಲ್ಲಿ ಬಹಳ ಕಷ್ಟ ಇದೆ ಏನು ಮಾಡಬೇಕ್ರಿ ಸರ್ ನನ್ನ ಗಂಡ ದಿನ ಕುಡಿತಾನ ಸರ ಏನು ತಿಳಿಯಾದಾಗದ ಸರ ನಮ್ಮ ಮನೆಯಲ್ಲಿ ಬಹಳ ಕಷ್ಟ ಇದೆ. ನೀವು ಹೊಲದೊಳಗೆ ಕೆಲಸ ಮಾಡುತ್ತರಲ್ಲಾ ಅಲ್ಲಿ ಟ್ರಾಕ್ಟರ್, ಮಿಷನ್‌ಗಳಿಂದ ನಿಮಗೆ ತೊಂದರೆಯಾಗುತ್ತದೆ ನಮ್ಮ, ಹೌದುರೀ ಸರ್, ಅವು ಬಂದಾವ ಬಂದಾವ ನಮಗೆ ಬಹಳ ತ್ರಾಸ್ ಆಗಕ್ಕತ್ತಾದ ಸರ್ ಏನು ಮಾಡ್ಬೇಕು ಸರ್ ನನಗೆ ತಿಳಿಯದಂಗ ಆಶದ ಸರ ಅವು ಬಂದ ಸರ ನಮ್ಮ ಕೆಲಸ ಕಡಿಮೆ ಆಗುವ ಸರ್ ಏನು ಮಾಡ್ಬೇಕು ನಮ್ಮ ಹೊಟ್ಟೆಪಾಡು ನಡೆಯಬೇಕಲ್ಲ ಸರ್ ಆದರೂನೂ ನಾವು ದುಡಿತೀನಿ ಸರ್ ಹೋಲಗಳಲ್ಲಿ

## ಪ್ರಕರಣ - ೩

ಹೆಸರು : ಸುಕವಿಯಮ್ಮ

ಜಾತಿ : ನಾಯಕ

ವಯಸ್ಸು : ೩೫

ಶಿಕ್ಷಣ : ಇಲ್ಲ

ಊರು : ಗಬ್ಬೂರು

ಏನಮ್ಮ ನಿನ್ನ ಹೆಸರು ನನ್ನ ಹೆಸರು ಸುಕವಿಯಮ್ಮ ಯಾವ ಕೆಲಸ ಮಾಡುತ್ತಿಯಮ್ಮ ನೀನು ನಾನು ಸರ್ ಹೊಲದಲ್ಲಿ ಕೆಲಸ ಮಾಡುತ್ತೀನಿ ಸರ್ ಹೌದು ಏನು ಈ ಕೆಲಸದಿಂದ ನಿನಗೆ ಲಾಭ ಇದೆಯಾ ಏನು ಇದೆ ಸರ್ ಏನು ಇಲ್ಲ ಸುಮ್ನೆ ಮನೆಯಲ್ಲಿ ಕೂಡಕ್ಕೆ ಆಗುತ್ತದೆ ಏನು ಸಾರ್ ಕೆಲಸಕ್ಕೆಹೋಗಲೇ ಬೇಕು ಸರ್ ದುಡಿಯದಿದ್ದರೆ ಮನೆಗೆ ಯಾರು ತಂದುಕೊಡ್ತಾರೆ ಸರ್ ನನ್ನ ಗಂಡ ಬರಿ ಇಸ್ಪೀಟ್ ಆಟಕ್ಕೆ ಆಡುತ್ತಾವ ಕುಡಿತಾನ ಸರ್ ನಮ್ಮ ಜೀವನ ನಡೆಯುವುದೇ ಕಷ್ಟ ಸರ್ ಅಂದರೆ ನೀವು ಹೊಲದಲ್ಲಿ ಗದ್ದೆಗಳಲ್ಲಿ ದುಡಿಯುವುದರಿಂದನೇ ನಮ್ಮ ಜೀವನ ನನ್ನ ಹೌದು ಸರ್ ಗದ್ದೆಗಳಲ್ಲಿ ಕೆಲಸ ಮಾಡಿದಾಗ ನಮಗೆ ಬಂದಂತಹ ಕೊಪ್ಪದಲ್ಲಿ ಸಂಸಾರ ನಡೆಸುತ್ತವೆ ಸರ್ ನಿಮಗೆ ನಿಮ್ಮ ದುಡಿಮೆಯಿಂದ ತೃಪ್ತಿ ಇದೆಯಾ ನಿಂತ ಇಲ್ಲಿ ಸರ್ ನಮ್ಮ ದುಡಿಮೆಯಿಂದ ತೃಪ್ತಿ ಇಲ್ಲ. ನಿಮಗೆ ಕೂಲಿಯಲ್ಲಿ ತಾರತಮ್ಯ ಏನಾದರೂ ಇದೆಯಾ ಅಂದರೆ ನಿಮಗೆ ಹಣ ಹೆಚ್ಚು ಕಡಿಮೆ ಕೊಡುವುದು ಇದೆಯಾ ಇರೆ ಸರ್ ಗಂಡಸರಿಗೆ ಜಾಸ್ತಿ ಕೊಡ್ತಾರೆ ನಮಗೆ ಕಡಿಮೆ ಕೊಡ್ತಾರೆ ಅವರಿಗಿನ್ನ ನಾವೇ ಹೆಚ್ಚು ಕೆಲಸ ಮಾಡ್ತಿವಿ ಆದರೆ ಏನು ಮಾಡದು ಅವರೇ ಹೆಚ್ಚು ಹಣ ತಗೋತಾರೆ ಹೊಲದ ಮಾಲೀಕ ನಿಮಗೆ ಲೈಂಗಿಕ ದೌರ್ಜನ್ಯ ಏನಾದರೂ ಎಸಗಿದ್ದಾನೆಯೇ ಇಲ್ಲ ಹಾಗೇನಿಲ್ಲ ನಮ್ಮ ಧಣಿಗಳು ಬಹಳ ಒಳ್ಳೆಯವರು ಇದ್ದಾರೆ ಹಾಗಾಗಿ ನಮಗೆ ತ್ರಾಸ್ ಕೊಟ್ಟಿಲ್ಲರಿ ಸರ್ ನಮ್ಮ ಧಣಿ ಚಲೋ ಮನುಷ್ಯ ಇದ್ದಾನರೀ ಸರ್ ಏನಾದರೂ ನಿಮಗೆ ಆರೋಗ್ಯದ ಸೌಲಭ್ಯಗಳು ಇವೆನಾ. ಇಲ್ಲ ಬಿಡರೀ ಸರ ಹಾಗೇ ನಮಗೆ ಆರಾಮ ಇಲ್ಲ ಅಂದರೆ ನಾವು ನಮ್ಮ ದವಾಖಾನೆಗೆ ಹೋಗುತ್ತೇವೆ ಸರ್, ನಿಮ್ಮ ಕುಟುಂಬದ ಸ್ಥಿತಿ ಹೇಗಿವೆ ಚೆನ್ನಾಗಿದೆ ಸರ್ ನನ್ನ ಮಕ್ಕಳು ಇಬ್ಬರು ದುಡಿಯುತ್ತಾರ ಸರ ಮತ್ತು ನಾನು ದುಡಿತೀನಿ ಸರ್ ಹೀಗಾಗಿ ನಮ್ಮ ಕುಟುಂಬ ಚೆನ್ನಾಗಿದೆ ಸರ್ ನಮಗೇನು ಆ ದೇವರು ಹೊಟ್ಟೆ ಬಟ್ಟೆ ಕೊಟ್ರು ಕಾಪಾಡ... ಸರ ಮಗೆ ದೇವರ ಆರ್ಶೀವಾದ ಇದೆ ಸರ.

[illegible]

[illegible]

[illegible]

## ಪ್ರಕರಣ - ೪

ಹೆಸರು : ಮೋನಮ್ಮ

ಜಾತಿ : ಎಸ್.ಸಿ ಮಾದಿಗ

ಊರು : ಅರಕೇರಾ

ವಯಸ್ಸು : ೩೦

ಶಿಕ್ಷಣ : ಅನಕ್ಷರಸ್ಥೆ

ದೇವದುರ್ಗ ತಾಲೂಕಿನ ಹೋಬಳಿಯಾದ ಅರಕೇರಾನವರಾದ ಮೋನಮ್ಮ ಅವರ ಪ್ರಕರಣ ಅಧ್ಯಯನ.

ನಿನ್ನ ಹೆಸರು ಅಮ್ಮ ಮೋನಮ್ಮ ಏನು ಮಾಡ್ತೀಯ ಕೆಲಸ ನಾನು ಹೊಲದಲ್ಲಿ ದುಡಿತೀನೀರೀ ಹೊಲದಲ್ಲಿ ಯಾವ ಯಾವ ಕೆಲಸ ಮಾಡತ್ತಿಯ ಬಿತ್ತುವುದು, ಕಳೆ ತೆಗೆಯುವುದು ನಾಟಿ ಮಾಡುವುದು ಎಲ್ಲಾ ರೀತಿಯ ಕೆಲಸಗಳು ಹೊಲ ಗದ್ದೆಗಳಲ್ಲಿ ಮಾಡುತ್ತೀನಿ ಸರ್, ನೀವು ಹೊಲದಲ್ಲಿ ದುಡಿಮೆ ಹೇಂಗಿದೆಮ್ಮ ಬಹಳ ಕಷ್ಟಪಡಬೇಕು ಹೊಲದಲ್ಲಿ ದಿನಕ್ಕೆ ೭-೮ ತಾಸು ದುಡಿತ್ತೀರಿ, ದುಡಿದು ಮನೆಗೆ ಬಂದು ಮನೆ ಕೆಲಸ ಮಾಡಬೇಕಾಗಿ ನಮಗೆ ಬಹಳತ್ರಾಸ್ ಆಗತ್ತದರೀ ಏನು ಮಾಡಬೇಕು ನಾವು ದುಡಿದು ಎಂಬ ಬೇಕು ಅದಕ್ಕೆ ದುಡಿತೀವಿ ರೀ ನಿಮಗೆ ಹೊಲದಲ್ಲಿ ವೇತನ ಎಷ್ಟು ಕೊಡುತ್ತಾರರೀ ಅಂದರೆ ರೊಕ್ಕ ನಮಗೆ ಎಷ್ಟು ಕೊಡುತ್ತಾರೆ ಅಂದರೆ ೪೦ ರೂಪಾಯಿ ಗಂಡು ಮಕ್ಕಳಿಗೆ ೭೦ಕೊಡುತ್ತಾರೆ ನಾವು ಕಟ್ಟೆ ದುಡಿದಾಗ ದುಡಿದ ನಮಗೆ ಕಡಿಮೆ ಕೂಲಿನೇ ಸಿಗುತ್ತದೆ ರೀ, ನಿಮಗೆ ಕಡಿಮೆ ಕೊಟ್ಟರೆ ಬೇಸರ ಆಗಲ್ವ ಬೇಸರ ಆದರೆ ನಾವೇನು ಮಾಡಕ್ಕಾಗತೈತ್ರಿ, ಇಲ್ಲ ಅಂದರೆ ಕೆಲಸ ಬಿಡ್ತೀ ಅಂತಹೇಳ್ತಾರರೀ ನಿಮಗೆ ಯಾರಾದರೂ ಲೈಂಗಿಕ ಬಗ್ಗೆ ಪಿಡಿಸ್ತಾರೇನ್ರೀ ನಮ್ಮ ಹೊಲದ ಮಾಲೀಕ ಹಾಗೇ ನಿಲ್ಲರೀ ನಮ್ಮ ಮಾಲೀಕ ೨ ದಿನಕ್ಕೊಮ್ಮೆ ೩ ದಿನಕ್ಕೊಮ್ಮೆ ಈ ಕಡೆ ಬರುತ್ತಾನೆ ಹಾಗಾಗಿ ನಮಗೆ ಯಾವುದೇ ರೀತಿಯ ತೊಂದರೆ ಕೊಟ್ಟಿಲ್ಲರೀ ನಿಮಗೆ ಏನಾದರೂ ನಿಮ್ಮ ಮಾಲಿಕ ಆರಾಮ ಇಲ್ಲದಿದ್ದಾಗ ಏನಾದರೂ ಸಹಾಯ ಮಾಡನೇನಮ್ಮ ಮಾಡನರೀ ಕೆಲಸದೆ ಮಾಡುವಾಗ ನಮಗೆ ಆರಾಮ ಇಲ್ಲಂದಿಗಾ ರೊಕ್ಕಕೊಟ್ಟನಾರಿ, ಆ ಕೊಟ್ಟರೊಕ್ಕ ನಮ್ಮ ಕೂಲಿಯಲ್ಲಿ ಮುರೀತಾನರೀ, ಹೌದು ಈಗ ಬಂದದವ್ವಾ ಮಿಷನ್‌ಗಳಿಂದ ನಿಮಗೆ ಕೆಲಸಕ್ಕೆ ತೊಂದರೆಯಿದರೂ ಹೌದು ಸರ್ ತೊಂದರೆ ಟ್ರಾಕ್ಟರ್ ಟಿಪ್ಪರ್‌ಗಳು ಬಂದಾಗಿನಿಂದ ನಮ್ಮ ಕೆಲಸ ಕಡಿಮೆ ಆಗೈತೀರಿ ನಮ್ಮ ದುಡಿಮೆಯಿಂದಲೇ ಮನೆಯನ್ನು ಸಾಕುಬೇಕು ಆದರೆ ಏನು ಮಾಡಬೇಕು ನಾವು ಮಾಡ ಕೆಲಸವನ್ನು ಆ ಮಿಷನ್‌ಗಳೇ ಮಾಡಿ ಮುಗಿಸುತಾವರೀ. ಇರದಿಂದ ನಮ್ಮ ತೊಂದರೆ ಯಿಂದರೀ ನಿಮ್ಮ ಕುಟುಂಬದ ಸ್ಥಿತಿ ಹೇಗಿದೆ. ಸರ್ ನಮ್ಮ ಕುಟುಂಬದ ಸ್ಥಿತಿ ಪರವಾಗಿಲ್ಲ ರೀ ಹೊಟ್ಟೆ ಬಟ್ಟೆಗೆ ಸಾಕುತ್ತದೆ ರೀ ನಮ್ಮಂತ ಬಡವರಿಗೆ ಇಷ್ಟೇ ಸಾಕುರೀ ನಮಗೆ ಹೆಚ್ಚಿನ ಆಸೆ ಇಲ್ಲರೀ ಸರ್.

[illegible]

[illegible]

[illegible]

[illegible]

[illegible]

# ಪ್ರಕರಣ - ೫

ಹೆಸರು : ಕವಿತ

ಊರು : ಮಸರಕಲ್

ಜಾತಿ : ನಾಯಕ

ಶಿಕ್ಷಣ : ಅನಕ್ಷರಸ್ಥೆ

ವಯಸ್ಸು : ೫೦

ಕವಿತ ಇವರು ಮಸರಕಲ್ ಹೋಬಳಿಗೆ ಸೇರಿದವರಾಗಿದ್ದು, ಇವರಿಗೆ ೫೦ ವರ್ಷ ವಯಸ್ಸು ಆಗಿದೆ. ಇವರು ಶಿಕ್ಷಣ ಕಲಿತಿಲ್ಲ. ಕವಿತ ಅವರ ದುಡಿಮೆ ದಿನಕ್ಕೆ ೭-೮ ತಾಸು ಇರುತ್ತದೆ. ಇವರು ಕೂಡ ಹೊಲ ಗದ್ದೆಗಳಲ್ಲಿ ದುಡಿಯುತ್ತಿರುತ್ತಾರೆ. ಇವರು ದುಡಿಮೆಯಿಂದ ಲೇ ಜೀವನವನ್ನು ಸಾಗಿಸಬೇಕಾಗಿದೆ. ಇದರಿಂದ ಅವರ ಕುಟುಂಬಕ್ಕೆ ದುಡಿಮೆಯೇ ಆಧಾರ ಸ್ತಂಭವಾಗಿದೆ. ಇವರು ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಿರುವುದರಿಂದ ಇವರಿಗೆ ಲೈಂಗಿಕ ದೌರ್ಜನ್ಯವನ್ನು ಹೊಲದ ಮಾಲಿಕರು ಕೊಟ್ಟಿಲ್ಲ ಅಂತ ಹೇಳಿದ್ದಾರೆ. ಯಾಕೆ ಅಂತ ಕೇಳಿದರೆ ನಮಗೆ ಅವರು ಯಾವ ರೀತಿಯ ತೊಂದರೆ ಹೊಟ್ಟಿಲ್ಲ ಎಂದು ಹೇಳಿರುತ್ತಾರೆ. ನೀವು ದುಡಿಯುವ ಹೊಲ ಗದ್ದೆಗಳಲ್ಲಿ ನಿಮಗೆ ಕೂಲಿಯಲ್ಲಿ ತಾರತಮ್ಯವಿದೆಯಾ. ಇದೆ ರೀ ಸರ್ ಯಾಕೇ ಇಲ್ಲ ದಿನಾಲು ಸಾಯಂಗ ದುಡಿದರೂ ನಮಗೆ ಬರೀ ೪೦-೫೦ ರೂಪಾಯಿ ಕೊಡುತ್ತಾರೆ. ಗಂಡಸರಿಗೆ ೭೦-೮೦ ರೂಪಾಯಿ ಕೊಡುತ್ತಾರೆ. ನಮಗೆ ಇಲ್ಲಿ ತಾರತಮ್ಯ ಮಾಡುತ್ತಾರೆ. ಏನಾ ಮಾಡಿದರೂ ನಮಗೆ ಕೂಲಿಯಲ್ಲಿ ತಾರತಮ್ಯವಿದ್ದೇವಿದೆ. ಸರ್ ನಮಗೆ ಹೆಚ್ಚು ಕೂಲಿ ಕೊಡಿ ಎಂದು ಕೇಳಿದರೆ ನಮ್ಮ ಮೂಲಕ ಕೆಲಸ ಮಾಡಿದ್ರೆ ಮಾಡಿ ಇಲ್ಲಂದರೆ ಹೋರಟು ಹೋಗಿ ಅಂತ ಗದರಸುತ್ತಾನೆ. ಅದಕ್ಕೆ ಏನು ಮಾಡುವುದು ಎಂದು ಸುಮ್ನೆ ಕೆಲಸ ಮಾಡುತ್ತೀರೀ. ಈ ರೀತಿಯಿಂದ ನಿಮಗೆ ತೊಂದರೆ ಆಗಲ್ವಾ. ಯಾಕೆ ಆಗಲ್ವಾ ಸರ್ ೪೦-೫೦ ರೂಪಾಯಿ ಎಲ್ಲಿಗೂ ಸಾಕಾಗುವುದಿಲ್ಲ, ಅದಕ್ಕೆ ನಾವು ಹೆಚ್ಚು ಕೇಳುವುದು. ಮಾಲಿಕ ಇಲ್ಲ ಅನ್ನುವುದು ಬರೀ ಇದಾಗಿದೆ ಸರ್ ಹಾಗದರೆ ಕೂಲಿಯಲ್ಲಿ ಕನಿಷ್ಠ ವೇತನ ಸಿಗುತ್ತದೆ. ನಿಮ್ಮ ಕುಟುಂಬದ ಸ್ಥಿತಿಗತಿ ಹೇಗಿದೆಯಮ್ಮ. ನಮ್ಮ ಕುಟುಂಬದಲ್ಲಿ ೮ ಜನದ್ದು ೪ ಮಂದಿ ಹೆಣ್ಣುಮಕ್ಕಳು ೨ ಗಣಮಕ್ಕಳು ನನ್ನ ಗಂಡ ಇಟ್ಟಂಗಿ ಕೆಲಸಕ್ಕೆ ಹೋಗ್ತಾರೇ ಆತ ದುಡಿದದ್ದು ಆತನಿಗೆ ಸಾಲುವುದಿಲ್ಲ ನಮಗೆ ಏನು ಕೊಡುವುದಿಲ್ಲ. ನಮ್ಮ ಹೆಣ್ಣು ಮಕ್ಕಳು ನನ್ನ ಜೊತೆ ದುಡಿಯುತ್ತಾರರೀ. ಅದಕ್ಕೆ ನಮ್ಮ ಮನೆಯಲ್ಲಿ ಅಂತಹ ಕಷ್ಟದ ಸ್ಥಿತಿ ಏನು ಇಲ್ಲಿರೀ ಆದರೂ ಹಬ್ಬ ಹರಿದಿನಗಳು ಬಂದರೆ ನಮಗೆ ಸ್ವಲ್ಪ ಕಷ್ಟ ಆಗುತ್ತ ರೀ, ಯಾಕೆಂದರೆ ಆವಾಗ ನಾವು ಸಾಲ ಮಾಡಬೇಕಾಗುತ್ತದೆ ಎಂದು ಹೇಳಿದರು ಆದರೆ ನಮ್ಮ ಕುಟುಂಬದಲ್ಲಿ ಅಂತ ಕಷ್ಟ ಏನು ಇಲ್ಲರೀ ನಾವು ಅಲ್ಪರಲ್ಲೇ ಸಂತೋಷವಾಗಿದ್ದೀವಿ ನೋಡ್ರಿಸರ್, ಹಾಗದರೆ ನಿಮ್ಮ ಕುಟುಂಬದ ಸ್ಥಿತಿ

[illegible]

| | |
|---|---|
| [illegible] | [illegible] |
| [illegible] | [illegible] |
| [illegible] | [illegible] |
| [illegible] | [illegible] |
| [illegible] | [illegible] |
| | [illegible] |

[illegible]

ಪರವಾಗಿಲ್ಲ. ಹೌದು ಪರವಾಗಿಲ್ಲ ಆರಾಮವಾಗಿದ್ದೀವಿ ಮತ್ತೆ ನೀವು ಹೊಲಗದ್ದೆಗಳಲ್ಲಿ ದುಡಿಯುವುದರಲ್ಲಿ ಅಲ್ಲಿ ಯಂತ್ರೋಪಕರಣಗಳಿಂದ, ಟ್ರಾಕ್ಟರ್, ಮಿಷನ್ ಟಿಪರ್ ಆಗಿರಬಹುದು, ಇಂತಹವದರಿಂದ ನಿಮ್ಮ ಕೆಲಸದ ಮೇಲೆ ಪರಿಣಾಮ ಬೀರಿದೆಯ ಅಲ್ಲಿ. ಹೌದುರೀ ಸರ್ ಅವು ಮಿಷನ್‌ಗಳು ಬಂದಾಗಿನಿಂದ ನಮ್ಮ ಕೆಲಸ ಕಡಿಮೆಯಾಗಿದೆ. ಇದರಿಂದ ನಮಗೆ ೧ ತಿಂಗಳಿನಷ್ಟು ಕೆಲಸ ಇಲ್ಲದಂತಾಗುವುದು ನಾಗಮ್ಮ ಅವರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. ನಿಮ್ಮ ಹೊಲದ ಮೂಲಕ ನಿಮಗೆ ಆರಾಮ ಇಲ್ಲಂದಾಗ ಆಸ್ಪತ್ರೆಗೆ ಕರೆದುಕೊಂಡು ಹೋಗುವುದಕ್ಕೆ ಸಹಾಯ ಮಾಡುತ್ತಾನೆಯೇ ಸರ್ ನಮಗೆ ಏನಾದರೂ ಆರಾಮ ಆದ್ರೆ ನಮ್ಮ ಕೂಲಿ ಕೊಟ್ಟಿರುವ ಹಣದಿಂದಲೇ ನಾವು ದವಾಖಾನೆಗೆ ತೋರಿಸಬೇಕಾಗುತ್ತದೆ ಸರ್ ಎಂದು ಹೇಳಿದರು.

## ಪ್ರಕರಣ - ೬

ಹೆಸರು : ನಾಗರತ್ನಮ್ಮ

ವಯಸ್ಸು : ೩೫

ಜಾತಿ : ಮಾದಿಗ

ಊರು : ಮಸರಕಲ್

ಶಿಕ್ಷಣ : ಅನಕ್ಷರಸ್ಥೆ

ಏನು ಕೆಲಸ ಮಾಡಿವೇಯಮ್ಮ! ಗದ್ದೆಯಲ್ಲಿ ಕೆಲಸ ಮಾಡುತ್ತೇನೆ. ನಿಮ್ಮ ಹೌದು ನೀವು ಹೊಲದಲ್ಲಿ ಕೆಲಸ ಮಾಡುವಾಗ ದಿನದಲ್ಲಿ ಎಷ್ಟು ತಾಸು ದುಡಿಮೆ ಮಾಡ್ತಿರಿ. ಇಲ್ಲಿ ನಾನು ದಿನಕ್ಕೆ ೭-೮ ತಾಸು ಹೊಲ ಗದ್ದೆಯಲ್ಲಿ ಇರುತ್ತೀವಿರಿ ಸರ, ನಿಮಗೆ ಬೇಜಾರು ಬರುದಿಲ್ವಾ ಬರುತ್ತೆ ಏನು ಮಾಡುವುದು ಕೆಲಸ ಮಾಡಿನೇ ಹೊಟ್ಟೆ ತುಂಬಿಸಿಕೊಳ್ಳಬೇಕು. ನಿಮಗೆ ಯಾರದರೂ ಅಲ್ಲಿ ಲೈಂಗಿಕ ಕಿರುಕುಳ ಕೊಡತ್ತಾರೆಯೇ ಇಲ್ಲ ನಮ್ಮ ಧಣಿಗಳು ಅವರು ಹೊಲಕ್ಕೆ ದಿನಕ್ಕೆ ಒಂದು ಸಾರಿ ಬಂದು ಹೋಗ್ತಾರೆ. ಅವರು ಒಳ್ಳೆಯ ಮೂಲಕ ಇದ್ದಾರೆ ನೋಡ್ರೀ. ಅವರಿಂದ ಏನಾದ್ರು, ತೊಂದರೆ ಇದೆಯಾ ಏನು ಇಲ್ಲರೀ. ನಿಮಗೆ ಹೆಚ್ಚು ಕೆಲಸ ಮಾಡಿಸಿಕೊಂಡು ಕೂಲಿಯನ್ನು ಕಡಿಮೆಕೊಡುತ್ತಾರೆ ಹೌದು. ತಾನೇ ಹೌದು ಗಂಡಸರಿಗೆ ಜಾಸ್ತಿ ನಮಗೆ ಕಡಿಮೆ ಕೊಡುತ್ತಾರೆ. ನಾವು ಎಷ್ಟು ಕೆಲಸ ಮಾಡಿದ್ರು ನಾವು ಹೆಣ್ಣುಮಕ್ಕಳು ಶಕ್ತಿ ಕಡಿಮೆ ಅದಕ್ಕೆ ಕೂಲಿಯಲ್ಲಿ ಹೆಚ್ಚು ಕಡಿಮೆ ಕೊಡುತ್ತಾರೆ. ನಿಮಗೆ ಇಲ್ಲಿ ಆರೋಗ್ಯ ಕೆಟ್ಟರೆ ನಿಮಗೆ ತೋರಿಸುವುದಕ್ಕೆ ಯಾವುದಾದರೂ ಸೌಲಭ್ಯವಿದೆಯಾ? ಇಲ್ಲರೀ ಯಾವುದು ಸೌಲಭ್ಯವಿಲ್ಲ ನಮಗೆ ಜ್ವರ ಬಂದರೆ ನಾನೇ ತೋರಿಸಬೇಕು ಏನು ಮಾಡದರೂ ನಮ್ಮ ಖರ್ಚಿನಲ್ಲೇ ತೋರಿಸಬೇಕು ನೋಡ್ರಿ ನಿಮ್ಮ ಕುಟುಂಬ ವ್ಯವಸ್ಥೆ ಹೇಗಿದೆ. ನಮ್ಮ ಕುಟುಂಬದಲ್ಲಿ ನಾವು ದುಡಿದ ರೊಕ್ಕದಲ್ಲಿ ನಾವು ಹೊಟ್ಟೆ ತುಂಬಿಸಿಕೊಳ್ಳಬೇಕು ಅದು ಬಿಟ್ಟು ನಮಗೇನು ಹೆಚ್ಚು ಕೊಡುವುದಿಲ್ಲ ನಮ್ಮ ಜೀವನ ಪರವಾಗಿಲ್ಲ ನಮ್ಮ ಪಾಡಿಗೆ ನಾವು ಇರುತ್ತೇವೆ. ಹೌದು ನೀವು ಹೊಲದಲ್ಲಿ ದುಡಿಯುವುದರಿಂದ ಅಲ್ಲಿ ಯಂತ್ರೋಪಕರಣಗಳಿಂದ ತೊಂದರೆ ಆಗುವುದಿಲ್ವಾ. ತೊಂದರೆಯಾಗಿದೆ. ಏಕೆಂದರೆ ೨೦ ಜನ ಮಾಡುವ ಕೆಲಸವನ್ನು ಒಂದು ಟ್ರಾಕ್ಟರ್ ಅಥವಾ ಟಿಪ್ಪರ್ ಕೆಲಸ ಮಾಡುತ್ತವೆ. ಅವು ಬಂದಾಗಿನಿಂದ ನಮ್ಮ ಕೆಲಸ ಕಡಿಮೆ ಆಗೈತೀ ನೋಡ್ರೀ ಎಂದು ಹೇಳಿದರು.

[illegible]

| | |
|---|---|
| [illegible] | [illegible] |
| [illegible] | [illegible] |
| [illegible] | [illegible] |
| [illegible] | [illegible] |
| [illegible] | [illegible] |

[illegible]

## ಪ್ರಕರಣ - ೭

ಹೆಸರು : ಖಾಸಿಂ ಬೀ

ವಯಸ್ಸು : ೪೫

ಜಾತಿ : ಮುಸ್ಲಿಂ

ಊರು : ದೇವದುರ್ಗ

ಶಿಕ್ಷಣ : ಅಕ್ಷರಸ್ಥೆ

ನಮ್ಮ ಹೆಸರು ಖಾಸಿಂ ಬೀ, ಏನುಮಾಡ್ತೀಯಾ, ನಾನು ಹೊಲದಲ್ಲಿ ಕೆಲಸ ಮಾಡುತ್ತೇನೆ. ನೀನು ಎಷ್ಟು ಓದಿದಿಯಾ. ಏಳನೇ ತರಗತಿ. ಓದುವುಕ್ಕೆ ಬರುತ್ತದೆ. ಹೌದು ರೀ ನನಗೆ ಅಲ್ಪಸ್ವಲ್ಪ ಬರುತ್ತದೆ. ಹೊಲದಲ್ಲಿ ದುಡಿಯುವುದರಿಂದ ನಿಮಗೆ ಬೇಜಾರ ಆಗಲ್ವಾ ಯಾಕೇ ಆಗುತ್ತೆ ನಮ್ಮ ಹೊಟ್ಟೆ ತುಂಬುಬೇಕೆಂದರೆ ಯಾವುದಾದರೂ ಕೆಲಸ ಮಾಡಬೇಕು ಇಲ್ಲಂದರೆ ಹೇಂಗೆ ನೀವೇ ಹೇಳಿ. ನಿಮ್ಮ ದುಡಿಮೆಯಿಂದ ನಿಮಗೆ ಲಾಭವಿದೆಯಾ. ಇಲ್ಲ. ಆದರೆ ನಮ್ಮ ದಿನದ ಖರ್ಚು ಇದರಿಂದಲೇ ಹೋಗುತ್ತೆ ರೀ ಹೌದು ನೀವು ಹೊಲದಲ್ಲಿ ದುಡಿಯುತ್ತಿರುವುದರಿಂದ ನಿಮ್ಮ ಮಾಲಕ ಗಂಡಸರಿಗೂ ಮತ್ತು ಹೆಂಗಸರಿಗೂ ಕೂಲಿ ಸಮಾನ ಕೊಡುತ್ತಾನೆ. ಅಥವಾ ಕಡಿಮೆ ಕೊಡುತ್ತಾನೆ? ಇಲ್ಲ ನಮಗೆ ಕಡಿಮೆ ಕೊಡುತ್ತಾನೆ ಏಕೆಂದರೆ ನಾವು ಹೆಣ್ಣು ಮಕ್ಕಳಲ್ವಾ ಅದಕ್ಕೆ ಕಡಿಮೆ ಕೊಡುತ್ತಾರೆ. ಅದಕ್ಕೆ ಕೇಳಿದೆ ನೀವು ಕೂಲಿಯಲ್ಲಿ ವ್ಯತ್ಯಾಸ ಕಾಣುತ್ತಿರಲ್ಲಾ. ಹೌದು ನಮಗೆ ಎಲ್ಲಿ ಹೋದರೂ ಗಂಡಸರಿಗಿಂತ ಕಡಿಮೆ ಕೂಲಿ ಇದೆ ನಾವು ಎಷ್ಟು ದುಡಿದರೂ ನಮಗೆ ಕಡಿವೆ ಕೂಲಿನೇ ಇದೆ, ಮತ್ತೆ ನಿಮಗೆ ಕುಟುಂಬದ ಸ್ಥಿತಿ ಹೇಗಿದೆ. ನಮ್ಮ ಕುಟುಂಬದ ಸ್ಥಿತಿ ಪರವಾಗಿಲ್ಲ, ನಾವು ದುಡಿದ ಹಣದಿಂದಲೇ ಕುಟುಂಬ ನಡೆಸಬೇಕಾಗುತ್ತದೆ ಕೆಲಸವಿಲ್ಲದಿದ್ದರೆ ನಮಗೆ ಬಹಳ ತೊಂದರೆಯಾಗುತ್ತದೆ. ಹೊಲಗಳಲ್ಲಿ ದುಡಿಯುವುದರಿಂದ ನಮಗೆ ಸ್ವಲ್ಪ ದವಸ ದಾನ್ಯಗಳನ್ನು ತರಬಹುದು ಅದರಿಂದ ಕುಟುಂಬದ ಸ್ವಲ್ಪ ಜವಬ್ದಾರಿಯನ್ನು ನಿಭಾಯಿಸುವುದಾಗಿದೆ. ನಿಮಗೆ ಯಂತ್ರೋಪಕರಣಗಳಿಂದ ತೊಂದರೆ ಆಗುತ್ತದೆಯೇ? ಹಲವಾರು ಮಿಷನ್‌ಗಳಿಂದ ನಮ್ಮ ಕೆಲಸದ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಬಹುದು.

## ಪ್ರಕರಣ - ೮

ಹೆಸರು : ದುರಗಮ್ಮ

ಜಾತಿ : ಮಾದಿಗ

ಊರು : ದೇವತಗಲ್

ಶಿಕ್ಷಣ : ಇಲ್ಲ

ವಯಸ್ಸು : ೨೫

ನಿಮ್ಮ ಹೆಸರು ಏನಮ್ಮ, ನಮ್ಮ ಹೆಸರು ದುರಗಮ್ಮ, ಯಾವ ಕೆಲಸ ಮಾಡ್ತೀರ? ನಾವು ಹೊಲದಾಗ ದುಡಿಯಲಿಕ್ಕೆ ಹೋಗ್ತಿವಿ. ನೀವು ದಿನದಲ್ಲಿ ಎಷ್ಟು ತಾಸು ದುಡಿಮೆ ಮಾಡುತ್ತಾನೆ. ಮುಂಜಾನೆ ೯ ಗಂಟೆಯಿಂದ ಸಂಜೆ ೬ ವರೆಗೆ, ಅಂದರೆ ೭-೮ ತಾಸುವರಗೆ ಕೆಲಸಮಾಡ್ತೀವಿರಿ. ಕೆಲಸ ಮಾಡಿ ಬಂದು ಮನೆಯಲ್ಲಿ ಕೂಡ ಕೆಲಸ ಮಾಡಬೇಕು ಅದಕ್ಕೆ ನಮ್ಮ ಕೈ, ಕಾಲುನೋವು ಬಹಳ ಇರುತ್ತದ ರೀ ಆದರೆ ಏನು ಮಾಡುವುದು ಮಾಡಲೇಬೇಕು ಏನುಮಾಡಬರಂಗಿಲ್ಲರೀ. ನಿಮಗೆ ಹೋಲದಲ್ಲಿ ನಿಮ್ಮ ಮಾಲಿಕರು ಏನು ತೊಂದರೆ ಕೊಡದಿಲ್ಲಾ, ಇಲ್ಲರಿ ಸುಮ್ನೆ ಬೈತಾರಷ್ಟೆ ಹೀಗಾಗಿ ಅವರು ನಮಗೆ ಯಾವುದೇ ರೀತಿಯಿಂದ ತೊಂದರೆ ಕೊಡಲ್ಲರಿ. ನೀವು ಮಾಡುತ್ತಿರುವ ಹೊಲ ಕೆಲಸದಲ್ಲಿ ಅಲ್ಲಿ ಯಾರಿಗೆ ಎಷ್ಟು ಕೂಲಿ ಕೊಡುತ್ತಾರೆ. ಅಂದರೆ ಅಲ್ಲಿನ ಗಂಡಸರಿಗೆ ಎಷ್ಟು ಹೆಂಗಸರಿಗೆ ಎಷ್ಟು ಗಂಡುಮಕ್ಕಳಿಗೆ ಜಾಸ್ತಿ ಕೊಡ್ತಾರರೀ ನಮಗೆ ಕಡಿಮೆ ಕೊಡ್ತಾರರೀ. ನೀವು ಕೇಳಬೇಕು ಯಾಕೆ ಕಡಿಮೆ ಕೊಡುತ್ತಾರೆ. ಹಾಗೆ ಕೇಳಿದ್ರೆ ನಮಗೆ ಕೆಲಸದಿಂದ ಹೊರಗೆ ಹಾಕುತ್ತಾರೆ. ಏನು ಮಾಡಬೇಕರಿ ನಮಗೆ ಹೊಟ್ಟೆಪಾಡು. ಇದೆ ಯಲ್ಲ. ನಿಮ್ಮ ಕುಟುಂಬದ ಸ್ಥಿಮಾಲೆ ಹೇಗಿದೆ. ನಮ್ಮ ಕುಟುಂಬ ಚೆನ್ನಾಗಿದೆ. ಆದರೆ ನನ್ನ ಗಂಡ ಜಾಸ್ತಿ ಕುಡಿತಾನರಿ ಏನು ಮಾಡಬೇಕು ಆ ಮನುಷ್ಯ ಕುಡಿಯಲ್ಲಿಲ್ಲಂದ್ರೆ ಇಲ್ಲದಿದ್ದರೆ ಇನ್ನೂ ಚೆನ್ನಾಗಿ ಇರುತ್ತಿದ್ವಿ. ಆತನಿಗೆ ನಾವು ಹೇಳಿ ಹೇಳಿ ಸಾಕುಮಾಡದಿರೀ ಏನು ಮಾಡಬೇಕೆಂತ ತಿಳಿಯ ಯೋಚನೆ ಬರ್ತಾ ಇಲ್ಲ. ಏನು ಮಾಡಿದರೂ ನನ್ನ ಗಂಡನ ಕುಡಿತದ ಸಮಸ್ಯೆ ಬಿಟ್ಟರೆ ಮತ್ತೆ ಯಾವುದೇ ಸಮಸ್ಯೆ ಇಲ್ಲ. ಯಂತ್ರೋಪಕರಣದಿಂದ ನಿಮಗೆ ಪ್ರಭಾವ ಆಗಿದೆಯಾ? ಹೌದು ಮಿಷನ್‌ಗಳಿಂದ ನಮ್ಮ ಕೆಲಸಕ ಡಿಮಾಗಿದೆ ನಾವು ಮಾಡುವ ಕೆಲಸವನ್ನು ಆ ಮಿಷನ್ ಮಾಡುತ್ತದೆ. ಏನು ಮಾಡಬೇಕು ಹೊಲದ ಮಾಲಕರು ಎಲ್ಲಿ ಆಳುಗಳನ್ನು ಕರೆದು ಹುಡುಕಿಕೊಂಡು ಬರಬೇಕೆಂದು ಮಿಷನ್‌ಗಳನ್ನು ಹೊಲದಲ್ಲಿ ಬಿಡುತ್ತಾರೆ ಅದಕ್ಕೆ ನಮ್ಮ ಕೆಲಸದ ಮೇಲೆ ಬಹಳಷ್ಟು ಪರಿಣಾಮ ಬೀರಿದೆ. ಇದರಿಂದ ನಮ್ಮ ಕೆಲಸಕ್ಕೆ ಕಟ್ಟೆ ಬೀಳುತ್ತದೆ ಎಂದು ಹೇಳಬಹುದು.

| | |
|---|---|
| [illegible] | [illegible] |
| [illegible] | [illegible] |
| [illegible] | [illegible] |
| [illegible] | [illegible] |
| [illegible] | [illegible] |

[illegible]

## ೩.೪. ರಾಜಕೀಯ ಸ್ಥಿತಿಗತಿ

ಪ್ರಜಾಪ್ರಭುತ್ವ ವ್ಯವಸ್ಥೆಯ ಒಂದು ಹಿರಿಮೆ ಎಂದರೆ ಒಬ್ಬ ಸಾಮಾನ್ಯ ವ್ಯಕ್ತಿಯೂ ಕೂಡ ದೇಶದ ಅತ್ಯುನ್ನತ ಪದವಿಯನ್ನು ಅಲಂಕರಿಸಬಹುದಾಗಿದೆ. ಇಂತಹ ಉದಾತ್ತ ಆದರ್ಶ ಅಥವಾ ಅವಕಾಶವಿರುವುದು ಪ್ರಜಾಪ್ರಭುತ್ವವಾದಿ ದೇಶಗಳಲ್ಲಿ ಮಾತ್ರ ಸಾಧ್ಯ. ಪ್ರಜಾಪ್ರಭುತ್ವ ಸರಕಾರದ ಸ್ವರೂಪ ಮಾತ್ರವಲ್ಲ ಅದೊಂದು ಜೀವನ ವಿಧಾನ, ಅದರ ಗುಣಲಕ್ಷಣಗಳನ್ನು ಗಮನಿಸಿದರೆ ಎಲ್ಲಾ ಪ್ರಜೆಗಳನ್ನು ಸಮಾನ ರೀತಿಯಲ್ಲಿ ಕಾಣುವ, ರಕ್ಷಿಸುವ ಗೌರವಿಸುವ ಹಾಗೂ ತಾರತಮ್ಯ ರಹಿತವಾದ ಸಮಾಜವಾದಿ ಆದರ್ಶಗಳ ತವರು ಆದಾಗಿದೆ. ದೇಶದ ಪ್ರತಿಯೊಬ್ಬ ಪ್ರಜೆಗೂ ಕೂಡ ಸಮಾನವಕಾಶ ಸಮಾನ ಉದ್ಯೋಗವಕಾಶಗಳು ಕಾನೂನಿನಡಿಯಲ್ಲಿ ಎಲ್ಲರೂ ಸಮಾನರು ಎಂಬ ಚಿಂತನೆ ಇದರಲ್ಲಿದೆ. ಅಲ್ಲದೆ ಮಹಿಳೆಯರ ಹಕ್ಕುಗಳನ್ನು ರಕ್ಷಿಸಲೆಂದೆ ಇಲ್ಲಿ ವಿಶೇಷವಾದ ಹಕ್ಕುಗಳನ್ನು ಕೊಡಲಾಗಿದೆ. ಇಂತಹ ಉನ್ನತ ದಶಕಗಳಿದ್ದರೂ ಕೂಡ ಪುರುಷ ಪ್ರಧಾನ ವ್ಯವಸ್ಥೆಯ ಸ್ಥಾಪಿತ ಮೌಲ್ಯಗಳು ಪ್ರಜಾಪ್ರಭುತ್ವಕ್ಕೆ ಮಸಿ ಬಳಿಯುವಂತೆ ತಡೆಯಾಗಿ ನಿಂತಿವೆ. ಪ್ರಜಾಪ್ರಭುತ್ವದ ಗುಣಗಳನ್ನು ಪರಾಮರ್ಶಿಸಿದಾಗ ಇವು ಮಹಿಳಾ ಪರವಾಗಿ ಕೆಲಸ ಮಾಡುವುದರಲ್ಲಿ ಯಾವುದೇ ಬಗೆಯ ಸಂದೇಹವಿಲ್ಲ. ಪ್ರತಿಯೊಬ್ಬರಿಗೂ ಯಾವುದೇ ಬಗೆಯ ದಾಸಿ, ಧರ್ಮ, ಲಿಂಗ, ಪ್ರದೇಶ, ಮತಗಳ ಆಧಾರದ ಮೇಲೆ ಬೇಧ ಭಾವ ಮಾಡಬಾರದು ಎಂಬ ಸಂವಿಧಾನ ನಿರ್ದೇಶಿತ ಅನುಚ್ಛೆದವಿದೆ. ಇದರ ಪ್ರಮುಖ ಧ್ಯೇಯವೆ ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನುಗೌರವಿಸುವುದು ಸಾಮಾಜಿಕವಾಗಿ ಅವರಿಗೊಂದು ಚಹರೆ ತಂದು ಕೊಡುವುದು. ಆದ್ದರಿಂದಲೇ ಸ್ವಾತಂತ್ರ್ಯ, ಸಮಾನತೆ, ಮತ್ತು ಭ್ರಾತೃತ್ವ ಎಂಬ ಅಂಶಗಳು ಮಹಿಳಾ ಸ್ವಾತಂತ್ರ್ಯವನ್ನು ಪುಷ್ಠಿಕರಿಸುತ್ತದೆ.

ಆದರೆ ವಾಸ್ತವ ಅಂಶವೆ ಬೇರೆಯಾಗಿದೆ. ಮಹಿಳೆಯನ್ನು ಸಮಾನತೆಯ ಅಡಿಯಲ್ಲಿ ಸೂಚಿಸಿದ್ದರೂ ಕೂಡ ಪುರುಷನಂತೆ ಅವಳಿಗೆ ಎಲ್ಲಾ ರಂಗಗಳಲ್ಲಿಯೂ ಸಮಾನವಕಾಶ, ಉದ್ಯೋಗ, ಸ್ಥಾನಮಾನ ಈ ವರೆಗೂ ಸಿಕ್ಕಿಲ್ಲ. ಭ್ರಾತೃತ್ವದ ಪರಿಕಲ್ಪನೆಯಲ್ಲಿಯೂ ಕೂಡ ಲಿಂಗಬೇಧ ಎದ್ದುಕಾಣುವಂತೆ ಮಾಡಿರುವುದನ್ನು ಸ್ತ್ರೀವಾದಿಗಳು ಗುರುತಿಸಿದ್ದಾರೆ. ವಿಶಾಲಾರ್ಥದಲ್ಲಿ ಭ್ರಾತೃತ್ವದ ಪರಿಕಲ್ಪನೆಯೂ ಸಮಾಜದ ಮುಖ್ಯ ಆಧಾರಸ್ತಂಭಗಳಾಗಿರುವ ಸ್ತ್ರೀ ಪುರುಷರನ್ನೊಳಗೊಂಡಿದ್ದರೂ ಕೂಡ ಪುರುಷ ಪ್ರಧಾನ ವ್ಯವಸ್ಥೆಯಡಿಯಲ್ಲಿ ಲಿಂಗ ಸೂಚಿ ಭಾಷೆಯೂ ಮಹಿಳೆಯರನ್ನು ಅವಗಣನೆಗೆ ಒಳಪಡಿಸುವುದರಲ್ಲಿ ಸಂದೇಹವಿಲ್ಲ.

ಭಾರತೀಯ ಸಂವಿಧಾನ ನಿರ್ಮಾತೃಗಳು ಮೂಲಭೂತ ಹಕ್ಕುಗಳನ್ನು ನೀಡುವುದು ಆಗಲಿ ಅಥವಾ ಸಮಾನತೆಯನ್ನು ಎಲ್ಲಾರಿಗೂ ಮುಂದುವರೆಯಲು ಅವಕಾಶ ಸರಕಾರದ ನೀತಿ ನಿಯಮಗಳನ್ನು ಬಂದಿಸುವ ಅಧಿಕಾರ, ಶಿಕ್ಷಣ, ಪಡೆಯುವುದು, ರಾಜಕೀಯ ನಿಯೋಜನೆ, ಆರ್ಥಿಕ ಅಭಿವೃದ್ಧಿ

ಹೊಂದಲು ಅವಕಾಶ ಮೊದಲಾದವುಗಳು ಸ್ತ್ರೀ ಸಮಾನತೆಗೆ ಪೂರಕವಾಗಿವೆ. ಆದರೆ ಮೇಲಿನ ವಿಚಾರ ಸರಣಿಯಲ್ಲಿ ಹೇಳಿದಂತೆ ಇವುಗಳ ಅನುಷ್ಠಾನದಲ್ಲಿ ಅನೇಕ ಅಡತಡೆಗಳು ಕಾಡುತ್ತಲಿವೆ.

ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಮಹಿಳೆಯರು ಎರಡು ಬಗೆಯ ಭಾಗವಹಿಸುವಿಕೆಯನ್ನು ಹೊಂದಿದ್ದಾರೆ. ರಾಜಕೀಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನೀತಿ ನಿಯಮಗಳಲ್ಲಿ ಭಾಗವಹಿಸಿ ಕ್ರಿಯಾತ್ಮಕವಾಗಿ ಪಾಲುದಾರರಾಗುವುದು ಒಂದು ಇನ್ನೊಂದು ಮತದಾರರಾಗಿ ಮತಚಲಾವಣೆ ಮಾತ್ರ ಮಾಡಿ ರಾಜಕೀಯದಿಂದ ದೂರ ಉಳಿಯುವುದು ಹೀಗೆ ಔಪಚಾರಿಕವಾಗಿ, ಅನೌಪಚಾರಿಕವಾಗಿ ಮಹಿಳೆ ರಾಜಕೀಯದಲ್ಲಿ ದ್ವಿಬಗೆಯ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸುತ್ತಿದ್ದಾಳೆ. ಆದರೆ ಪ್ರಸ್ತುತ ಭಾರತದ ರಾಜಕೀಯ ವ್ಯವಸ್ಥೆಯಡಿಯಲ್ಲಿ ಅನೌಪಚಾರಿಕ ರಾಜಕೀಯ ಭಾಗವಹಿಸುವಿಕೆ ಅತ್ಯದಿಕವಾಗಿ ಕಂಡುಬರುತ್ತಿದೆ.

ಹಿಂದಿನಿಂದಲೂ ನಾವು ಚರಿತ್ರೆಯ ಪುಟಗಳನ್ನು ತಿರುವಿ ಹಾಕಿದಾಗ ಅಲ್ಲಿ ನಡೆದಿರುವ ಲಿಂಗ ಪಕ್ಷಪಾತ ರಾಜಕಾರಣದ ಕರಾಳ ಮುಖಗಳ ದರ್ಶನವಾಗುತ್ತದೆ. ಇತಿಹಾಸದುದ್ದಕ್ಕೂ ರಾಜ, ಮಹಾರಾಜ, ಮಂತ್ರಿ, ಸ್ಥಿರನಿಕರ ಯಶೋಗಾಥೆಗಳನ್ನು ಮಾತ್ರ ವೈಭವೀಕರಿಸಲಾಗಿದೆಯೇ ಹೊರತು ಸ್ತ್ರೀಯ ಅಸ್ತಿತ್ವದ ಬಗ್ಗೆ ಇತಿಹಾಸ ತುಂಬ ಮೌನವಹಿಸಿದೆ ಏಕೆ ಅಂದು ಮಹಿಳೆಯರೆ ಇರಲಿಲ್ಲವೆ ಎಂಬ ಸಂಶಯ ಬರಬಹುದು. ಅವಳ ಅಸ್ತಿತ್ವ ಇದ್ದರೂ ಕೂಡ ಅವಳ ಕಾರ್ಯ ಅಥವಾ ಅವಳ ಬಗೆಗಿನ ದಾಖಲೆ ಇರುವುದುಂಟು ರಾಜನ ಅನುಪಸ್ಥಿತಿಯಲ್ಲಿ ಮಾಡಿದ ಕಾರ್ಯಗಳನ್ನು ಮಾತ್ರ ಅಲ್ಪದರಲ್ಲಿ ದಾಖಲಾಗಿದೆ. ಅಲ್ಲದೆ ಇತಿಹಾಸದಲ್ಲಿ ಅವಳ ಸ್ಥಾನ ಎಂದರೆ ದಾನ, ದತ್ತಿಗಳನ್ನು ಮಾಡಿರುವ ಕೆಲಸಗಳಿಗೆ ಮಾತ್ರವೆ ಸೀಮಿತಗೊಳಿಸಲಾಗಿದೆ ಹೀಗೆ ಮಹಿಳೆಯನ್ನು ಇತಿಹಾಸದುದ್ದಕ್ಕೂ ವ್ಯವಸ್ಥಿತವಾಗಿ ವಂಚಿಸಲಾಗಿದೆ.

ಪ್ರಸ್ತುತ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ ಕೃಷಿ ಕೂಲಿ ಕಾರ್ಮಿಕ ಮಹಿಳೆಯ ರಾಜಕೀಯ ಜೀವನ ಕುರಿತಾದ ಮಾಹಿತಿಯೂ ಕೂಡ ಮೇಲಿನ ವಿಚಾರದಿಂದ ಹೊರತಾಗಿಲ್ಲ. ದಿನದ ಇಪ್ಪತ್ನಾಲ್ಕು ಗಂಟೆಯೂ ಗಾಣದ ಎತ್ತಿನಂತೆ ದುಡಿಯುವ ಅವಳಿಗೆ ರಾಜಕೀಯದ ಪಾರಿಭಾಷೆಯ ಪರಿವೆ ಇಲ್ಲದಾಗಿದೆ. ಅಲ್ಲದೆ ತನ್ನ ಸುತ್ತಲಿನ ಎಂ.ಪಿ., ಎಂ.ಎಲ್.ಎ ಗಳು ಯಾರು ಎಂಬುದೆ ಅವಳಿಗೆ ಅರಿವಿಲ್ಲ ತನ್ನ ಮುಂದಿನ ಜೀವನದಲ್ಲಿ ರಾಜಕೀಯ ಅವಕಾಶ ಸಿಕ್ಕರೆ ಭಾಗವಹಿಸುವಿರಾ ಎಂಬ ಪ್ರಶ್ನೆಗೆ ನಂಗ್ಯಾಕಪ್ಪ ರಾಜಕೀಯ ಎಂಬ ಉದಾಸೀನದ ಮಾತೆ ಅವಳಿಂದ ಕೇಳಿಬರುತ್ತಿತ್ತು. ಕೃಷಿ ಕೂಲಿ ಕಾರ್ಮಿಕರಲ್ಲಿ ಯಾರೊಬ್ಬರೂ ರಾಜಕೀಯ ಪಕ್ಷದೊಂದಿಗೆ ಯಾವುದೆ ಸಂಬಂಧವನ್ನಿಟ್ಟುಕೊಂಡಿಲ್ಲಾ ರಾಜಕೀಯ ಪಕ್ಷಗಳ ಸದಸ್ಯರೂ ಆಗಿಲ್ಲ. ತನ್ನ ಗ್ರಾಮೀಣ ವಲಯದೊಳಗೆ ನೆಡೆಯುವ ರಾಜಕೀಯ ಚಟುವಟಿಕೆ ಗ್ರಾಮಸಭೆ, ಪಂಚಾಯಿತಿ ಕಾರ್ಯ ಚಟುವಟಿಕೆಗಳನ್ನು ಕೂಡ ಅವಳು ಕಾಣಲು ಸಾಧ್ಯವಾಗಿಲ್ಲ.

[illegible]

## ರಾಜಕೀಯದ ಅರಿವಿರುವವರ ಪ್ರಮಾಣ

| ಕ್ರ.ಸಂ. | | ಅರಿವಿರುವವರ ಪ್ರಮಾಣ | ಅರಿವಿಲ್ಲದವರ ಪ್ರಮಾಣ |
|---|---|---|---|
| ೧. | ರಾಜಕೀಯ ಪಕ್ಷಗಳ ಬಗ್ಗೆ | ೦೭ | ೪೯ |
| ೨. | ರಾಜಕೀಯ ಚಟುವಟಿಕೆಗಳ ಬಗ್ಗೆ | ೦೨ | ೫೮ |
| ೩. | ಸ್ವಸಹಾಯ ಗುಂಪುಗಳ ಬಗ್ಗೆ | ೦೯ | ೩೭ |
| ೪. | ಔಪಚಾರಿಕವಾಗಿ ಭಾಗಿಯಾಗುವವರ ಪ್ರಮಾಣ | ೦೪ | ೧೩ |
| ೫. | ಅನೌಪಚಾರಿಕವಾಗಿ ಭಾಗಿಯಾಗುವವರ ಪ್ರಮಾಣ | ೬೦ | ೭೦ |
| | | ೧೦೦ | |

ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ರಾಜಕೀಯ ಕುರಿತಾಗಿ ಕೃಷಿ ಕಾರ್ಮಿಕ ಮಹಿಳೆಯರಿಗೆ ಇರುವ ತಿಳುವಳಿಕೆಯ ಪ್ರಮಾಣ ಅತ್ಯಂತ ಕಡಿಮೆ. ರಾಜಕೀಯದ ಪರಿಭಾಷೆ ಅವಳಿಗೆ ತಿಳಿದಿರುವುದು ಚುನಾವಣೆಯೊಂದೆ ಮತಚಲಾವಣೆಯೊಂದನ್ನು ಬಿಟ್ಟು ರಾಜಕೀಯದ ಬಗ್ಗೆ ಯಾವ ಅರಿವು ಅವಳಿಗಿಲ್ಲ.

ಅಭಿವೃದ್ಧಿಯು ಮುಖ್ಯವಾಗಿ ಮಹಿಳೆಯ ನೆಲೆಯಿಂದಲೇ ಗುರುತಿಸುವಂತಾಗಬೇಕು ಎಂಬುದು ಮಹಿಳಾ ಅಧ್ಯಯನದ ಬಹುಮುಖ್ಯ ಪರಿಕಲ್ಪನೆಗಳಲ್ಲೊಂದಾಗಿದೆ. ಅಂದರೆ ಮಹಿಳೆ ಮತ್ತು ಅಭಿವೃದ್ಧಿ ಎಂಬ ಪರಿಕಲ್ಪನೆಯೂ ಮುಖ್ಯವಾಹಿನಿ ಅಭಿವೃದ್ಧಿ ಪರಿಕಲ್ಪನೆಯ ಬೆಳವಣಿಗೆ ಹಾಗೂ ಪ್ರಕ್ರಿಯೆಯೊಂದಿಗಿನ ಅಧ್ಯಯನ ಮಾಡುವ ಅಗತ್ಯವಿದೆ. ಅಭಿವೃದ್ಧಿಯು ಮಹಿಳೆ ಎಂಬ ಚಿಂತನೆಯ ಸ್ತ್ರೀವಾದಿ ಸಿದ್ಧಾಂತವಾದ ಉದಾರವಾದಿ ಪಂಥದ ಆಶಯವಾಗಿದೆ. ಮುಖ್ಯವಾಗಿ ಇದರ ಕಾಳಜಿ ಎಂದರೆ ಸ್ತ್ರೀ ಪುರುಷ ಸಂಬಂಧಿಗಳಲ್ಲಿ ತೀವ್ರ ತರವಾದ ಬದಲಾವಣೆಗಳಾಗಬೇಕು, ಅವುಗಳ ಪುನರ್ ಹಂಚಿಕೆ ಆಗಬೇಕು, ಇವರ ಮೂಲಕ ಮಹಿಳೆಯರ ಅಸ್ತಿತ್ವ ಉಳಿಸಲು ಸಾಧ್ಯ.

ಕೃಷಿ ಕೂಲಿಕಾರ ಮಹಿಳೆಯ ರಾಜಕೀಯ ಭವಿಷ್ಯ ಕತ್ತಲೆಯಲ್ಲಿದೆ. ರಾಜಕೀಯದಲ್ಲಿ ಮತಚಲಾವಣೆಯನ್ನು ಹೊರತು ಪಡಿಸಿದರೆ ಅವರಿಗೆ ರಾಜಕೀಯ ಕುರಿತು ಯಾವುದೇ ಬಗೆಯ ಒಲವು ಇಲ್ಲ. ಹಾಗೆಯೇ ರಾಜಕೀಯ ಪಕ್ಷ ಮತ್ತು ನಾಯಕರ ಕುರಿತು ಅವಳು ಜಿಗುಪ್ಸೆ ಹೊಂದಿದ್ದಾಳೆ. ಯಾರು ಬಂದ್ರೇನಪ್ಪ ನಾನ್ ದುಡಿಯೋದು ತಪ್ಪಲ್ಲ ಎಂದು ಗೋಣಗುತ್ತಲೆ ಇದ್ದಾಳೆ. ರಾಜಕೀಯ ಸಹಭಾಗಿತ್ವ, ರಾಜಕೀಯ ಸಹಭಾಗಿತ್ವ ಎಂಬ ಪರಿಕಲ್ಪನೆಗಳು ಇವಳಿಗೆ ನಿಲುಕದೆ ತುಂಬ ಅಂತರವನ್ನು ಕಾಪಾಡಿಕೊಂಡೆ ಬರುತ್ತಿವೆ.

## ಅಡಿಟಿಪ್ಪಣಿ

೧. ಡಿ. ವೆಂಕಟರಾವ್, ಕೃಷಿ ಬೆಳವಣಿಗೆ, ಪು-೯೦

೨. ಅದೇ, ಪು-೯೨

೩. ಡಾ.ಎಚ್.ಎಸ್.ಶ್ರೀಮತಿ ಡಾ.ಶಿವಾನಂದ ವಿರಕ್ತಮಠ, ಡಾ.ಜೆ.ಕೃಷ್ಣ (ಸಂ), ಮಹಿಳಾ ಆರ್ಥಿಕತೆ, ಪು-೨೨

೪. ಡಾ.ಟಿ.ಆರ್.ಚಂದ್ರಶೇಖರ್, ಮಹಿಳಾ ಆರ್ಥಿಕತೆ ಮತ್ತು ಅಭಿವೃದ್ಧಿ, ಪು-೩೩

೫. ಡಾ.ಎಚ್.ಎಸ್.ಶ್ರೀಮತಿ, ಡಾ.ಶಿವಾನಂದ ವಿರಕ್ತಮಠ, ಡಾ.ಜೆ.ಕೃಷ್ಣ (ಸಂ), ಮಹಿಳಾ ಆರ್ಥಿಕತೆ, ಪು-೩೦

ಅಧ್ಯಾಯ - ನಾಲ್ಕು

# ಮಹಿಳಾ ಕೃಷಿ ಕೂಲಿಕಾರರು ಎದುರಿಸುತ್ತಿರುವ ಸಮಸ್ಯೆಗಳು

## ಅಧ್ಯಾಯ - ನಾಲ್ಕು

# ಮಹಿಳಾ ಕೃಷಿ ಕೂಲಿಕಾರರು ಎದುರಿಸುತ್ತಿರುವ ಸಮಸ್ಯೆಗಳು

ಪ್ರಾಚೀನ ಕಾಲದಿಂದಲೂ ಕೃಷಿ ಕ್ಷೇತ್ರವು ಕಾಲದಿಂದ ಕಾಲಕ್ಕೆ ಅನೇಕ ರೀತಿಯ ಬದಲಾವಣೆಯನ್ನು ಹೊಂದುತ್ತಾ ಬಂದಿದೆ. ಹಿಂದೆ ತನ್ನದೇ ಆದ ಕೃತಕ ಉಪಕರಣ ಹಾಗೂ ಮಾನವ ಶಕ್ತಿಯನ್ನು ಬಳಸಿಕೊಂಡು ಕೃಷಿಯಲ್ಲಿ ತೊಡುಗುತ್ತಿದ್ದ ಕೃಷಿಕ ಇಂದು ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿ ಆಧುನಿಕ ಯಂತ್ರಗಳ ಮೊರೆ ಹೋಗಿದ್ದಾನೆ. ಇದರಿಂದ ಒಂದೆಡೆ ಕೂಲಿ ಕೆಲಸವನ್ನೇ ನಂಬಿ ಬದುಕುತ್ತಿದ್ದ ಕೂಲಿಕಾರರಿಗೆ ಕೆಲಸವಿಲ್ಲದೆ ನಿರುದ್ಯೋಗ ಸೃಷ್ಟಿಸಿದರೆ, ಮತ್ತೊಂದು ಕಡೆ ಆರ್ಥಿಕವಾಗಿ ದುರ್ಬಲರನ್ನಾಗಿ ಮಾಡಿದೆ. ಆದರೂ ಕೆಲವೊಂದು ಕೆಲಸ ಕಾರ್ಯಗಳಿಗೆ ಕೂಲಿಕಾರರು ಅವಶ್ಯಕವಾಗಿ ಬೇಕಾಗಿರುತ್ತಾರೆ. ಇವರಿಲ್ಲದೆ, ಯಂತ್ರದ ಮೂಲಕ ಕೆಲಸಗಳನ್ನು ನಿರ್ವಹಿಸಲು ಸಾಧ್ಯವಿಲ್ಲದಂತಾಗಿದೆ. ಹೊಲ-ಗದ್ದೆಗಳಲ್ಲಿ ಕೆರೆಕಟ್ಟೆಗಳನ್ನು ಕಟ್ಟುವುದರಲ್ಲಿ ಮುಂತಾದ ಕೆಲಸಗಳಿಗೆ ಕೂಲಿಕಾರರು ಪ್ರಧಾನ ಪಾತ್ರವಹಿಸುವರು.

ನಮ್ಮಲ್ಲಿ ಪುರುಷ ಕೂಲಿಕಾರರಗಿಂತ ಮಹಿಳಾ ಕೂಲಿಕಾರರ ಬದುಕು ತುಂಬ ಶೋಚನೀಯವಾಗಿದೆ. ಮಹಿಳೆ ಕೇವಲ ಮನೆಗೆ ಮಾತ್ರ ಸೀಮಿತವಾಗಿಲ್ಲ. ಇಂದು ಪುರುಷನಂತೆ ಸಮಾನವಾಗಿ ಕೆಲಸ ಕಾರ್ಯಗಳನ್ನು ಮಾಡುವಂತವಳಾಗಿದ್ದಾಳೆ. ಆದರೂ ಇವಳಿಗೆ ಸಮಾಜದಲ್ಲಿ ಸೂಕ್ತ ಸ್ಥಾನಮಾನ ಇಲ್ಲದಂತಾಗಿದೆ. ಗ್ರಾಮೀಣ ಪ್ರದೇಶದ ಮಹಿಳಾ ಕೂಲಿಕಾರರ ಜೀವನದ ಸ್ಥಿತಿಗತಿಯಂತೂ ತುಂಬ ಗಂಭೀರವಾಗಿದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಬಹಳ ಹಿಂದಿರುವ ಈ ಮಹಿಳೆಯರು ಕೇವಲ ದುಡಿಯುವ ಯಂತ್ರವಾಗಿ ಬಿಟ್ಟಿದ್ದಾಳೆ. ಯಾವುದೇ ರೀತಿಯಲ್ಲಿಯೂ ಭದ್ರತೆ ಇಲ್ಲದ ಇವಳ ಕೌಟುಂಬಿಕ ಸಮಸ್ಯೆಗಳಿಂದ ಜರ್ಜರಿತಳಾಗಿದ್ದಾಳೆ. ತನ್ನ ಆದಾಯದಲ್ಲಿಯೇ ಕುಟುಂಬವನ್ನು ಸಾಗಿಸುವ ಇವಳಿಗೆ ಸರ್ಕಾರದ ಹಲವು ಯೋಜನೆಗಳು ಸಿಗದಂತಾಗಿದೆ. ಪಿಂಚಣಿ, ವಿಧವಾ ವೇತನ, ಸಂಧ್ಯ ಸುರಕ್ಷ ಹಾಗೂ ಆಶ್ರಯ ಯೋಜನೆಗಳು ಇವರಿಗೆ ಕನಸಾಗಿಯೇ ಉಳಿದಿವೆ.

## [illegible]

**[illegible]**

[illegible]

ಕೃಷಿ ಕ್ಷೇತ್ರದಲ್ಲಿ ಮಾಲೀಕನಿಗಿಂತ ಮಾಲಿಯ ಕೆಲಸ ಅತ್ಯಂತ ಪ್ರಮುಖವಾದದು. ಇಲ್ಲಿ ಹೆಣ್ಣಾಳು ಗಂಡಾಳು ಎಂಬ ಭೇದವಿದ್ದರೂ ಕೆಲಸದಲ್ಲಿ ಅಷ್ಟಾಗಿ ಭಿನ್ನತೆಯಿರುವುದಿಲ್ಲ. ಕೃಷಿ ಕೂಲಿಕಾರರಾದ ಮಹಿಳೆ ತನ್ನನ್ನು ಕೃಷಿ ಕ್ಷೇತ್ರದಲ್ಲಿ ಎಷ್ಟು ತೊಡಗಿಸಿಕೊಂಡಿದ್ದಾಳೆ ಎಂದರೆ ಬಿಸಿಲು, ಮಳೆ ಚಳಿಯ ಗೊಡವೆಯಿಲ್ಲದೆ ಹೊಲ-ಗದ್ದೆಗಳಲ್ಲಿ ಕೆಲಸ ಮಾಡುತ್ತಾಳೆ. ಆದರೂ ಎಂದಿಗೂ ಅವಳು ತನ್ನ ಮೀಸಲಾತಿಗಾಗಿ ಹೋರಾಡುವುದಿಲ್ಲ. ತನ್ನ ಹೆಸರಿನ ಮುಂದೆ ತಾನೇ ಕೃಷಿ ಕೂಲಿಕಾರರ ಮಹಿಳೆ ಎಂದು ಯಾವಾಗಲೂ ನಮೂದಿಸಿಕೊಂಡಿಲ್ಲ. ಕಂಪನಿಯ ಕಛೇರಿಯೂ ಅವರಿಗೆ ತಕ್ಕಂತೆ ಕೆಲಸ ನಿರ್ವಹಿಸುವ ಮಹಿಳೆ ಎಂದು ಗುರುತಿಸಿಕೊಂಡವಳಲ್ಲಾ, ಅದಕ್ಕಾಗಿ ಎಂದೂ ಹಾತೊರೆಯುವವಳು ಅಲ್ಲ. ಮುಸುರಿ ತಿಕ್ಕುವುದರಿಂದ ಮಲ ಹೊರುವವರೆಗೂ, ಭತ್ತ ಬಡಿಯುವುದರಿಂದ ಹಿಡಿದು ಅದನ್ನು ಅಕ್ಕಿ ಮಾಡಿಸುವವರೆಗೂ ಮನೆಯ ಒಳಗು ಹೊರಗು ಬೆವರು ಸುರಿಸಿ ತನ್ನಷ್ಟಕ್ಕೆ ತಾನೆ ಶ್ರಮಪಟ್ಟು ಮೈ ಬಗ್ಗಿಸಿ ದುಡಿಯುತ್ತಾಳೆ. ಸಮಸ್ಯೆಗಳ ಸರಮಾಲೆಗಳನ್ನು ಸೆರಗಿನಲ್ಲಿ ಕಟ್ಟಿಕೊಂಡಿದ್ದರೂ ಮಹಿಳೆ ಮೌನಿಯಾಗಿರುತ್ತಾಳೆ. ಎಲೆಮರೆಯ ಕಾಯಿಯಂತಿದ್ದು ತನ್ನವರ ಏಳ್ಗೆಗಾಗಿ ಶ್ರಮಿಸುವ ಗ್ರಾಮೀಣ ಮಹಿಳಾ ಕೃಷಿ ಕೂಲಿಕಾರರ ಜೀವನ ಶೈಲಿ ಪಟ್ಟಣದ ಮಹಿಳೆಯರಿಗಿಂತ ತೀರಾ ವಿಭಿನ್ನವಾಗಿರುತ್ತದೆ. ಇಂಥಾ ಮಹಿಳಾ ಕೃಷಿ ಕೂಲಿಕಾರರ ಬದುಕು ಬವಣೆಗಳ ಮಾತೆ ಎಂದರೂ ತಪ್ಪಾಗಲಾರದು. ಇವರ ಬಳಿ ಹೊರಗಿನ ಬದುಕಿನ ಸುತ್ತ ಒಂದು ಸುತ್ತು ಹಾಕಿದಾಗ ಹಲವು ನಿಜಾಂಶಗಳ ಅರಿವಾಗುತ್ತದೆ.[೧]

ಮಹಿಳೆಯರ ಪರಿಸ್ಥಿತಿ ಏನೆಂದರೆ, ಕೃಷಿ ವಲಯದಲ್ಲಿ ಮಹಿಳೆಯ ಪಾತ್ರ ಎಂಬುದಾಗಿ ನಾವು ಮಾತಾಡ್ತಿರವಾಗ್ಲೇನೇ ಕೃಷಿ ವಲಯವೇ ಇವತ್ತು ಗ್ರಾಮೀಣ ಸಮುದಾಯದಲ್ಲಿ ಬಹಳ ಕಡಿಮೆ ಪ್ರಾಧಾನ್ಯತೆಯನ್ನು ಪಡೆಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಇದನ್ನು ದಯವಿಟ್ಟು ಸರಿಯಾದ ರೀತಿನಲ್ಲಿ ಅರ್ಥ ಮಾಡ್ಕೊಳ್ಳಬೇಕು, ಕೃಷಿ ಎಷ್ಟೇ ಮಾತಡಿದ್ರೂ ಎಷ್ಟೇ ತರಹದ ನೀರಾವರಿ ಚಟುವಟಿಕೆಗಳು ನೀರಾವರಿಯೋಜನೆಗಳು ರಾಜ್ಯಗಳ ನಡುವೆ ಜಗಳಗಳು ಇವೆಲ್ಲಾ ನಡೆದ್ರು ಕೂಡ ಮೂರು ವರ್ಷದಿಂದ ಸರಿಯಾಗಿ ಮಳೆ ಬರದೆ ಬರಗಾಲ ಪರಿಸ್ಥಿತಿ ಏರ್ಪಟ್ಟಿರೋದ್ರಿಂದ ಎಷ್ಟರ ಮಟ್ಟಿಗೆ ಕೃಷಿ ಇವತ್ತು ಗ್ರಾಮಗಳಲ್ಲಿ ನಡೀತಾ ಇದೆ. ಕೃಷಿ ವಲಯವನ್ನು ನಂಬಿಕೊಂಡಿರೊಂಥ ಮಹಿಳೆಯರ ಪರಿಸ್ಥಿತಿ ಏನಾಗುತ್ತದೆ ಮತ್ತು ಇವತ್ತೇನಾಗಿದೆ ಎಂದು ನೋಡಬಹುದು.[೨]

## ೪.೧. ಆತಂಕಕಾರಿ ಆರ್ಥಿಕ ಪರಿಸ್ಥಿತಿ

ಮಹಿಳಾ ಕೃಷಿ ಕೂಲಿಕಾರರ ಬದುಕನ್ನು ವಿಶ್ಲೇಷಿಸುವ ಹೊರತಾಗಿ ಮೊದಲು ಗೋಚರವಾಗುವುದು ಅವರ ಆರ್ಥಿಕ ಸ್ಥಿತಿ. ಇಂದಿನ ದಿನಮಾನದಲ್ಲಿ ಮಹಿಳಾಕೂಲಿಕಾರರ ಆರ್ಥಿಕ ಸ್ಥಿತಿಯು ಬಹಳಷ್ಟು ಹದಗೆಟ್ಟಿದೆ. ಮಹಿಳೆಯರ ಆರ್ಥಿಕ ಪರಿಸ್ಥಿತಿ ನೋಡಿದಾಗ ಅವರಿಗೆ ಸ್ವಂತದ್ದೊಂದು ಸಣ್ಣ ಜಮೀನು ಹೊಂದಿದವರು ಇದ್ದರೂ ಆ ಜಮೀನಿನಲ್ಲಿ ಹೆಚ್ಚೆಂದರೆ ನಾಲ್ಕಾರು ತಿಂಗಳ ಕಾಲ ದುಡಿದು ಬದುಕು ಸಾಗಿಸಬಹುದು. ಅನಂತರ ಊರ ಜಮೀನ್ದಾರರ ಅಥವಾ ಬೇರೆಯವರ ಮನೆ ಕೆಲಸಕ್ಕೆ ಹೋಗುವುದು

ಅನಿವಾರ್ಯ. ಇನ್ನೂ ಕೆಲವರಂತೂ ಅಂದು ದುಡಿದು ತಂದ ಆದಾಯದಲ್ಲೇ ಅಂದಿನ ಆಹಾರ ತಂದು ತಿನ್ನಬೇಕಾದ ಪರಿಸ್ಥಿತಿ ಬಹಳಷ್ಟು ಜನರಿಗಿದೆ. ಬಡತನ ರೇಖೆಗಿಂತ ಕೆಳಮಟ್ಟದಲ್ಲಿರುವ ಇಂಥ ಮಹಿಳೆಯರಿಗೆ ಸ್ವಂತದ್ದೂ ಎನ್ನುವುದು ಏನೂ ಇಲ್ಲ ಎಂದು ತಿಳಿದು ಬರುತ್ತದೆ.

ಮಹಿಳಾ ಕೃಷಿಕೂಲಿಕಾರರು ಮುಂಜಾನೆ ಬೇಗ ಎದ್ದು ಗಂಡ ಮತ್ತು ಹೆಂಡತಿ ಇಬ್ಬರೂ ಕೂಡ ಕೆಲಸಕ್ಕೆ ಹೋಗಲೇಬೇಕು. ಒಬ್ಬರಿಂದ ಸಂಸಾರವನ್ನು ನಿಭಾಯಿಸಲು ಆಗುವುದಿಲ್ಲ. ಆದ್ದರಿಂದ ಹೆಂಡತಿಯೂ ಕೂಡ ಕೃಷಿ ಕೂಲಿಕಾರಳಾಗಿ ಕೆಲಸಕ್ಕೆ ಹೋಗುತ್ತಾಳೆ. ಗಂಡ ಮನೆಗೆ ಬಂದ ತಕ್ಷಣ ವಿಶ್ರಾಂತಿಯನ್ನು ತೆಗೆದುಕೊಳ್ಳುತ್ತಾನೆ. ಆದರೆ ಹೆಂಡತಿಯಾದವಳಿಗೆ ವಿಶ್ರಾಂತಿ ಎನ್ನುವುದೇ ಇಲ್ಲ. ಕಾರಣ ಅವಳು ಬಂದ ತಕ್ಷಣ ಮನೆ ಕೆಲಸ ಮಾಡುವುದು, ಅಡುಗೆ ಮಾಡುವುದು, ಬಟ್ಟೆ ತೊಳೆಯುವುದು ಮುಂತಾದ ಕೆಲಸಗಳನ್ನು ಹೆಂಡತಿಯೇ ಮಾಡಬೇಕು. ಈ ರೀತಿಯಾಗಿ ಅನೇಕ ಕೆಲಸಗಳನ್ನು ಅವಳೊಬ್ಬಳೆ ಮಾಡಬೇಕಾಗುತ್ತದೆ. ಹೀಗೆ ಮನೆಯ ಒಳಗಡೆ ಹಾಗೂ ಮನೆಯ ಹೊರಗಡೆ ಎರಡೂ ಕಡೆ ಅವಳು ದುಡಿಯಬೇಕಾಗುತ್ತದೆ.

ಮಹಿಳಾ ಕೂಲಿಕಾರರು ಆರ್ಥಿಕವಾಗಿ ದುರ್ಬಲಳಾಗಿದ್ದರೂ ಅವಳು ಪುರುಷನಿಗಿಂತ ಹೆಚ್ಚು ಶ್ರಮವಹಿಸುವವಳಾಗಿ ಕಂಡುಬರುತ್ತಾಳೆ. ಮೊದಲು ಕಠಿಣವಾದ ಕೆಲಸ ಕಾರ್ಯಗಳು ಪುರುಷನಿಗೆ ಮಾತ್ರ ಸೀಮಿತವಾಗಿದ್ದವು. ಆದರೆ ಇಂದು ಮಹಿಳೆ ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸುವಲ್ಲಿ ಸಬಲಳಾಗಿರುವಳು. ಗಂಡ ಹಾಗೂ ಮಕ್ಕಳಿಗಿಂತ ಬೇಗನೇ ಎದ್ದು ಮನೆಕೆಲಸಗಳನ್ನೆಲ್ಲಾ ಮಾಡಿ ಪುನಃ ಗಂಡನ ಜೊತೆ ಕೂಲಿ ಕೆಲಸದಲ್ಲಿ ತೊಡಗಿ ಮತ್ತೆ ಮನೆಕೆಲಸಗಳನ್ನು ನಿರ್ವಹಿಸುವ ಗ್ರಾಮೀಣ ಪ್ರದೇಶದ ಮಹಿಳೆ ಇಂದು ಒಂದು ರೀತಿಯಲ್ಲಿ ಯಂತ್ರವಾಗಿಬಿಟ್ಟಿದ್ದಾಳೆ. ಗ್ರಾಮೀಣ ಭಾಗದ ಕೂಲಿ ಕೆಲಸ ಮಾಡುವ ಮಹಿಳೆಯರ ಬದುಕು ತುಂಬ ಶೋಚನೀಯವಾಗಿದೆ.

ಮಹಿಳೆ ಕೃಷಿ ಕೂಲಿಕಾರಳಾಗಿ ಕೆಲಸಕ್ಕೆ ಹೋದಾಗ ಅವಳಿಗೆ ಅಲ್ಲಿ ವೇತನದಲ್ಲಿ ವ್ಯತ್ಯಾಸ ಮಾಡಲಾಗುತ್ತದೆ. ಹೆಣ್ಣಾಳು ದಿನಕ್ಕೆ ೪೦ ರಿಂದ ೫೦ ರೂಪಾಯಿಗಳು ಮತ್ತು ಗಂಡಾಳು ದಿನಕ್ಕೆ ೭೦-೮೦ ರೂಪಾಯಿಗಳು. ಈ ರೀತಿಯಾಗಿ ಕೂಲಿ ನೀಡುವಲ್ಲಿ ತಾರತಮ್ಯವೆಸಗುತ್ತಾರೆ. ಅವಳಿಗೆ ಕಡಿಮೆ ಕೂಲಿಕೊಟ್ಟು ಹೆಚ್ಚು ದುಡಿಸಲಾಗುತ್ತದೆ. ಪುರುಷನಿಗೆ ಸರಿಸಮನಾಗಿ ದೊರೆಯುವ ಮಹಿಳಾ ಕೂಲಿಕಾರರ ಬದುಕು ತುಂಬ ಹೀನಾಯವಾಗಿದೆ.

ಮಹಿಳಾ ಕೃಷಿ ಕೂಲಿಕರರು ಬಡತನದಿಂದ ಕೂಡಿರುವುದರಿಂದ ವಾಸಿಸಲು ಯೋಗ್ಯವಾದ ಸೂರಿಲ್ಲ, ಮಳೆ, ಗಾಳಿ ಬಂದರೆ ಇವರಿಗೆ ಎಲ್ಲಿಲ್ಲದ ಭಯ. ಏಕೆಂದರೆ ಗಟ್ಟಿಯಾದ ಒಳ್ಳೆಯ ವ್ಯವಸ್ಥೆಯಿಂದ ಕೂಡಿದ ಮನೆಗಳಿಲ್ಲದೆ ಗುಡಿಸಲು ಮನೆಗಳೇ ಇವರಿಗೆ ಆಶ್ರಯ ತಾಣಗಳಾಗಿವೆ. ರಾಗಿ ಭತ್ತದ ಹುಲ್ಲೇ ಇವರ ಮನೆಗೆ ಮೇಲ್ ಹೊದಿಕೆಯಾಗಿದೆ. ಸರ್ಕಾರದಿಂದ ಬರುವ ಆಶ್ರಯ ಮನೆಗಳಂಥ ಹಲವಾರು ಯೋಜನೆಗಳು ಬಡತನದಿಂದ ಬೇಯುತ್ತಿರುವ ಕೂಲಿಕಾರರಿಗೆ ಮುಟ್ಟಿಟ್ಟಿಲ್ಲ. ಅವುಗಳೆಲ್ಲ ಆರ್ಥಿಕವಾಗಿ

[illegible]

[illegible]

[illegible]

[illegible]

ಸಬಲರಿದ್ದವರ ಪಾಲಾಗಿವೆ. ಈ ರೀತಿಯ ಅವ್ಯವಸ್ಥೆಯಿಂದ ಕೂಲಿಕಾರರು ಆರ್ಥಿಕವಾಗಿ ಮುಂದೆ ಬಾರದಂತಾಗಿದ್ದಾರೆ.

ಭಾರತೀಯ ಸಮಾಜ ಹಿಂದಿನಿಂದಲೂ ಒಂದು ರೀತಿಯ ವೈಪರಿತ್ಯದಿಂದ ರೂಪುಗೊಂಡಿದೆ. ಭಾರತೀಯ ಸಮಾಜದ ಕಟ್ಟು ಪಾಡಿನಲ್ಲಿ ಮಹಿಳೆ ದ್ವಿತೀಯ ದರ್ಜೆಯ ನಾಗರಿಕಳಾಗಿದ್ದು, ಸ್ವತಂತ್ರಳಾಗಿ ಬದುಕಬೇಕಾಗಿದೆ. ಅವಳು ತನ್ನ ಎಲ್ಲ ಕರ್ತವ್ಯಗಳನ್ನು ಜವಾಬ್ದಾರಿಗಳನ್ನು ಹೊಣೆಗಾರಿಕೆಯನ್ನು ಯಾವುದೇ ವಿಧವಾದ ಹಕ್ಕು ಬಾಧ್ಯತೆಗಳಿಲ್ಲದೆ ನಿರ್ವಹಿಸಬೇಕಾಗಿದೆ.

೧. ಪುರುಷ ಪ್ರಧಾನ ಸಮಾಜದ ಚೌಕಟ್ಟಿನಲ್ಲಿ ತಂದೆ, ಗಂಡ, ಮಾವ ಅಥವಾ ಮಗನ ಒಡೆತನದ ಅಡಿಯಲ್ಲಿ ಬಾಳಬೇಕಾಗಿದೆ. ಇವರ ಅಧೀನದಲ್ಲಿ ದುಡಿಯಬೇಕಾಗಿದೆ. ಅವಳು ಸದಾಕಾಲ ಈ ವರ್ತುಲದಲ್ಲಿ ಸುತ್ತಬೇಕಾಗಿದೆ. ಇವುಗಳ ಜೊತೆಗೆ ಗೃಹಕೃತ್ಯ, ಮಕ್ಕಳ ಪಾಲನೆ, ಹಿರಿಯರ ಪೋಷಣೆಯಲ್ಲಿ ತನ್ನ ಸಮಯ ಕಳೆಯಬೇಕಾಗಿದೆ. ಅದರಲ್ಲೂ ಗ್ರಾಮೀಣ ಪ್ರದೇಶದ ಮಹಿಳೆಯರ ಜೀವನ ಇನ್ನೂ ಕಷ್ಟಕರ. ಕೃಷಿನಿರತ ಕುಟುಂಬಗಳಲ್ಲಂತೂ ಪಶುಪಾಲನೆಯ ಜೊತೆಗೆ ಸುಗ್ಗಿಯ ಕಾಲದ ಎಲ್ಲ ಕೆಲಸಗಳನ್ನು ಮಾಡಬೇಕಾಗಿದೆ. ಇಂತಹ ವಾತಾವರಣದಲ್ಲಿ ಪುರುಷರು ಆಲೋಚಿಸುವುದೇನೆಂದರೆ ಕೆಲವು ಕೆಲಸಗಳು ಮಹಿಳೆಯರೇ ಮಾಡಬೇಕಾಗಿರುವುದರಿಂದ ಅವುಗಳನ್ನು ಅವರೇ ಮಾಡಬೇಕೆಂದು ಕಟ್ಟಳೆಗಳನ್ನು ಹಾಕಿ ಬಿಡುತ್ತಾರೆ. ಅದರ ಪರಿಣಾಮವಾಗಿ ಈ ಮಹಿಳೆ ದಿನದಲ್ಲಿ ೧೫-೧೮ ಗಂಟೆಗಳ ಕಾಲ ಕೆಲಸ ಮಾಡಬೇಕುತ್ತದೆ.[೬]

೨. ಹೀಗೆ ದುಡಿಮೆಯಲ್ಲಿ ತೊಡಗಿಕೊಳ್ಳುವುದರಿಂದ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ದುಡಿಮೆಯ ಕ್ಷೇತ್ರದಲ್ಲಿ ಕಾರ್ಮಿಕಳಾಗಿ ಕುಟುಂಬದ ಜವಬ್ದಾರಿಯನ್ನು ಹೊರಬೇಕಾದಾಗ ಕುಟುಂಬದಲ್ಲಿ ತಲೆದೂರುವ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇಂತಹ ಸಮಸ್ಯೆಗಳನ್ನು ಎದುರಿಸುವ ಮಹಿಳೆಯರಲ್ಲಿ ವಿಭಿನ್ನವಾದ ಹಿನ್ನಲೆಯಿಂದ ಬಂದವರಾಗಿರುತ್ತಾರೆ. ಅವರಲ್ಲಿ ಮನೆಯಿಂದ ಹೊರದೂಡಲ್ಪಟ್ಟವರು, ವಿಧವೆಯರು, ವಿಚ್ಛೇದಿತರು, ಪರಿತ್ಯಾಗ ಹೊಂದಿದವರು, ಚಿಕ್ಕವಯಸ್ಸಿನಲ್ಲಿ ತಂದೆ ತಾಯಿಯರನ್ನು ಕಳೆದುಕೊಂಡವರು, ವೃದ್ಧಳಾದ ತಾಯಿ, ಅವಿದ್ಯಾವಂತ, ರೋಗಿಗಳು, ಅಂಗಹೀನ ಪತಿಯನ್ನು ಸಾಕಬೇಕಾದ ಹೊಣೆಗಾರಿಕೆಯುಳ್ಳವರು. ಹೀಗೆ ಹಲವಾರು ಜವಬ್ದಾರಿಗಳ ಹಿನ್ನೆಲೆಯುಳ್ಳ ಮಹಿಳೆ ಕುಟುಂಬದ ಹೊಣೆಗಾರಿಕೆಯನ್ನು ಹೊತ್ತು ಮನೆಗೆ ಅನ್ನದಾತಳಾಗಿ ಕಾರ್ಯ ನಿರ್ವಹಿಸುತ್ತಿದ್ದಾಳೆ.[೭]

ಕೂಲಿಕಾರ ಮಹಿಳೆಯರ ಸಮಸ್ಯೆಗಳಿಗೆ ಪರಿಹಾರವೇ ಇಲ್ಲದಂತಾಗಿ ತನ್ನ ಕುಟುಂಬದ ಪ್ರತಿಯೊಂದು ಸಮಸ್ಯೆಗಳಿಗೆ ಇವಳೇ ಆಧಾರವಾಗಿದ್ದಾಳೆ. ದುಡಿಮೆಯ ಕ್ಷೇತ್ರದಲ್ಲಿ ಕಡಿಮೆ ಕೂಲಿ, ಹೆಚ್ಚು ದುಡಿಮೆ ಇಂತಹ ತಾರತಮ್ಯ ಶೋಷಣೆ ದಬ್ಬಾಳಿಕೆಯಂತಹ ಹಲವು ರೀತಿಯ ಸಮಸ್ಯೆಗಳಿಗೆ ಇಂದು ಮಹಿಳೆ

[illegible]

ತುತ್ತಾಗಿದ್ದಾಳೆ. ಕೆಲವರು ಇಂತಹ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಮುಂದೆ ಸಾಗಿದರೆ ಮತ್ತೆ, ಕೆಲವರು ಈ ಸಮಸ್ಯೆಗಳನ್ನು ನಿಭಾಯಿಸುವುದರಲ್ಲೇ ಅನೇಕ ಅಡೆತಡೆಗಳಿಗೆ ಬಲಿಯಾಗುವರು.

"ಮೇಲೆ ತಿಳಿಸಿದ ಸಮಸ್ಯೆಗಳ ಹಿನ್ನೆಲೆಯಲ್ಲಿ ಮಹಿಳೆಯ ಜೀವನದಲ್ಲಿ ಆರ್ಥಿಕ ಪರಿಸ್ಥಿತಿ, ಜಾತಿಪದ್ಧತಿ, ಸಾಮಾಜಿಕ ಕಟ್ಟುಪಾಡು, ನಂಬಿಕೆಗಳು, ಯೋಚನೆ ಮಾಡುವ ವೈಖರಿ, ಉತ್ಸಾಹ ಭಾವನಾತ್ಮಕ ವರ್ತನೆಗಳು ಸಾಂಸ್ಕೃತಿಕ ಹಿನ್ನೆಲೆ ಇದೆಲ್ಲಾ ಒಂದೊಂದು ರೀತಿಯಲ್ಲಿ ಪಾತ್ರ ನಿರ್ವಹಿಸುತ್ತವೆ" ಆರೋಗ್ಯದ ದೃಷ್ಠಿಯಲ್ಲಿ ಮಹಿಳಾ ಕೂಲಿಕಾರರಿಗೆ ಯಾವುದೇ ರೀತಿಯ ಸುರಕ್ಷಿತವಾದ ಕಾಳಜಿ ಇರುವುದಿಲ್ಲ. ಧೂಳಿನಿಂದ ಕೂಡಿದಂತಹ ಕೆಲಸಗಳನ್ನು ಮಾಡುವುದರಿಂದ ಇವರಿಗೆ ಕೆಮ್ಮು, ದಮ್ಮು, ಅಲರ್ಜಿ, ಶ್ವಾಸಕೋಶಕ್ಕೆ ಸಂಬಂಧಿಸಿದಂಥ ಕಾಯಿಲೆಗಳನ್ನು ಅನುಭವಿಸುವರು ಅಲ್ಲದೇ ಇನ್ನೂ ಕೆಲವು ಮಹಿಳಾ ಕೂಲಿಕಾರರು ಹಗಲಿರುಳು ದುಡಿಮೆ ಮಾಡಿ ದಣಿಯುವುದರಿಂದ ಆರೋಗ್ಯವನ್ನು ಮತ್ತಷ್ಟು ಕೆಡಿಸಿಕೊಳ್ಳುವರು.

ಕೃಷಿ ಪ್ರಧಾನವಾದಂತಹ ನಮ್ಮ ರಾಷ್ಟ್ರದಲ್ಲಿ ಬಹುತೇಕರು ಕೃಷಿಯನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿದ್ದರೆ, ಇನ್ನೂ ಅಶಿಕ್ಷಿತ ಮಹಿಳೆಯರು ಚಟುವಟಿಕೆಗಳಿಂದ ದೊರೆಯುವ ಕೂಲಿ/ಕೆಲಸವನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿದ್ದಾರೆ ಜಾಗತೀಕರಣ. ಆಧುನಿಕರಣ ಮುಂತಾದವುಗಳಿಂದ ಇಂತಹ ಕೃಷಿ ಕ್ಷೇತ್ರದಲ್ಲಿ ತೊಡಗಿದ ಮಹಿಳೆಯರಿಗೆ ತುಂಬಾ ಸಮಸ್ಯೆಗಳು ಎದುರುಗುತ್ತಿವೆ ಕೃಷಿ ಕೂಲಿ ಆಳುಗಳಾಗಿ ದುಡಿಯುವ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

### ಅಸಂಘಟಿತ ವಲಯದಲ್ಲಿ ಮಹಿಳಾ ದುಡಿಮೆ

ಕೃಷಿಯನ್ನೇ ಅವಲಂಬಿಸಿದ ರೈತರಿಗೆ ರೈತ ಸಂಘಗಳುಂಟು ಆದರೆ ಕೃಷಿ ಚಟುವಟಿಕೆಗಳಲ್ಲಿ ಕೆಲಸ ಮಾಡುವ ದುಡಿಮೆಗಾರರಿಗೆ ಯಾವ ಸಂಘಗಳೂ ಇಲ್ಲದಾಗಿವೆ. ಇವರು ಅಸಂಘಟಿತರಾಗಿ ನಿತ್ಯವೂ ಕೂಲಿಕೆಲಸಮಾಡುತ್ತಿದ್ದಾರೆ. ಸಂವಿಧಾನ ಮತ್ತು ಸರಕಾರದ ಕಾಯ್ದೆಯ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುತ್ತಿದ್ದಾರೆ. ಉದ್ಯೋಗ ಭದ್ರತೆ ನೀಡುವ ಸಂಘಟನೆಗೊಂಡ ಕಾರ್ಮಿಕರಿರುವ ಹಾಗೂ ಉತ್ಪಾದನೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ವಲಯವೇ ಸಂಘಟಿತ ವಲಯ ಇದಕ್ಕೆ ವಿರುದ್ಧವಾದ ಲಕ್ಷಣಗಳನ್ನು ಹೊಂದಿರುವ ವಲಯ ಅಸಂಘಟಿತ ಕ್ಷೇತ್ರದಾಗಿದೆ. ಇಲ್ಲಿ ಹೆಚ್ಚು ಕೂಲಿಕಾರರನ್ನು ಕಡಿಮೆ ಕೂಲಿಗೆ ನೇಮಿಸಿಕೊಳ್ಳಲಾಗುತ್ತದೆ. ಹಾಗೂ ಲಿಂಗ, ಜಾತಿ, ವರ್ಗದ ಆಧಾರದ ಮೇಲೆ ವೇತನ ತಾರತಮ್ಯ ಮಾಡಲಾಗುತ್ತದೆ. ಅನೇಕ ಅಸಂಘಟಿತ ಕ್ಷೇತ್ರಗಳಲ್ಲಿ ಈ ಬಗೆಯ ತಾರತಮ್ಯವು ಸಾಮಾನ್ಯವಾಗಿದೆ.

ಉದಾ:- ಸರಕಾರಿ ಸ್ವಾಮ್ಯದ ಉದ್ಯಮಗಳು, ಪೆಟ್ರೋಲಿಯಂ, ತೈಲ, ಉದ್ಯಮ ರೈಲ್ವೇ ಇಲಾಖೆ ದೂರವಾಣಿ ಇಲಾಖೆ, ಸರಕಾರಿ ಶಿಕ್ಷಣ ಸಂಸ್ಥೆಗಳು, ಆಸ್ಪತ್ರೆಗಳು, ಅಂಚೆ ಇಲಾಖೆ, ವೈಮಾನಿಕ ಕ್ಷೇತ್ರ, ರಕ್ಷಣಾ ವಲಯ ಮುಂತಾದ, ಇವುಗಳಲ್ಲಿ ಕೆಲಸ ಮಾಡುವವರಿಗೆ ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.

[illegible]

[illegible]

[illegible]

[illegible]

ಇನ್ನು ಸಂಘಟಿತ ವಲಯಗಳೆಂದರೆ ಕಟ್ಟಡ, ರಸ್ತೆ, ನಿರ್ಮಾಣ, ಗೃಹ, ಕೈಗಾರಿಕೆ, ಸಣ್ಣ ಸಣ್ಣ ಸ್ವಯಂ ಉದ್ಯೋಗಿ, ಹಣ್ಣು ತರಕಾರಿ ಮಾರಟ ಮಾಡುವುದು ಬುಟ್ಟಿ ಚಾಪೆ ಹಣೆಯುವುದು, ಬಟ್ಟೆ ಹೊಲಿಯುವುದು ಮನೆಕೆಲಸ ನೂಲುತೆಗೆಯುವುದು, ಬಟ್ಟೆ ನೇಯುವುದು, ಮೀನುಗಾರಿಕೆ, ಪಶುಸಂಗೋಪನೆ ತೋಟಗಾರಿಕೆ, ಬೀಡಿಕಟ್ಟುವುದು, ಊದುಬತ್ತಿ ತಯಾರಿಸುವುದು ಮುಂತಾದ ಹಾಗೂ ಕೃಷಿ ಕ್ಷೇತ್ರ ಕೂಡ ಇದರ ವ್ಯಾಪ್ತಿಗೆ ಬರುತ್ತವೆ.

### ಅಸಂಘಟಿತ ಕ್ಷೇತ್ರದ ಮಹಿಳೆಯರ ದುಡಿಮೆಯ ಲಕ್ಷಣಗಳು

೧. ಅಸಂಘಟಿತ ಕ್ಷೇತ್ರದ ಕೆಲಸಗಳು ಸ್ಥಳೀಯವಾಗಿರುತ್ತವೆ. ಇಲ್ಲಿ ಸ್ಥಳೀಯ ತಂತ್ರಜ್ಞಾನ, ಕಚ್ಚಾ ಸಾಮಗ್ರಿ ಹಾಗೂ ಮಾರುಕಟ್ಟೆಯು ಪ್ರಧಾನವಾಗಿರುತ್ತವೆ. ಸ್ಥಳೀಯ ಮಹಿಳೆಯರೇ ಹೆಚ್ಚಾಗಿ ದುಡಿಯುತ್ತಿರುತ್ತಾರೆ. ಅವರು ಸಾಂಪ್ರದಾಯಿಕ ವಿಚಾರ ಹಾಗೂ ಮನೋಭಾವಗಳಿಂದ ಬಂಧಿಸಲ್ಪಟ್ಟಿದ್ದಾರೆ.

೨. ಭಾರತದಲ್ಲಿ ಶೇ ೯೦ಕ್ಕಿಂತ ಹೆಚ್ಚಿನ ಮಹಿಳೆಯರು ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಇತ್ತೀಚಿನ ಖಾಸಗೀಕರಣ, ಜಾಗತೀಕರಣ ಹಾಗೂ ತಂತ್ರಜ್ಞಾನ ಅಭಿವೃದ್ಧಿಯಿಂದ ಅವರ ಸಂಖ್ಯೆ ಹೆಚ್ಚಾಗುತ್ತಿದೆ. ಅಲ್ಲದೆ ದುಡಿಯುತ್ತಿರುವ ಪರಿಸ್ಥಿತಿ ವತ್ತಷ್ಟು ಹದಗೆಡುತ್ತಿದೆ. ವಿದೇಶಿ ವಸ್ತುಗಳಿಗೆ ನಮ್ಮ ಮಾರುಕಟ್ಟೆ ತೆರೆದುಕೊಂಡಿರುವುದರಿಂದ ಇಲ್ಲಿ ಮಹಿಳಾ ಉತ್ಪಾದಕರು ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಸ್ಪರ್ದಿಸಲು ಸಾಧ್ಯವಾಗುವುದಿಲ್ಲ. ತಮ್ಮ ವಸ್ತುಗಳ ಮಾರಾಟಕ್ಕೆ ಮಾರುಕಟ್ಟೆಯನ್ನು ಕಳೆದುಕೊಳ್ಳುತ್ತಾರೆ. ಈಗಾಗಲೇ ಶೇ ೫೦ ರಷ್ಟು ಸಣ್ಣ ಹಾಗೂ ಗೃಹ ಕೈಗಾರಿಕೆಗಳು ಮುಚ್ಚಿ ಹೋಗಿವೆ ಎಂದು ತಿಳಿದು ಬಂದಿದೆ. ಇಲ್ಲಿ ಅಧಿಕ ಸಂಖ್ಯೆಯಲ್ಲಿ ದುಡಿಯುತ್ತಿದ್ದ ಮಹಿಳೆಯರು ಉದ್ಯೋಗ ಕಳೆದುಕೊಂಡಿದ್ದಾರೆ. ತಂತ್ರಜ್ಞಾನ ಬೆಳವಣಿಗೆಯ ಅಸಂಘಟಿತ ಕ್ಷೇತ್ರದ ಮಹಿಳೆಯರ ಮೇಲೆ ಪ್ರತಿಕೂಲ ಪರಿಣಾಮಬೀರಿದೆ ಸ್ಥಳೀಯ ಕಚ್ಚಾ ಸಾಮಾಗ್ರಿ ಬಳಸಿ ಮಹಿಳೆಯರು ತಯಾರಿಸುತ್ತಿದ್ದ ಪೂರಕೆ, ಬುಟ್ಟಿ, ಚಾಪೆ, ಕರಕುಶಲ ವಸ್ತುಗಳು, ಪ್ಲಾಸ್ಟಿಕ್ ಮತ್ತು ಇತರ ವಸ್ತುಗಳ ಬಳಕೆ ಹೆಚ್ಚಾದ್ದರಿಂದ ಬೇಡಿಕೆ ಕಳೆದುಕೊಂಡು ಮಹಿಳೆಯರು ಅಂತಂತ್ರ ಸ್ಥಿತಿಯಲ್ಲಿದ್ದಾರೆ.

೩. ಸಂಘಟಿತ ಕ್ಷೇತ್ರದಲ್ಲಿ ಕೆಲಸಗಾರರು ನಡೆಯುವ ಕಾನೂನಿನ ರಕ್ಷಣೆ, ಉದ್ಯೋಗದ ಭದ್ರತೆ ಹಾಗೂ ಇತರೆ ಸೌಲಭ್ಯಳಾದ. ವಿಮೆ, ವೈದ್ಯಕೀಯ ಸೌಲಭ್ಯ, ಪಿಂಚಣಿ, ಅಪಘಾತ ಪರಿಹಾರಗಳನ್ನು ಮಹಿಳೆಯರು ಪಡೆಯುವುದಿಲ್ಲ. ಹೆರಿಗೆ ರಜೆ ಮತ್ತು ಭತ್ಯೆ ನೀಡಬೇಕೆಂದು ಸಂವಿಧಾನದಲ್ಲೇ ಹೇಳಿದ್ದರೂ ಈ ವಲಯದಲ್ಲಿನ ಮಹಿಳೆಯರಿಗೆ ಅವುಗಳನ್ನು ನೀಡಲಾಗುತ್ತಿಲ್ಲ.

೪. ಮಹಿಳೆಯರನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು, ತೆಗೆದು ಹಾಕುವುದು, ವೇತನ ನಿಗದಿಪಡಿಸುವುದು, ಸೌಲಭ್ಯಗಳನ್ನು ಒದಗಿಸುವುದು ಮುಂತಾದವು ಮಾಲೀಕರ ಇಚ್ಛೆಯನುಸಾರ ನಡೆಯುತ್ತಿರುತ್ತದೆ. ಕೊನೆಯಲ್ಲಿ ನೇಮಕಗೊಂಡು ಮೊದಲು ಕೆಲಸದಿಂದ ತೆಗೆದುಹಾಕಲ್ಪಡುವ ಕೆಲಸಗಾರರಲ್ಲಿ ಮಹಿಳೆಯರು ಅಧಿಕ ಸಂಖ್ಯೆಯಲ್ಲಿರುತ್ತಾರೆ.

೫. ಸಮಾನವೇತನ ಕಾಯಿದೆ, ಕನಿಷ್ಠ ವೇತನ ಕಾಯಿದೆಗಳು ಈ ವಲಯದಲ್ಲಿ ಜಾರಿಗೊಳ್ಳದೇ ಇರುವುದರಿಂದ ಮಹಿಳೆಯರು ಕಡಿಮೆ ವೇತನ ಹಾಗೂ ವೇತನ ತಾರತಮ್ಯವನ್ನು ಅನುಭವಿಸುತ್ತಾರೆ.

೬. ಅಸಂಘಟಿತ ವಲಯದಲ್ಲಿ ಮಹಿಳೆಯರು ಸಂಘಟಿತ ವಲಯದ ಕೆಲಸಗಾರರಿಗಿಂತ ಹೆಚ್ಚು ಕಾಲ ದುಡಿಯುತ್ತಿರುತ್ತಾರೆ. ಆದರೆ ಈ ಹೆಚ್ಚಿನ ಅವಧಿಗೆ ಹೆಚ್ಚಿನ ದುಡಿಮೆಗೆ ವೇತನ ದೋರೆಯುವುದಿಲ್ಲ. ಕೆಲವು ಕಾರ್ಖಾನೆಗಳಲ್ಲಿ ಮಹಿಳೆಯರು ಬೆಳಿಗ್ಗೆ ಎಂಟು ಗಂಟೆಯಿಂದ ರಾತ್ರಿ ಹತ್ತು ಗಂಟೆಯವರೆಗೆ ದುಡಿಯುವುದು ಕಂಡುಬರುತ್ತದೆ.

೭. ಸಂವಿಧಾನವು ಕೆಲಸದ ಸ್ಥಳದಲ್ಲಿ ಆರೋಗ್ಯಕರ ವಾತವರಣವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತದೆ. ಆದರೆ ಮಹಿಳೆಯರು ದುಡಿಯುವ ಸ್ಥಳಗಳಲ್ಲಿ ಶಬ್ದ, ಧೂಳು, ಮಾಲಿನ್ಯ ಕೆಲವು ರಾಸಾಯನಿಕ ವಸ್ತುಗಳಿಂದ ಉಸಿರಾಟದ ತೊಂದರೆ ಇರುವಂತಹ ಪರಿಸ್ಥಿತಿ ಇದ್ದು ಅವುಗಳಿಗೆ ಸೂಕ್ತ ರಕ್ಷಣಾ ವ್ಯವಸ್ಥೆಯಿರುವುದಿಲ್ಲ. ಕಂಪ್ಯೂಟರ್‌ನ ಚಿಪ್ಸ್ ಮತ್ತು ಇತರ ಬಿಡಿ ಭಾಗಗಳನ್ನು ತಯಾರಿಸುವ ಕಾರ್ಖಾನೆಗಳಲ್ಲಿ ಮಹಿಳಾ ಕೂಲಿಕಾರರು ಹೆಚ್ಚಾಗಿ ಕಂಡುಬರುತ್ತಾರೆ. ಅಲ್ಲಿ ಸೀಸದ ಬಳಕೆ ಅಧಿಕವಾಗಿದ್ದು ಅದು ಮಹಿಳೆಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದ್ದರೂ ಮಾಲೀಕರು ಅದಕ್ಕೆ ಸೂಕ್ತ ರಕ್ಷಣಾ ವ್ಯವಸ್ಥೆ ಮಾಡಿಕೊಟ್ಟಿಲ್ಲ ಎನ್ನುವುದು ತಿಳಿದುಬಂದಿದೆ.

೮. ಅಸಂಘಟಿತ ವಲಯದಲ್ಲಿ ಕಡಿಮೆ ಮಟ್ಟದ ತಂತ್ರಜ್ಞಾನ ಬಳಸಿ ದೈಹಿಕ ಶ್ರಮ ಹೆಚ್ಚಿರುವ ಕೈ ಬೆರಳುಗಳನ್ನು ಬಳಸಿ ಮಾಡುವ ಏಕತಾನತೆಯ ಕೆಲಸಗಳು ಹೆಚ್ಚಾಗಿರುತ್ತವೆ. ಇಂತಹ ಶ್ರಮದಾಯಕ ದೀರ್ಘಕಾಲದ ಕೆಲಸಗಳ ಜೊತೆಗೆ ಮಹಿಳೆಯರು ತಮ್ಮ ಸಾಂಪ್ರದಾಯಿಕ ಪಾತ್ರದಲ್ಲಿ ಮನೆಕೆಲಸ ಗಂಡ, ಮಕ್ಕಳು, ವೃದ್ಧರು ಹಾಗೂ ರೋಗಿಗಳನ್ನು ನೋಡಿಕೊಳ್ಳುವ ಕೆಲಸಗಳನ್ನು ಮಾಡಬೇಕು.

೯. ಈ ರೀತಿಯಲ್ಲಿ ಎರಡು ಹೊರೆಗಳನ್ನು ಹೊರಬೇಕಾಗಿರುವುದರಿಂದ ಮಹಿಳೆಯರು ಫ್ಲೆಕ್ಸಿಬಲ್ ಆಗಿರುವ ಕೆಲಸಗಳನ್ನು ಅರಸುತ್ತಾರೆ.

ಉದಾ:- ಮನೆಗೆಲಸ, ಋತುಮಾನಕ್ಕೆ ಸಂಬಂಧಿಸಿದ ಕೆಲಸ ಗುತ್ತಿಗೆ ಆಧಾರಿತ ಕೆಲಸಗಳಲ್ಲಿ ತೊಡಗುತ್ತಾರೆ. ಪೆಕ್ಸಿಬಲ್ ಗುಣವೇ ಅವರ ಕಡಿಮೆ, ವೇತನ, ದೈಹಿಕ ಶ್ರಮದ ಹಾಗೂ ಏಕತಾನತೆಯ ಕೆಲಸಗಳಲ್ಲಿ ತೊಡಗುವಂತೆ ಮಾಡುತ್ತದೆ.

೧೦. ಅ ಸಂಘಟಿತ ವಲಯದಲ್ಲಿ ಮಹಿಳೆಯರು ಸಂಘಟಿತರಾಗಿಲ್ಲದಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ವೈವಿಧ್ಯಮಯ ಕೆಲಸಗಳಲ್ಲಿ ಬೇರೆ ಬೇರೆ ಸ್ಥಳ ಪ್ರದೇಶಗಳಲ್ಲಿ ಮಹಿಳೆಯರು ದುಡಿಯುವುದರಿಂದ ಅವರ ಸಂಘಟನೆ ಕಷ್ಟಸಾಧ್ಯ. ಮುಂಬಯಿ ಬೆಂಗಳೂರಿನಂಥ ಮಹಾನಗರಗಳಲ್ಲಿ ಮನೆಗೆಲಸದ ಮಹಿಳೆಯರು ಸಂಘಟಿತರಾಗುತ್ತಿರುವುದು ಕೇಳಿಬರುತ್ತಿದೆ.

೧೧. ಭಾರತದಲ್ಲಿ ಬಡಕುಟುಂಬದ ಕೆಳವರ್ಗದ ಹಿಂದುಳಿದ ಜಾತಿ, ಪರಿಶಿಷ್ಟಜಾತಿ ಹಾಗೂ ವರ್ಗದ ಮಹಿಳೆಯರು ಅಸಂಘಟಿತ ವಲಯದಲ್ಲಿ ಕಂಡುಬರುತ್ತಾರೆ. ನಮ್ಮ ಸಾಮಾಜಿಕ, ಆರ್ಥಿಕ

ಹಾಗೂ ರಾಜಕೀಯ ರಚನೆ ಹಾಗೂ ವ್ಯವಸ್ಥೆ ಮಹಿಳೆಯರು ಈ ವಲಯದಲ್ಲಿ ಕೇಂದ್ರಿಕೃತವಾಗುವಂತೆ ಮಾಡುವುದು ಕಂಡುಬರುತ್ತದೆ."

ಈ ಮೇಲಿನ ಎಲ್ಲಾ ಲಕ್ಷಣಗಳನ್ನು ಕೃಷಿ ಕೂಲಿಕಾರರ ಮಹಿಳೆಯರು ಹೊಂದಿದ್ದಾರೆ. ಸ್ಥಳೀಯವಾಗಿ ದುಡಿಯುವುದರಿಂದ ಹೆಚ್ಚು ಮಹಿಳೆಯರು ಅನಕ್ಷರಸ್ಥರಾಗಿರುವುದರಿಂದ ಪೆಕ್ಸಿಬಲ್ ಹಾಗೂ ಬಡತನದಿಂದಾಗಿ ಎಲ್ಲಾ ಕ್ಷೇತ್ರದಲ್ಲಿ ಹೆಚ್ಚು ತೊಡಗಿಕೊಂಡಿದ್ದಾರೆ. ಬೇರೆ ದುಡಿಯುವುದರಿಂದ ಎಲ್ಲಾ ಅಸಂಘಟಿತ ವಲಯದ ಮಹಿಳೆಯರು ಅನುಭವಿಸಿ ಸಮಸ್ಯೆಗಳನ್ನು ಇವರು ಸಹ ಎದುರಿಸುತ್ತಿದ್ದಾರೆ. ಈ ಕೃಷಿ ಕೂಲಿಕಾರರ ಮಹಿಳೆಯರು ಅಸಂಘಟಿತ ಕ್ಷೇತ್ರದಲ್ಲಿ ಹೆಚ್ಚು ಕೇಂದ್ರೀಕೃತರಾಗಲು ಕಾರಣಗಳೆಂದರೆ.

೧. ಸಾಮಾನ್ಯವಾಗಿ ಹೆಣ್ಣುಮಕ್ಕಳನ್ನು ಅವರು ವಾಸಿಸುವ ಸ್ಥಳಗಳಿಂದ ಹೊರತುಪಡಿಸಿ ಬೇರೆ ಸ್ಥಳಗಳಿಗೆ ಕೆಲಸ ಮಾಡಲು ಕಳುಹಿಸುವುದಿಲ್ಲ. ಅವರ ಚಲನೆಯ ಮೇಲಿರುವ ನಿರ್ಬಂಧವು ಅವರು ತಾವು ವಾಸಿಸುವ ಸ್ಥಳದಲ್ಲೇ ಸಿಗುವಂತಹ ಕಡಿಮೆ ಕೂಲಿ, ಕೌಶಲ್ಯದ ಋತುಮಾನಕ್ಕೆ ಅನು ಗುಣವಾದ ನಿರಂತರ ದುಡಿಮೆ ನಿರೀಕ್ಷಿಸುವ ಕೆಲಸಗಳಲ್ಲಿ ತೊಡಗುತ್ತಾರೆ.

೨. ದುಡಿಯುವ ಮಹಿಳೆಯರ ವಯೋಮಿತಿಯನ್ನು ತೆಗೆದುಕೊಂಡರೆ ಸಾಮಾನ್ಯವಾಗಿ ೧೫-೪೦ ವರ್ಷದ ಮಹಿಳೆಯರು ದುಡಿಮೆಯಲ್ಲಿ ತೊಡಗಿರುವುದು ಕಂಡುಬರುತ್ತವೆ. ಈ ವಯಸ್ಸು ಅವರ ಸಂತಾನೋತ್ಪತ್ತಿಯ ಅವಧಿಯೂ ಆಗಿರುತ್ತದೆ. ಸಂತಾನೋತ್ಪತ್ತಿ ಹಾಗೂ ಕುಟುಂಬದ ಜವಾಬ್ದಾರಿ ಅವರನ್ನು ಹೊರಗಡೆ ನಿರಂತರ ನಿಯಮಿತ ಕೆಲಸಗಳಲ್ಲಿ ತೊಡಗಲು ಬಿಡುವುದಿಲ್ಲ. ತಮ್ಮ ಅನುಕೂಲತೆಗೆ ತಕ್ಕಂತೆ ಫ್ಲೆಕ್ಸಿಬಲ್ ಗುಣವುಳ್ಳ ಕೆಲಸಗಳಲ್ಲಿ ತೊಡಗುತ್ತಾರೆ.

೩. ಕೃಷಿಕೂಲಿಕಾರರ ಅನಕ್ಷರತೆ, ಶಿಕ್ಷಣ ತರಬೇತಿ ಹಾಗೂ ಕೌಶಲ್ಯದ ಕೊರತೆಯಿಂದ ಮಹಿಳೆಯರು ಅಸಂಘಟಿತ ಕ್ಷೇತ್ರದಲ್ಲಿರುವ ಸ್ಪರ್ಧಾತ್ಮಕ ಕೆಲಸಗಳನ್ನು ಪಡೆಯುವುದು ಕಷ್ಟವಾಗುತ್ತದೆ. ಮೇಲಿನ ಅಪೇಕ್ಷೆಗಳನ್ನು ನಿರೀಕ್ಷಿಸಿದ ಅಸಂಘಟಿತ ಕ್ಷೇತ್ರ ಸುಲಭವಾಗಿ ಮಹಿಳೆಯರನ್ನು ತನ್ನತ್ತ ಸೆಳೆಯುತ್ತದೆ. ಅಥವಾ ಮಹಿಳೆಯರು ಸುಲಭವಾಗಿ ಆ ವಲಯವನ್ನು ಪ್ರವೇಶಿಸುತ್ತಾರೆ.

೪. ಸಂಘಟಿತ ಕ್ಷೇತ್ರವನ್ನು ಪ್ರವೇಶಿಸಲಾಗದೆ ಅಂದರೆ ಕಡ್ಡಾಯ ಮತ್ತು ಅಪ್ರೇರಣೆಯ ಪೂರೈಕೆಗಳನ್ನು ಸಾಕ್ಷರತೆ, ಕನಿಷ್ಠ ವಿದ್ಯಾರ್ಹತೆ, ಅನುಭವ, ಕಾರ್ಯಕ್ಷಮತೆ, ಕೌಶಲ್ಯ ತರಬೇತಿಗಳನ್ನು ಪೂರೈಸಲಾಗದೆ ಅಸಂಘಟಿತ ವಲಯಕ್ಕೆ ಹೋಗುತ್ತಾರೆ. ಅಲ್ಲದೆ ಅದು ತಗೆದುಕೊಳ್ಳುವ ದೀರ್ಘಸಮಯ ಲಿಖಿತ ಪರೀಕ್ಷೆ, ಸಂದರ್ಶನ ಮತ್ತು ಇತರ ಪ್ರಕ್ರಿಯೆಗಳಿಗೆ ಕಾರ್ಯ ಸಾಧ್ಯವಾಗದೆ ಹಂಗಾಮಿ ಅಥವಾ ಗುತ್ತಿಗೆ ಆದಾರದ ಮೇಲೆ ಮಹಿಳೆಯರು ಕೆಲಸಗಳಲ್ಲಿ ತೊಡಗುತ್ತಾರೆ.

೫. ಮಹಿಳೆಯರ ಶ್ರಮದ ಬೇಡಿಕೆ ಮತ್ತು ಪೂರೈಕೆಗಳನ್ನು ತೆಗೆದುಕೊಂಡರೆ ಪೂರೈಕೆ ಆರ್ಥಿಕವಾಗಿರುವುದರಿಂದ ಬೇಡಿಕೆ ಕಡಿಮೆಯಾಗುತ್ತದೆ. ಬೇಡಿಕೆ ಕಡಿಮೆಯಾದಾಗ ಅವರ 'ಚೌಕಾಶಿಶಕ್ತಿ'ಯು ಕಡಿಮೆಯಾಗಿ ಕೌಶಲ್ಯರಹಿತ ಕೆಲಸಗಳಲ್ಲಿ ಕಡಿಮೆ ಕೂಲಿಗೆ ದುಡಿಯಬೇಕಾಗುತ್ತದೆ.

[illegible]

[illegible]

[illegible]

[illegible]

೬. ಸರ್ಕಾರದ ಕೃಷಿ ನೀತಿ, ಭೂಕಾಯ್ದೆ, ಪರಿಸರನಾಶ, ಆರ್ಥಿಕ ಹಾಗೂ ಅಭಿವೃದ್ಧಿ ಕಾರ್ಯನೀತಿ ಯೋಜನೆ ಹಾಗೂ ಚಟುವಟಿಕೆಗಳು ಜನರನ್ನು ಭೂರಹಿತರನ್ನಾಗಿ ಮಾಡುತ್ತದೆ. ಆ ಮಾತ್ರವಲ್ಲ ಅವರನ್ನು ಸ್ಥಳಾಂತರಗೊಳಿಸುತ್ತದೆ, ನಿರುದ್ಯೋಗಿಗಳನ್ನಾಗಿಸಿ ಬಡತನಕ್ಕೆ ತಳ್ಳುತ್ತದೆ. ಇವುಗಳಿಂದ ಹೆಚ್ಚು ಸಂಕಷ್ಟಕೊಳಗಾಗುವ ಮಹಿಳೆಯರು ದುಡಿಯುವುದು ಅನಿವಾರ್ಯವಾಗಿ ಯಾವುದೇ ಕೆಲಸ ಮಾಡಲು ಮುಂದಾಗುತ್ತಾರೆ.

೭. ಇತ್ತೀಚಿನ ತಂತ್ರಜ್ಞಾನ ಬೆಳವಣಿಗೆ, ಆಧುನೀಕರಣ, ಹೊಸ ಆರ್ಥಿಕನೀತಿ, ಜಾಗತೀಕರಣದಂಥ ಪ್ರಕ್ರಿಯೆಗಳು ಮಹಿಳೆಯರನ್ನು ಅಸಂಘಟಿತ ಕ್ಷೇತ್ರಕ್ಕೆ ತಳ್ಳುತ್ತಿವೆ.

ಈ ಕಾರಣಗಳಿಂದಾಗಿ ಮಹಿಳೆಯರು ಅಸಂಘಟಿತವಾದರೂ ಜೀವನಕ್ಕೆ ಬೇಕಾದ ಅವಶ್ಯಕ ವಸ್ತುಗಳ ಪೂರೈಕೆಗಾಗಿ ಕೃಷಿ ಕೂಲಿಯಾಳುಗಳಾಗಿ ಮಹಿಳೆಯರು ಗೊಬ್ಬರ ಹಾಕುವುದು, ಬೀಜಬಿತ್ತನೆ, ಬೆಳೆಕೊಯ್ಲು ಮಾಡುವುದು ಇಂತಹ ಕೆಳಮಟ್ಟದ ಕೆಲಸಗಳಲ್ಲಿ ತೊಡಗಿದ್ದಾರೆ. ಅಸಂಘಟಿತರಾದ್ದವರಿಂದ ಯಾವುದೇ ಸಾಮಾನ್ಯವಾಗಿ ಜಾಗತಿಕ ಸಂದರ್ಭದಲ್ಲಿ ಇಂದು ರೈತರು ತಮ್ಮ ಹೊಲಗದ್ದೆಗಳಲ್ಲಿ ಕೆಲಸ ಕಾರ್ಯಗಳಿಗೆ ಮಹಿಳಾ ಕೂಲಿಕಾರರ ಬದಲಾಗಿ ಯಂತ್ರಗಳ ಮೊರೆಹೋಗಿದ್ದಾರೆ. ಯಂತ್ರದ ಮೊರೆ ಹೋಗುವುದರಿಂದ, ದಿನಾಲು ಕೂಲಿಯನ್ನೇ ನಂಬಿ ಬದುಕುತ್ತಿದ್ದ ಇಲ್ಲಿಯ ಮಹಿಳೆಯರ ಸ್ಥಿತಿ ತುಂಬ ಗಂಭೀರವಾಗಿದೆ.

### ೪.೨. ವೇತನ ತಾರತಮ್ಯ

ನಮ್ಮ ಭಾರತೀಯ ಸಂವಿಧಾನದಲ್ಲಿ ವೇತನ ತಾರತಮ್ಯ ಮಾಡಬಾರದೆಂದು "ಸಮಾನ ಕೆಲಸಕ್ಕೆ ಸಮಾನ ವೇತನ" ಕಾಯ್ದೆಯನ್ನು ಕಲಂ ೧೬ರಲ್ಲಿ ಜಾರಿಗೆ ತಂದಿದೆ. ಆದರೆ ಅದು ಈ ಕೃಷಿ ಕ್ಷೇತ್ರದಲ್ಲಿ ಪಾಲನೆಗೊಳ್ಳುತ್ತಿಲ್ಲ. ಕೈಗಾರಿಕರಣ ಮತ್ತು ತಾಂತ್ರಿಕ ವಲಯದ ಬೆಳವಣಿಗೆಯಿಂದ ಮಹಿಳೆಯರಿಗೆ ಕೆಲಸ ಇಲ್ಲದಂತಾಗಿದೆ. ಜೊತೆಗೆ ಅವರು ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಲು ಚಾಲನಾ ಸ್ವಾತಂತ್ರ್ಯ ಇಲ್ಲದ ಕಾರಣ ಸಿಗುವ ಸ್ಥಳೀಯ ಕೆಲಸಗಳಲ್ಲೇ ತೊಡಗಬೇಕಾಗಿದೆ. ಹೀಗಾಗಿ ಸಿಕ್ಕ ಕೂಲಿಗೆ ದುಡಿಯಲು ಮಹಿಳೆಯರೆ ಮುಂದಾಗುತ್ತಾರೆ. ಆದರೆ ಪುರುಷರು ಕಡಿಮೆ ಕೂಲಿ ದೊರೆಯುವುದಾದರೆ ಬೇರೆಡೆ ವಲಸೆ ಹೋಗುತ್ತಾರೆ. ಕೃಷಿ ಕ್ಷೇತ್ರದಲ್ಲಿ ಕೆಲವೊಂದು ಕೆಲಸಗಳು ಗಂಡಸರಿಗೆ ಮೀಸಲಾಗಿದ್ದರಿಂದ ಅವರು ನೀರಿಕ್ಷಿಸಿದಷ್ಟು ಕೂಲಿ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಾರೆ. ಇದರಿಂದ ಮಹಿಳೆಯರು ವೇತನ ತಾರತಮ್ಯಕ್ಕೆ ಒಳಗಾಗುತ್ತಾರೆ.

ಬಡತನವು ಬಹಳ ಹೆಚ್ಚಾಗಿರುವ ದೇವದುರ್ಗ ತಾಲೂಕಿನಲ್ಲಿ ಕೂಲಿ ಪ್ರಮಾಣ ಕಡಿಮೆ. ಹೀಗಾಗಿ ಕುಟುಂಬ ಸಮೇತ ಬೇರೊಂದುಕಡೆ ವಲಸೆ ಹೋಗುವರು, ಅಲ್ಲಿಯೂ ಸಹ ಕೂಲಿ ನೀಡುವುದರಲ್ಲಿ ತಾರತಮ್ಯವೆಸಗುವರು. ಪುರಷರಿಗೆ ಬೇರೆ, ಮಹಿಳೆಯರಿಗೆ ಬೇರೆ ಕೂಲಿ ನೀಡುವರು. ಹೀಗಾಗಿ ಸರ್ಕಾರಿ ಕೆಲಸ ಕಾರ್ಯಗಳನ್ನು ತೊರೆದು ಕೆಳಹಂತದಲ್ಲಿ ಕೂಲಿ ಕೆಲಸಗಳಲ್ಲಿ ಸಾಮಾನ್ಯವಾಗಿ ಈ ರೀತಿಯ ತಾರತಮ್ಯ

[illegible]

ಸಹಜವಾಗಿ ಗೋಚರಿಸುತ್ತವೆ. ಇದರಿಂದ ನಾವು ಸೂಕ್ಷ್ಮವಾಗಿ ಅವಲೋಕಿಸಿದರೆ ಇಂದು ಮಹಿಳೆ ಪ್ರತಿಯೊಂದು ವಲಯದಲ್ಲೂ ಒಂದಲ್ಲ ಒಂದು ರೀತಿಯಲ್ಲಿ ತುಳಿತಕ್ಕೆ ಒಳಗಾಗಿದ್ದಾಳೆ.

ಸಾಮಾನ್ಯವಾಗಿ ಗಂಡಸರು ಮಾಡುವ ಕೆಲಸಗಳನ್ನು ಮಹಿಳೆಯರು ಮಾಡಿದಾಗ್ಯೂ ಅವರಿಗೆ ದೊರೆಯುವ ಕೂಲಿ ಕಡಿಮೆಯೇ ಇರುತ್ತದೆ. ಅತಿಯಾದ ಬಡತನ ಕೃಷಿ ಮಹಿಳಾ ಕೂಲಿಕಾರರಿಗೆ ಬಹಳಷ್ಟು ಅನಾನುಕೂಲತಗಳಿವೆ. ಕೂಲಿಕಾರರಿಗೆ ವೇತನದಲ್ಲಿ ಪುರುಷನಷ್ಟು ಕೂಲಿ ಮಹಿಳೆಯರಿಗೆ ಸಿಗುವುದಿಲ್ಲವೆಂದು ಹೇಳಬಹುದು.

## ೪.೩. ಅನಾರ್ಯೋಗದ ಸಮಸ್ಯೆಗಳು

ಸಾಮಾನ್ಯವಾಗಿ ಈ ಮಹಿಳೆಯರು ೭ರಿಂದ ೮ ತಾಸುಗಳವರೆಗೆ ಕೃಷಿ ಕೆಲಸಗಳಲ್ಲಿ ತೊಡಗುತ್ತಾರೆ. ಹೊಲದಲ್ಲಿ ಬೇಸಾಯದ ಜೊತೆ ಇತರೆ ಕೆಲಸದಲ್ಲಿ ಬೆರೆಯುತ್ತಾರೆ. ಬಿಸಿಲು, ಚಳಿ, ಮಳೆ ಎನ್ನದೆ ಸತತವಾಗಿ ದುಡಿಯುವುದರಿಂದ ಆಧಿಕ ಶ್ರಮ ಉಂಟಾಗುತ್ತದೆ. ಗರ್ಭಿಣಿ ಅವಸ್ಥೆಯಲ್ಲಿಯ ಮಹಿಳೆಯರು ಕೃಷಿ ಕೆಲಸದಲ್ಲಿ ತೊಡಗಿರುತ್ತಾರೆ. ಇದು ಅದರ ಜೀವನಕ್ಕೆ ಅನಿವಾರ್ಯವಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಮಗುವಿನ ಬೆಳವಣಿಗೆ ಕುಂಠಿತಗೊಳ್ಳುವ ಸಂಭವವು ಇರುತ್ತದೆ. ಅತಿಯಾದ ಬಿಸಿಲು ಹೊಟ್ಟೆಯ ಮೇಲೆ ಬಿದ್ದಾಗ ಅದು ಬ್ರೂಣಕ್ಕೆ ತೊಂದರೆಯನ್ನುಂಟು ಮಾಡುತ್ತದೆ. ಎಷ್ಟೋ ಸಾರಿ ಹೊಲಕ್ಕೆ ಹೋದ ಸಂದರ್ಭದಲ್ಲೇ ಹೆರಿಗೆಗಳಾಗುತ್ತವೆ. ಅದು ವೈಜ್ಞಾನಿಕವಾಗಿಲ್ಲದೆ ಅದರಿಂದ ಉಂಟಾಗುವ ತುಂಬಲಾರದ ಅನಾರೋಗ್ಯ ಆ ಮಹಿಳೆಯರಿಗೆ ಜೀವನ ಪರ್ಯಂತ ಕಾಡುತ್ತವೆ.

ಸಾಮಾನ್ಯವಾಗಿ ಎಲ್ಲಾ ವಯಸ್ಸಿನ ಮಹಿಳೆಯರು ಕೃಷಿ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ತಮ್ಮ ವಯಸ್ಸಿಗೆ ಮೀರಿದ ಕೆಲಸಗಳನ್ನು ಮಾಡಿದಾಗ ದೈಹಿಕ ತೊಂದರೆಗಳು ಉಂಟಾಗುತ್ತವೆ. ಸತತವಾಗಿ ಕೃಷಿ ಆಳುಗಳಾಗಿ ದುಡಿಯುವ ಮಹಿಳೆಯರಿಗೆ ಬೆನ್ನು, ಸೊಂಟ ನೋವು, ಕತ್ತು ನೋವುಗಳು ಕಾಣುತ್ತಲೇ ಇರುತ್ತವೆ. ಬರುವ ಕೂಲಿ ದಿನದ ಊಟಕ್ಕೆ ಸಾಲದಿದ್ದಾಗ ಇಂತಹ ಅನಾರೋಗ್ಯವನ್ನು ಸುಧಾರಿಸಿಕೊಳ್ಳುವುದು ಸರಿ. ಬಡತನ ಎಂತಹ ಸ್ಥಿತಿಯಲ್ಲಿದ್ದರೂ ದುಡಿಯುವಂತೆ ಪ್ರೇರಿಪಿಸುತ್ತದೆ. ಜೊತೆಗೆ ಅನಾರೋಗ್ಯಕ್ಕೆ ಆಹ್ವಾನ ನೀಡುತ್ತದೆ. ಮನೆಯ ಕೆಲಸ ಕೃಷಿಕೆಲಸ ಹಾಗೂ ಸಂತಾನೋತ್ಪತ್ತಿಯ ಕೆಲಸ, ಈ ಮೂರು ಕೆಸಗಳಿಂದ ಮಹಿಳೆ ತತ್ತರಿಸಿ ಹೋಗುತ್ತಾಳೆ. ಸರಿಯಾದ ಹೊತ್ತಿಗೆ ಹೊಟ್ಟೆ ತುಂಬಾ ಊಟ ಸಿಗದೆ ಪೌಷ್ಠಿಕಾಂಶದ ಕೊರತೆಯಿಂದ ಅನಾರೋಗ್ಯ ಹೆಚ್ಚುತ್ತಲೇ ಇರುತ್ತವೆ.

ಈ ರೀತಿಯ ಅನಾರೋಗ್ಯದಿಂದ ಕೂಲಿಕಾರ ಸ್ತ್ರೀಗೆ ಜನಿಸಿದ ಮಕ್ಕಳಿಗೆ ಸರಿಯಾದ ಪಾಲನೆ ಪೋಷಣೆಯಿಲ್ಲದೆ ಮತ್ತು ಪೌಷ್ಠಿಕ ಆಹಾರದ ಕೊರತೆಯಿಂದ ಮಕ್ಕಳ ಬೆಳವಣಿಗೆ ಕುಂಟಿತವಾಗುತ್ತದೆ.

## ಭೂಮಾಲೀಕರಿಂದ ಕೃಷಿ ಕೂಲಿಕಾರರ ಮಹಿಳೆಯ ಮೇಲೆ ಶೋಷಣೆ

ಮಹಿಳೆಯರ ಮೇಲಿನ ಶೋಷಣೆ ಇಂದು ನಿನ್ನೆಯಲ್ಲ ಕೇವಲ ಹೊಡೆಯುವುದು, ಬಯ್ಯುವುದು, ಮಾತ್ರವಲ್ಲದೇ ಲೈಂಗಿಕ ಹಿತಾಸಕ್ತಿಗಾಗಿ ಪುರುಷರು ಆಹ್ವಾನ ನೀಡುವುದು ಕೂಡ ದೌರ್ಜನ್ಯ, ಶೋಷಣೆ

ಎನಿಸಿಕೊಳ್ಳುತ್ತದೆ. ಎಲ್ಲಾ ಕ್ಷೇತ್ರಗಳಲ್ಲೂ ಇಂತಹ ಕಾರ್ಯ ಸರ್ವೇಸಾಮಾನ್ಯವಾಗಿ ಹೋಗಿದೆ. ಇದರಿಂದ ಮಹಿಳೆಯರು ಮುಕ್ತಿ ಹೊಂದಲು ಸಾಧ್ಯವಾಗುತ್ತಿಲ್ಲ. ಉನ್ನತ ಕ್ಷೇತ್ರದಿಂದ ಹಿಡಿದು ಕೆಳ ಹಂತದ ಕ್ಷೇತ್ರದಲ್ಲಿಯೂ ಮಹಿಳೆಯರು ಇಂತಹ ಶೋಷಣೆಗೊಳಗಾಗುತ್ತಿರುವುದು ಕಂಡು ಬರುತ್ತದೆ. ಇದು ಕೃಷಿ ವಲಯವನ್ನು ಬಿಟ್ಟಿಲ್ಲ ಸಾಮಾನ್ಯವಾಗಿ ಇಲ್ಲಿ ಮಹಿಳೆಯರು ತಮ್ಮ ಬಡತನವನ್ನು ದೂರಮಾಡಿಕೊಳ್ಳಲೆಂದು ದುಡಿಮೆಗೆ ಬಂದಿರುತ್ತಾರೆ. ಇಂತಹ ಸ್ಥಿತಿಯನ್ನೇ ಅನೇಕ ಮಾಲಿಕರು ದುರುಪಯೋಗ ಪಡಿಸಿಕೊಳ್ಳಲು ಮುಂದಾಗುತ್ತಾರೆ. ಇದಕ್ಕೆ ಯಾವುದೇ ಜಾತಿವರ್ಗದ ಮಹಿಳೆಯರು ಹೊರತಾಗಿಲ್ಲ. ತಮ್ಮ ಲೈಂಗಿಕ ಬಯಕೆಯ ಪೂರೈಕೆಗಾಗಿ ಭೂ ಮಾಲೀಕರು ಮಹಿಳೆಯರನ್ನು ಬಳಸಿಕೊಳ್ಳಲು ಇಚ್ಛಿಸುತ್ತಾರೆ. ಇದಕ್ಕೆ ಮಹಿಳೆಯರು ಒಪ್ಪದಿದ್ದಾಗ ಅವರ ಮೇಲೆ ಇಲ್ಲಸಲ್ಲದ ಆರೋಪ ಮಾಡಿ ಅಪಪ್ರಚಾರ ಮಾಡಿ, ಮಾನವನ್ನು ಹರಾಜು ಹಾಕುವ ಕೆಲಸವನ್ನು ಕೂಡ ಮಾಡುತ್ತಾರೆ. ಅಥವಾ ಸರಿಯಾಗಿ ಸಂಬಂಳ ಕೊಡದೆ ಹಿಂಸೆ ಮಾಡುತ್ತಾರೆ.

ಇಲ್ಲಿ ಭೂಮಾಲೀಕರು ಆಳುವವರು ಹಾಗೂ ಕೃಷಿ ಕೂಲಿ ಮಹಿಳೆಯರು ಆಳ್ವಿಕೆಗೊಳ ಪಡುವವರಾಗಿ ಕಂಡುಬರುತ್ತಾರೆ.

ಪ್ರತಿಯೊಬ್ಬ ವ್ಯಕ್ತಿಯಲ್ಲೂ ಸ್ವಾಭಿಮಾನ ಇದ್ದೇ ಇರುತ್ತದೆ. ದಿನಗೂಲಿ ಮಾಡಿದರೂ ಮಾನವಂತರಾಗಿಬಾಳುವ ಮಹಿಳೆಯರು ಪ್ರತಿದಿನ ಭೂಮಾಲೀಕರಿಂದ ಇಂತಹ ಶೋಷಣೆಗೊಳದಾಗ ಸಂಕಟದಲ್ಲಿ ಸಿಲುಕುತ್ತಾರೆ. ದುಡಿಮೆ ಬಿಟ್ಟರೆ ಜೀವನ ನಿರ್ವಹಣೆ ಬೇರೊಂದು ಕೆಲಸದಲ್ಲಿ ದುಡಿಯಲು ಹೋದರೆ ಇಂತಹ ಬೇರೆಯ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಥವಾ ಮನೆಯ ಗಂಡಸರಿಗೆ ಹೇಳಿದರೆ ಅನುಮಾನದ ಸುಳಿಗೆ ತಾವೇ ಸಿಲುಕುತ್ತೆವೆ ಎಂಬ ಭಾವನೆ, ಇವೆಲ್ಲವುಗಳಿಂದಲೂ ಮಹಿಳೆಯರು ಮಾನಸಿಕವಾಗಿ ತತ್ತರಿಸಿ ಹೋಗುತ್ತಾರೆ. ಕೊನೆಯ ಉಸಿರಿರುವರೆಗೂ ಸಾಲ ಋಣದಿಂದ ಪಾರಾಗುವುದಿಲ್ಲ ಎಂದು ತಿಳಿದುಬರುತ್ತದೆ. ಗಂಡನ ಮನೆಯಲ್ಲಿ ದುಡಿದು ತಿನ್ನುವುದು ಮಾಮೂಲಿ, ಮುಂದೆ ಆಕೆಯು ತನ್ನ ತಾಯಿ ಎದುರಿಸಿದಂತೆ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಕೇವಲ ಭೂ ಮಾಲೀಕರಿಂದಲ್ಲ ತಮ್ಮೊಂದಿಗೆ ಕೆಲಸ ಮಾಡುವ ಪುರುಷ ಕೂಲಿಕಾರರು ಸಹ ಇವರ ಮೇಲೆ ಅನೇಕ ರೀತಿಯಲ್ಲಿ ಶೋಷಣೆಗೆ ಒಳಪಡಿಸುತ್ತಾರೆ.

### ೪.೪. ಮನೆಯಲ್ಲಿ ತೊಂದರೆಗಳು

ಮಹಿಳಾ ಕೂಲಿಕಾರರಿಗೆ ವರಮಾನ ತುಂಬ ಕಡಿಮೆ. ತಾವು ಕೂಲಿ ಮಾಡಿದ್ದು ಹೊಟ್ಟೆಗೆ ಬಟ್ಟೆಗೆ ಸಾಲದು, ಆದರೂ ಇವರಿಗೆ ದಿನನಿತ್ಯ ಕೂಲಿ ಕೆಲಸ ದೊರೆತರೆ ಮತ್ತೆ ಕೆಲವು ದಿನ ದೊರೆಯದೇ ಇರಬಹುದು, ಇದರಿಂದ ಕುಟುಂಬದ ನಿರ್ವಹಣೆ ಅಸಾಧ್ಯವಾಗುತ್ತದೆ. ತಾವು ದುಡಿದ ಅಲ್ಪ ಹಣದಲ್ಲಿ ಪುರುಷ ಕೂಲಿಕಾರರು ಬಹುಪಾಲು ಮದ್ಯಪಾನಕ್ಕೆ ವ್ಯಯಮಾಡುವರು, ಅಲ್ಲದೇ ಮನೆಯ ಯಜಮಾನ ಜೂಜಾಟ, ವಿಪರೀತ ಸಾಲ ಮಾಡಿ ಸಾಲಿಗರ ಹಿಡಿತದಿಂದ ಇವರಿಗೆ ಮುಕ್ತಿಯೇ ಇಲ್ಲದಂತಾಗುತ್ತಾರೆ.

[illegible]

[illegible]

[illegible]

[illegible]

ಇವರಲ್ಲಿ ಉಳಿತಾಯ ಸಾಮಾನ್ಯವಾಗಿ ಕಡಿಮೆ. ಏಕೆಂದರೆ ಇವರು ಗಳಿಸುವ ಹಣವನ್ನು ಆಹಾರ, ಬಟ್ಟೆ, ಸೌದೇ, ಮನೆ ಔಷದಿ, ಹಬ್ಬ ಹರಿದಿನಗಳಲ್ಲಿಯೇ ವ್ಯಯ ಮಾಡುವರು. ಇದರಿಂದ ಇವರಲ್ಲಿ ಉಳಿತಾಯ ಮಾಡುವ ವ್ಯವಸ್ಥೆ ಕಂಡುಬರಲಾರದು.

ಮಹಿಳಾ ಕೂಲಿಕಾರರು ದೈಹಿಕವಾಗಿ ಮಾನಸಿಕವಾಗಿ ತುಂಬಾ ಯಾತನೆಯನ್ನು ಅನುಭವಿಸುತ್ತಾರೆ. ಗ್ರಾಮೀಣ ಪ್ರದೇಶದ ಹೊಲ ಗದ್ದೆಗಳಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಮಹಿಳೆಯ ಒಂದೊಂದು ಸಮಸ್ಯೆಯನ್ನು ಕೇಳಿದರೆ ಮೈ ನಡುಕವಾಗುತ್ತದೆ. ಕುಟುಂಬದಲ್ಲಿ ಗಂಡ, ಅತ್ತೆ, ಮಾವ, ಮಕ್ಕಳು ಕೊಡುವ ಹಿಂಸೆಯನ್ನು ನಾನು ಕ್ಷೇತ್ರಕಾರ್ಯದ ಮೂಲಕ ಮಹಿಳೆಯನ್ನು ಸಂದರ್ಶಿಸಿದಾಗ ಇವುಗಳಿಂದ ಮುಕ್ತಿಯೇ ಸಿಗದಂತಹ ಪರಿಸ್ಥಿತಿಯಿದೆ. ಕಾಯಿದೆ ಕಾನೂನುಗಳ ಬಗ್ಗೆ ಅರಿವಿಲ್ಲದ ಇವರು ಇವುಗಳಿಂದ ರಕ್ಷಣೆ ಪಡೆಯುವ ವಿಚಾರವು ದೂರದ ಮಾತೇ ಸರಿ. ಸಮಸ್ಯೆಗಳ ನೆರಳಲ್ಲಿ ದಿನವಿಡಿ ಜೀವನ ನಡೆಸುವ ಇವರ ಬದುಕು ಒಂದುಹೋರಾಟವೇ ಸರಿ ಎಂದು ಹೇಳಬಹುದು.

### ೪.೫. ಕುಟುಂಬ ಯೋಜನೆ

ಮಹಿಳಾ ಕೃಷಿ ಕೂಲಿಕಾರರ ಕುಟುಂಬಗಳಲ್ಲಿ ದೊಡ್ಡ ತಾಪತ್ರಯ ಎಂದರೆ ಜನಸಂಖ್ಯೆ. ಸಂತಾನ 'ದೇವರವರ' ಎಂದು ಬಾವಿಸುವುದು. ಹಾಗೂ ಹೆಚ್ಚು ಗಂಡು ಮಕ್ಕಳಿದ್ದರೆ ಮುಂದೊಂದು ದಿನ ದುಡಿಯುವ ಕೈಗಳಾಗುತ್ತವೆ ಎನ್ನುವ ಈ ನಂಬಿಕೆಯಿಂದ ಕುಟುಂಬ ಯೋಜನೆ ಮಾಡುವುದಿಲ್ಲ. ಜನನ ನಿಯಂತ್ರಣಕ್ಕೆ ಮಹತ್ವ ನೀಡದೆ ಮಕ್ಕಳ ಸಂಖ್ಯೆ ಹೆಚ್ಚಾಗಿ ಸಮಸ್ಯೆಗಳ ಸುರುಳಿಯಲ್ಲಿ ಸಿಲುಕುತ್ತಾರೆ. ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಸರಿಯಾದ ತಿಳುವಳಿಕೆ ಸಾಮಾನ್ಯವಾಗಿ ಕಡಿಮೆ. ಅನಕ್ಷರಸ್ತರಾದ ಇವರಿಗೆ ಮಕ್ಕಳು ಪಡೆಯುವುದೆಂದರೆ ಅದೊಂದು ಸೌಭಾಗ್ಯವೇ ಸರಿ. ಹೀಗಾಗಿ ಇಲ್ಲಿಯ ಮಹಿಳೆಯರು ಮಕ್ಕಳನ್ನು ಹೇರುವ ಯಂತ್ರವಾಗಿ ಬಿಟ್ಟಿದ್ದಾರೆ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುವುದಿಲ್ಲ ಎಂಬ ತತ್ವ ಇವರಲ್ಲಿದೆ.

### ೪.೬. ವರದಕ್ಷಿಣೆ ಪದ್ಧತಿ

ವರದಕ್ಷಣೆ ಪದ್ಧತಿ ಇತ್ತೀಚಿಗಂತೂ ಸಾಮಾಜಿಕ ಪಿಡುಗಾಗಿ ಬಡವರನ್ನು ಕಾಡುತ್ತದೆ. ಆದರೆ ಬಡವರು ಇದನ್ನು ಎದುರಿಸದೆ ಎಲ್ಲಾದರೂ ಸಾಲ ಮಾಡಿ ವರದಕ್ಷಿಣೆ ಕೊಡುತ್ತಾರೆ. ಕಾರಣ ವರದಕ್ಷಣೆ ಕೊಡುವುದರಿಂದ ತಮ್ಮ ಮಗಳು ಸುಖವಾಗಿರುತ್ತಾಳೆ ಎಂಬ ನಂಬಿಕೆಯಿಂದಾಗಿ, ಆಗ ಮಹಿಳೆ ತನ್ನ ಮದುವೆಗಿಂತ ಪೂರ್ವದಲ್ಲಿಯೇ ತಾನು ಕೂಡ ಹೊಲ ಗದ್ದೆಗಳಲ್ಲಿ ದುಡಿದು ಬಂದ ಹಣದಿಂದ ತನಗೆ ಬೇಕಾದ ಒಡವೆ ಮಾಡಿಸಿಕೊಳ್ಳುತ್ತಾಳೆ. ಮನೆಯಲ್ಲಿಕೊಡುವ ಹಿಂಸೆಯನ್ನು ತಾಳಲಾರದೆ ಎಷ್ಟೇ ಸಾರಿ ಕೆಲವು ಮಹಿಳೆಯರು ಉಪವಾಸವಾಗಿಯೇ ಕೂಲಿ ಕೆಲಸದಲ್ಲಿ ತೊಡಗಿ ಮನೆಗೆ ಹೋಗುವ ಪರಿಪಾಠವಿದೆ. ಈ ರೀತಿಯ ಕೆಲವೊಂದು ಕಿರುಕುಳಗಳನ್ನು ತಾಳಲಾರದೇ ಎಷ್ಟೋ ಮಹಿಳಾ ಕೂಲಿಕಾರರು ವಿಚ್ಛೇದನ ಪಡೆದಿದ್ದಾರೆ. ಮತ್ತೇ ಕೆಲವರು ಸಾವಿಗೂ ಶರಣರಾಗಿದ್ದಾರೆ.

ಮಹಿಳೆಯರಿಗೆ ಕೌಟುಂಬಿಂಕ ಹಿಂಸೆ ಇನ್ನೂ ಹೊಲ-ಗದ್ದೆಗಳಲ್ಲಿ ದುಡಿಯುವ ಪುರುಷರು ಊಟ ಇಲ್ಲದಿದ್ದರೂ ನೆಡೆಯುತ್ತದೆ ಆದರೆ ಚಟ ಮಾತ್ರ ಇರಲೇಬೇಕು ಎನ್ನುವ ಸಿದ್ಧಾಂತಕ್ಕೆ ಬದ್ಧರಾಗಿರುತ್ತಾರೆ. ಇವರಲ್ಲಿ ಮಟ್ಕ, ಇಸ್ಪೀಟ್, ಕುಡಿತದ ದುಶ್ಚಟಗಳು ಮನೆಮಾಡಿರುತ್ತವೆ. ಗಂಡ ದುರ್ವ್ಯಸನಿಯಾಗಿದ್ದರಂತೂ ಅವನ ಹೆಂಡತಿಯ ಪಾಡು ಹೇಳತೀರದು, ಅಂಥ ಗಂಡ ಮಹಾಶಯನು ದುಡಿದದ್ದು ಸಾಲದೇ ದಣಿಯ ಬಳಿ ಸಾಲವನ್ನು ಮಾಡುತ್ತಾನೆ. ಅಂತಹ ಸಂದರ್ಭದಲ್ಲಿ ಹೆಂಡತಿ ದುಡಿದು ಕುಟುಂಬ ನೆಡಸಬೇಕಾಗುತ್ತದೆ ಮತ್ತು ಸಾಲತೀರಿಸಬೇಕಾಗುತ್ತದೆ. ಕೆಲವು ಕುಟುಂಬಗಳಲ್ಲಂತೂ ಕ್ರೂರಿ ಗಂಡನು ಹೆಂಡತಿ ತಂದ ಹಣವನ್ನು ಅವಳಿಗೆ ಹೊಡೆದು ಬಡಿದು ಕಸಿದುಕೊಳ್ಳುತ್ತಾನೆ ಇಲ್ಲವೇ ಕದ್ದು ಕೊಂಡು ಹೋಗಿ ತನ್ನ ಚಟಗಳಿಗೆ ಬಳಸುತ್ತಾನೆ. ಕುಡಿದು ಮನೆಗೆ ಬಂದ ನಂತರ ಹಾಗೂ ಬರುವ ಪತಿಯಿಂದ ಮಾನಸಿಕ ದೈಹಿಕ ಹಿಂಸೆಯನ್ನ ಅನುಭವಿಸುತ್ತಿದ್ದಾರೆ. ಈ ರೀತಿಯಾಗಿ ಮಹಿಳಾ ಕೃಷಿ ಕೂಲಿಕಾರರು ಸಮಸ್ಯೆಯಿಂದ ಬಳಲುತ್ತಾರೆ.

### ೪.೭. ಹಳದಿ ಕಾರ್ಡ್ ಸಮಸ್ಯೆ

ಬಡಜನರು ಆಹಾರದ ಸಮಸ್ಯೆ ಎದುರಿಸಬಾರದೆಂಬ ಕಾರಣಕ್ಕಾಗಿಯೇ ಸರಕಾರದವರು ರೇಶನ್‌ಕಾರ್ಡ್ ಆಹಾರದ ಮೇಲೆ ಕಡಿಮೆ ಬೆಲೆಗೆ ಅಕ್ಕಿ, ಗೋದಿ, ಸಕ್ಕರೆ, ಸೀಮೆ ಎಣ್ಣೆ, ನೀಡುತ್ತಿದ್ದಾರೆ. ಆದರೆ ಮಹಿಳಾ ಕೃಷಿಕೂಲಿಕಾರರಿಗೆ ಹಳದಿ ಕಾರ್ಡ್ ಹೇಗೆ ಮಾಡಿಸಬೇಕೆಂಬ ಜ್ಞಾನವಿಲ್ಲದೆ ದುಬಾರಿ ಬೆಲೆಗೆ ದಾನ್ಯಗಳನ್ನು ಖರಿದೀಸುತ್ತಿದ್ದು, ಕಾರ್ಡ್‌ಗಾಗಿ ಕೆಲವೊಂದು ವ್ಯಕ್ತಿಗಳಿಗೆ ಹಣವನ್ನು ನೀಡಿದ್ದು ಅವರಿಂದ ಮೋಸಹೋಗಿದ್ದಾರೆ. ಇನ್ನು ಬಹಳಷ್ಟು ಕೂಲಿಕಾರರಿಗೆ ಹಳದಿ ಕಾರ್ಡೆ ಲಬಿಸಿಲ್ಲ.

ಸರ್ಕಾರ ಬಡಜನತೆಗೆ ಹೊಟ್ಟೆ ತುಂಬ ಅನ್ನ ದೊರಕಲಿ ಎಂಬ ಉದ್ದೇಶದಿಂದ ಈ ಹಳದಿಕಾರ್ಡ್‌ನ ವ್ಯವಸ್ಥೆ ಮಾಡಿದೆ. ಆದರೆ ಈ ಒಂದು ವ್ಯವಸ್ಥೆ ಉಳ್ಳವರಿಗೆ ನಿಲುಕಿದೆಯೇ ಹೊರತು ಬಡ ಜನಸಾಮಾನ್ಯರಿಗೆ, ನಿರ್ಗತಿಕರಿಗೆ ದೊರೆಯಲಾರದಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸಹ ಕೆಟ್ಟ ರಾಜಕೀಯದಿಂದ ಈ ಹಳದಿ ಕಾರ್ಡ್ ಶ್ರೀಮಂತರ ಪಾಲಾಗಿದೆ. ಇವರ ಮನೆಯಲ್ಲಿ ಪ್ರತಿಯೊಬ್ಬರ ಹೆಸರಲ್ಲಿ ಕಾರ್ಡ್‌ಗಳಿವೆ. ಆದರೆ ಕೂಲಿಕಾರರ ಮನೆಯಲ್ಲಿ ಆ ಕಾರ್ಡ್‌ನ್ನು ಪಡೆಯಬೇಕಾದರೆ ಹರಸಹಾಸ ಮಾಡಬೇಕಾಗುತ್ತದೆ.

ಈ ರೀತಿಯಾಗಿ ಮಹಿಳಾ ಕೃಷಿ ಕೂಲಿಕಾರರು ಇನ್ನೂ ಅನೇಕ ಸಮಸ್ಯೆಗಳು ಎದುರಿಸುತ್ತಿದ್ದಾರೆ ಮಹಿಳಾ ಕೂಲಿಕಾರರು ಹಲವಾರು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಎಂಬುದು ಅಧ್ಯಯನದಿಂದ ತಿಳಿದುಬರುತ್ತದೆ. ಮಹಿಳಾ ಕೂಲಿಕಾರ ಮಹಿಳೆ ಅಷ್ಟೊಂದು ಜವಾಬ್ದಾರಿಗಳನ್ನು ನೋವುಗಳನ್ನು ನುಂಗಿಕೊಂಡು ತನ್ನ ಬದುಕನ್ನು ಸಾಗಿಸುವಳು. ಕುಟುಂಬದಲ್ಲಿ ಎಲ್ಲಾ ಹಾಗುಹೋಗುಗಳ ಬಗೆಗೆ ಕಾಳಜಿ ವಹಿಸುವ ಮಹಿಳೆಗೆ ಅಲ್ಲಿ ಅಧಿಕಾರ ಇಲ್ಲದಂತಾಗಿದೆ. ಅದು ಏನೇ ಇದ್ದರೂ ಪುರುಷನೆದುರು ಇವಳ ಶ್ರಮಕ್ಕೆ, ದುಡಿಮೆಗೆ ಬೆಲೆಯಿಲ್ಲದಂತಾಗಿದೆ. ಈ ಅಂಶಗಳು ಗ್ರಾಮೀಣ ಪ್ರದೇಶದ ಕೂಲಿಕಾರರಲ್ಲಿ

[illegible]

[illegible]

[illegible]

ಕಂಡುಬರುವುದುಂಟು. ಮಹಿಳೆಯು ದುಡಿಮೆಯನ್ನು ಇಷ್ಟೊಂದು ಅವಲಂಬಿಸಿರುವುದನ್ನು ನೋಡಿದರೆ ಇವರನ್ನು ಕೇವಲ ದುಡಿಸಿಕೊಳ್ಳುವ ಮತ್ತು ಶೋಷಣೆಗೆ ಒಳಪಡಿಸಿದಂತಾಗಿದೆ. ಹೀಗಾಗಿ ಕೂಲಿಕಾರಳಾದ ಮಹಿಳೆಗೆ ಸರಿಯಾದ ಸಾಮಾಜಿಕ ಸಮಾನತೆಗಳಲ್ಲಿ ಸ್ವಾತಂತ್ರ್ಯಗಳಲ್ಲಿ ಆರ್ಥಿಕ ಭದ್ರತೆ ಇಲ್ಲದಂತಾಗಿದೆ ಹೀಗೆ ಉಸಿರುಗಟ್ಟಿಸುವ ವಾತವರಣದಲ್ಲಿ ಬದುಕನ್ನು ಸಾಗಿಸುವ ಮಹಿಳೆಯ ದುಡಿಮೆಯನ್ನು ಯಾರು ಪರಿಗಣಿಸಲಾರರು. ಅವರನ್ನು ಅನಕ್ಷರೆಂದು ಹೇಳುವರು.

ಹೊಲಗದ್ದೆಗಳಲ್ಲಿ ದುಡಿಯುವಂಥ ಮಹಿಳೆಯರ ಕೆಲಸವನ್ನು ನೆಚ್ಚಿಕೊಂಡ ಮಹಿಳೆಯರು ಹಲವು ಕಷ್ಟಗಳನ್ನು ಅನುಭವಿಸುತ್ತಿದ್ದರೂ ಅವರೇ ಪ್ರತಿಭಟನೆ, ಗಲಾಟೆ ಮಾಡದೆ ತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರ ಕಂಡುಕೊಳ್ಳುತ್ತಿದ್ದಾರೆ. ಬಗೆ ಹರಿಸಲಾಗದಂಥ ಸಮಸ್ಯೆಗಳನ್ನು ತಮ್ಮಲ್ಲೇ ನುಂಗಿಕೊಂಡು ಅದನ್ನು ಹೊರಜಗತ್ತಿಗೆ ತೋರಿಸಿಕೊಳ್ಳದೆ ಸಂತಸದಿಂದ ಕಾಲದೂಡುತ್ತಿದ್ದಾರೆ. ಕೆಲಸ ಮಾಡುವಾಗ ಹಾಡು ಪಾಡುಗಳನ್ನು ಹಾಗೂ ಹಾಡುತ್ತಾರೆ ಹೇಳುತ್ತಾ ಕಥೆಯೊಂದಿಗೆ ಕೆಲಸ ಮಾಡುವುದರೊಂದಿಗೆ ತಮ್ಮ ನೋವನ್ನು ನುಂಗಿಕೊಳ್ಳುತ್ತಿದ್ದಾರೆ. ಒಟ್ಟಾರೆಯಾಗಿ ಮಹಿಳೆಯು ಪ್ರಾಚೀನ ಕಾಲದಿಂದ ಹಿಡಿದು ಇವತ್ತಿನವರೆಗೂ ಈ ಸಮಾಜದಲ್ಲಿ ಸ್ವಾಲಂಬಿಯಾಗಿ ಬದುಕಲು ಬಿಡಲಾರದಂತಹ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾಳೆ. ಪುರುಷ ಪ್ರಧಾನ ವ್ಯವಸ್ಥೆಯಿಂದ ಬಿಡಿಸಿಕೊಳ್ಳಲಾಗಿದೆ ಪುರುಷನಿಗಿಂತ ಹೆಚ್ಚು ಶ್ರಮಹಿಸಿ ಕುಟುಂಬದ ನಿರ್ವಹಣೆಯನ್ನು ನಿಭಾಹಿಸುತ್ತಾಲೆ. ತಾನು ಹುಟ್ಟಿನಿಂದ ಸಾಯುವತನಕ ಒಂದಿಲ್ಲೊಂದು ಸಮಸ್ಯೆಯ ಸುಳಿಯಲ್ಲಿ ಸಿಲುಕಿತನ್ನ ಮಾನಸಿಕ ಸ್ಥೈರ್ಯವನ್ನು ಸುಳಿಯಲ್ಲಿ ಸಿಲುಕಿ ಪರದಾಡುತ್ತಿರುವ ಮಹಿಳೆಗೆ ಯಾರಿಂದಲೂ ಸಹ ಪರಿಹರ ಸಿಗಲಿಕ್ಕಿಲ್ಲ ಸಿಗುವುದಿಲ್ಲ. ಸರ್ಕಾರ ಇಂದು ಮಹಿಳೆಯರಿಗಾಗಿ ಹಲವಾರು ಕಾಯ್ದೆ ಕಾನೂನುಗಳನ್ನು ಜಾರಿಗೆ ತಂದಿದ್ದರೂ ಸಹ ಅಂತರ ಕಾಯ್ದೆ ಕಾನೂನುಗಳು ಕೇವಲ ಉನ್ನತ ವರ್ಗದವರಿಗೆ ಅಕ್ಷರಸ್ಥರಿಗೆ ಉದ್ಯೋಗಿಗಳಿಗೆ, ಸೀಮಿತವೆಂಬಂತೆ ಕಾಣುತ್ತವೆಯೇ ಹೊರತು ಗ್ರಾಮೀಣ ಕೃಷಿ ಹೊಲಗದ್ದೆಗಳಲ್ಲಿ ಕೆಲಸ ಮಾಡುವಂತಹ ಬಡವರ ಪಾಲಿಗೆ ಈ ಎಲ್ಲಾ ಕಾಯ್ದೆ ಕಾನೂನು ನಿಯಮಗಳು ಇಲ್ಲದಂತಾಗಿವೆ. ಇಂದು ಎಷ್ಟೇ ಮಹಿಳೆಯರು ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ರೀತಿಯ ತೊಂದರೆಗಳಿಗೆ ಸಿಲುಕಿ ಅನುಭವಿಸಿದರೂ ಅವುಗಳನ್ನು ಹೇಳಿಕೊಳ್ಳಲಾರದೆ ಹೇಳಿಕೊಂಡರೂ ಅವುಗಳಿಗೆ ಪರಿಹರ ಸಿಗಲಾರದಂತಹ ಲಕ್ಷಣಗಳು ಕಂಡು ಬರುವುದರಿಂದ ತನ್ನ ನೋವನ್ನೇ ತಾನೇ ನುಂಗಿಕೊಂಡು ಬದುಕುತ್ತಿದ್ದಾಳೆ. ಹೀಗೆ ಅಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವ ಮಹಿಳೆಗೆ ಪರಿಹಾರ ಸಿಗದೆ ಸಮಸ್ಯೆಗಳು ಸಮಸ್ಯೆಗಳಾಗಿಯೇ ಉಳಿದಿವೆ.

[illegible]

## ಅಡಿಟಿಪ್ಪಣಿ


೧. ಕೃಷಿ ಬೆಳವಣಿಗೆ, ಲೇಖಕರು ಡಿ.ವೆಂಕಟರಾವ್, ಪು-೨೨-೨೪

೨. ಮಹಿಳಾ ಅಧ್ಯಯನ -೩, ಹೇಮಲತಾ ಎಚ್.ಎಂ, ಪು-೪೧-೪೪

೩. ಮಹಿಳಾ ಅಧ್ಯಯನ -೨, ಹೇಮಲತಾ ಎಚ್.ಎಂ, ಪು-೧೦೮-೧೦೯

೪. ಕೃಷಿ ಮಾರಾಟ ಸಂಪದ, ಲೇ, ಜಿ.ಶರಶ್ಚಂದ್ರರಾನಡೆ, ಪು-೫೨

೫. ಭಾರತದ ಮಹಿಳೆಯರ ಬದುಕು ಮತ್ತು ಹೋರಾಟ, (ಮೂಲ) ಮದುಕೋಕಿಲ, (ಅನು) ಹೇಮಲತ ಎಚ್.ಎಂ, ಪು-೩೯-೪೨

ಅಧ್ಯಾಯ - ಐದು

# ಆಧುನಿಕ ತಂತ್ರಜ್ಞಾನದಿಂದ ಮಹಿಳಾ ಕೂಲಿಕಾರರ ಮೇಲಾಗುವ ಪರಿಣಾಮಗಳು

[illegible]

[illegible]

[illegible]

### ಅಧ್ಯಾಯ - ಐದು

# ಆಧುನಿಕ ತಂತ್ರಜ್ಞಾನದಿಂದ ಮಹಿಳಾ ಕೂಲಿಕಾರರ ಮೇಲಾಗುವ ಪರಿಣಾಮಗಳು

ಚಾರಿತ್ರಿಕವಾಗಿ ಹದಿನಾರನೆಯ ಶತಮಾನದ ಪಾಶ್ಚಾತ್ಯ ಮುಂದುವರೆದ ಕೆಲವು ರಾಷ್ಟ್ರಗಳ ವ್ಯಾಪಾರದ ದುರುದ್ದೇಶದಿಂದ, ಲಾಭಗಳಿಕೆಯ ಉದ್ದೇಶದಿಂದ ಅಪರಿಚಿತವಾಗಿದ್ದ ಭೂಭಾಗಗಳನ್ನು ಶೋಧಿಸಿಕೊಂಡು ಆಶಯ ಪ್ರಾರಂಭಿಸಿದಾಗಲೇ ಜಾಗತೀಕರಣದ ಕುರಿತು ಚಿಂತನೆ ಮೊಳಕೆಯೊಡೆಯಿತು ಎನ್ನಲಾಗಿದೆ. ಆದರೆ ಇಂದು ನಾವು ಕಾಣುತ್ತಿರುವ ಜಾಗತೀಕರಣ ಎಂಬ ಚಿಂತನೆಯೂ ಇಪ್ಪತ್ತನೆಯ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂದಿರುವುದಂತಾಗಿದೆ. ಆದರೆ ಈ ಅವಧಿಯಲ್ಲಿ ಮೊದಲ ಶತಮಾನದ ಕೊನೆಯಲ್ಲಿ ಆರಂಭವಾದ ಮುಕ್ತ ಮಾರುಕಟ್ಟೆಯ ನೀತಿಯೂ ತುಂಬ ವಸಾಹತುಶಾಹಿ ನೆಲೆಯ ಹಿನ್ನಲೆಯುಳ್ಳದ್ದಾಗಿದೆ. ಈ ದಶಕದ ಕೊನೆಯಲ್ಲಿ ಆರಂಭವಾದ ವ್ಯಾಪಾರ ನೀತಿಯೂ ಮಹಿಳೆಯನ್ನು ಒಂದು ವ್ಯಕ್ತಿ ಕೇಂದ್ರಿತವಾದ ನೆಲೆಗೆ ತಳ್ಳಲು ತಾತ್ವಿಕವಾಗಿಯಾದರೂ ನೆರವಾಯಿತೆಂದರೆ ತಪ್ಪಾಗಲಾರದು. ಇಂದು ಜಾಗತೀಕರಣ ಎಂಬ ಪರಂಪರೆಯೂ ಮಹಿಳೆಯನ್ನು ಅತಂತ್ರ ಸ್ಥಿತಿಗೆ ತಲುಪುವಂತೆ ಮಾಡಿತು. ಈ ಮೊದಲೇ ಧಮನಿತವಾಗಿದ್ದು ಮಹಿಳೆಗೆ ಜಾಗತೀಕರಣದ ಸಂರಚನೆಗಳು ಮೂಲೆಗೆ ತಳ್ಳಲು ಪೂರಕವಾದ ವಾತವರಣ ಸೃಷ್ಟಿಸಿದವು. ಇದು ವಾಸ್ತವವಾಗಿ ಆಧುನಿಕತೆಯು ಕಪಟ ಮುಖವಾಡದ ವಿರುದ್ಧವಾದ ಚಲನಶೀಲತೆಯಾಗಿ ಮಾರ್ಪಾಡಾಗಿದೆ. ಅಲ್ಲದೆ ಸಮುದಾಯದ ಅಂಚಿನಲ್ಲಿರುವ ತಳಸಮುದಾಯಗಳು ಕೂಡ ಇದರ ಹೊಡೆತಕ್ಕೆ ಸಿಕ್ಕು ಜರ್ಜಿತವಾಗಿದೆ. ಇದೆ ಸ್ಥಿತಿ ಸಾಂಪ್ರದಾಯಿಕವಾಗಿ ಶೋಷಣೆ ಮತ್ತು ಯಾತನೆಗಳಿಗೆ ಬಲಿಯಾಗಿದ್ದ ಮಹಿಳೆಗೂ ವ್ಯಾಪಿಸಿಕೊಂಡಿದೆ.

ಭಾರತೀಯ ಸಾಂಸ್ಕೃತಿಕ ಪರಂಪರೆಯೂ ತುಂಬ ಅನನ್ಯವಾದದ್ದು, ಇಲ್ಲಿಯ ಬಹುಸಂಸ್ಕೃತಿಯ ನೆಲೆಯೊಳಗೆ ಮಹಿಳೆ ಎಂಬ ಅಮೂರ್ತ ಶಿಲೆಯ ಅಸ್ತಿತ್ವವನ್ನು ಜಾಗತೀಕರಣದ ಹಿನ್ನಲೆಯಲ್ಲಿ

[illegible]

[illegible]

[illegible]

[illegible]

ನಿರ್ವಚಿಸಿಕೊಳ್ಳುವುದು ಇಂದಿನ ತುರ್ತಾಗಿದೆ. ಭಾರತದ ತುಂಬೆಲ್ಲ ಢಾಳಾಗಿ ವ್ಯಾಪಿಸಿಕೊಂಡಿರುವ ಜಾತಿ, ಧರ್ಮ, ಸಂಸ್ಕೃತಿ, ಪ್ರದೇಶ, ಪರಂಪರೆ, ವರ್ಗ ಮತ್ತು ಲಿಂಗ, ಶ್ರೇಣೀಕರಣದಂತಹ ನಿರ್ವಚನಗಳು ಪ್ರಾದೇಶಿಕವಾಗಿ ಭಿನ್ನವಾಗಿರಬಹುದಾದರೂ ಮಹಿಳೆಯ ವಿಷಯದಲ್ಲಿ ಏಕರೂಪವಾಗಿ ಕಂಡುಬರುತ್ತವೆ. ಬಹುಸಂಖ್ಯಾತ ಮಹಿಳಾ ಸಮುದಾಯದ ನೈಜ ಚಿತ್ರಣವನ್ನು ನಮ್ಮ ಎದುರಿಗೆ ಇಟ್ಟುಕೊಂಡು ಅವಲೋಕಿಸುವುದು ಇಂದಿನ ಜರೂರಾಗಿದೆ. ಪಿತೃಪ್ರಧಾನತೆಯ ಕುಡಿಯಾಗಿರುವ ಹೆಣ್ಣು ಎಂಬ ಪದಗುಚ್ಛ ತಾತ್ವಿಕವಾಗಿ ಎಲ್ಲಾ ಸ್ಥಿತಿಗಳಿಗೂ ಒಂದು ಸಾಮಾನ್ಯವಾದ ಅಸ್ತಿತ್ವ ಕಾಣಲಾಗುತ್ತದೆ. ಭಾರತದ ಬಹುಸಂಖ್ಯಾತ ಮಹಿಳಾ ಸಮುದಾಯದ ಅಸ್ತಿತ್ವವನ್ನು ನಮ್ಮ ಮುಂದಿಟ್ಟುಕೊಂಡು ಇಲ್ಲಿನ ಎಲ್ಲಾ ಬಗೆಯ ಆಲೋಚನೆಗಳಗೆ ಒಂದು ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಿಸುವುದು ಅಗತ್ಯವಾಗಿದೆ. ಇಲ್ಲಿ ಮಹಿಳೆಯ ಹೊರಗಿನ ದುಡಿಮೆ ಮುಖ್ಯವಾದ ಪರಿಕಲ್ಪನೆಯಾಗಿ ಅರಿಯಲು ಪ್ರಯತ್ನಿಸಲಾಗಿದೆ.

ಖ್ಯಾತ ಚಿಂತಕರಾದ ನೋಮ್ ಚೋಮ್‌ಸ್ಕಿಯವರ ಪ್ರಕಾರ ಜಾಗತೀಕರಣ ಎಂಬ ನಿರ್ವಚನವು ಒಪ್ಪಿಗೆಯನ್ನು ಉತ್ಪಾದಿಸುವ ವ್ಯವಸ್ಥೆಯಾಗಿದೆ. ಭಾರತೀಯ ಸಂದರ್ಭದಲ್ಲಿ ಇದರ ಪ್ರಾಯೋಗಿಕತೆಯನ್ನು ಈಗಾಗಲೇ ನಾವು ಅನುಭವಿಸಿದ್ದೇವೆ. ಜಾಗತೀಕರಣದ ಆಧುನಿಕತೆಯ ಮುಂದಿನ ಬೆಳವಣಿಗೆ, ಇದೊಂದು ಚಾರಿತ್ರಿಕ ಅನಿವಾರ್ಯತೆ ಎಂಬ ಭ್ರಮೆಯನ್ನು ಜನಮಾನಸದಲ್ಲಿ ಬಿತ್ತಬಲ್ಲದು. ಇದರ ಮುಕ್ತ ಮಾರುಕಟ್ಟೆಯ ನೀತಿ ಮಾತ್ರ ತೃತೀಯ ರಾಷ್ಟ್ರಗಳಿಗೆ ಜೀವದ ಗುಟುಕು ನೀಡಬಲ್ಲದು ಎಂಬ ಭ್ರಮೆಯನ್ನು ಸಾಮಾಜಿಕ ಪಥ್ಯವಾಗಿ ರೂಪಿಸುವುದು. ಎದುರಾಡುವ ಎದುರು ಯೋಚಿಸದ ನಿಯತ್ತಿನ್ನು ನಾಗರಿಕ ಪ್ರಜ್ಞೆಯಾಗಿಸುವುದು. ಈ ಹಂತಗಳು ಈಗಾಗಲೇ ಭಾರತದಲ್ಲಿ ಯಶಸ್ವಿಯಾಗಿ ಪ್ರಯೋಗಗೊಂಡಿವೆ. ಕುಲಮೂಲ ಬದುಕಿನ ವಿಧಾನದಿಂದ ಜಡವಾದ ಭಾರತೀಯ ಸಮಾಜದಲ್ಲಿ ಈ ಬಗೆಯ ತೊಡಕುಗಳು ಪದರುಪದರುಗಳಾಗಿ ಜಿಡ್ಡುಗೊಳ್ಳುತ್ತಿವೆ." (ವಿನಯಾ, ೫೧, ೨೦೦೫) ಇಂತಹ ಜಿಡ್ಡಿನಿಂದಲೂ ಕೂಡ ಹೊರಬರಲು ಅಲ್ಲಿಯ ಸ್ವಚ್ಛವಾಗಿ ತಪ್ಪಿಕೊಳ್ಳಲು ಕೂಡ ಸಾಧ್ಯವಾಗುತ್ತಿಲ್ಲ.

ಜಾಗತೀಕರಣ ಮತ್ತು ಮಹಿಳೆಯ ಬಗ್ಗೆ ಏನಾದರೂ ಹೇಳುವುದು ತುಂಬ ಕಷ್ಟದ ಕೆಲಸವಾದರೂ ಅವುಗಳ ಹಿಂದಿನ ರಾಜಕಾರಣ ಕುರಿತಾದ ಅಂಶಗಳನ್ನು ಅರಿಯುವುದು ಅಗತ್ಯವಿದೆ. ಜಾಗತೀಕರಣ, ಉದಾರಿಕರಣ, ಖಾಸಗೀಕರಣ ಹಾಗೂ ಅವುಗಳಿದ್ದೆ ಒಂದು ಅಭಿವ್ಯಕ್ತಿಯಾದ Stractural adiestment ಕಾರ್ಯಕ್ರಮಗಳು ಹೇಗೆ ಮಹಿಳೆಯರ ಮೇಲೆ ಅವಳ ದುಡಿಮೆಯ ಮೇಲೆ ಪರಿಣಾಮ ಬಿರುತ್ತವೆ ಎಂಬುದನ್ನು ಅರಿಯುವುದು ಅಗತ್ಯವಾಗಿದೆ. ಜಾಗತೀಕರಣ ಎಂದ ಪದವು ಅರ್ಥಶಾಸ್ತ್ರೀಯ ಹಿನ್ನಲೆಯಲ್ಲಿ ರೂಪುಗೊಂಡಿದ್ದರೂ ಕೂಡ ಉಳಿದ ಯಾವುದೇ ಬಗೆಯ ಆರ್ಥಿಕ ಸಿದ್ಧಾಂತಗಳಂತೆ ಸಾಮುದಾಯಿಕ ಬದುಕಿನ ಉಳಿದೆಲ್ಲ ಕ್ಷೇತ್ರಗಳ ಮೇಲೆ ಈ ದೇಶದ ಸಂಸ್ಕೃತಿ ಚಳುವಳಿಗಳು ಹಾಗೂ ಮಾನವ ಸಂಬಂಧಗಳ ಮೇಲೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪರಿಣಾಮ ಬೀರುತ್ತವೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಹಾಗೆಯೇ ಅದು ಹಿಂದಿಗಿಂತಲೂ ಇಂದು ಹೆಚ್ಚು ಅಗಾಧವಾಗಿದೆ ಎನ್ನುವುದು

ದಿನಗಳೆದಂತೆ ನಮ್ಮ ಅನುಭವಕ್ಕೆ ಬರುತ್ತಿರುವುದು ಕೂಡ ಅಷ್ಟೇ ಸತ್ಯ. ಈ ಪ್ರಕ್ರಿಯೆಯೂ ಕೆಲವು ಬಾರಿ ಹೊಸ ಹೊಸ ಬಿಕ್ಕಟ್ಟುಗಳನ್ನು ಸೃಷ್ಟಿಸಿದರೆ, ಇನ್ನು ಕೆಲವು ಬಾರಿ ಈಗಾಗಲೇ ಸ್ಥಾಪಿತವಾಗಿರುವ ಬಿಕ್ಕಟ್ಟುಗಳನ್ನು ತೀವ್ರಗೊಳಿಸುತ್ತವೆ. ಈಗಾಗಲೇ ಇರುವ ಶೋಷಣೆ, ಯಾತನೆ, ವಂಚನೆ ಮತ್ತು ತಾರತಮ್ಯಗಳನ್ನು ತೀವ್ರಗೊಳಿಸುತ್ತದೆ.

ವರ್ತಮಾನದ ಜನಾಂಗದ ಸೃಷ್ಟಿ ಹಾಗೂ ಅವರ ಸುಸ್ಥಿರಗತಿಯ ಸಮಷ್ಟಿ ಪ್ರಕ್ರಿಯೆಯು ಮೂಲ ಕೇಂದ್ರ ಧಾತು ಮಹಿಳೆ ಎಂಬುದರಲ್ಲಿ ಯಾವುದೆ ಸಂದೇಹವಿಲ್ಲ. ಆದರೆ ಪ್ರಸ್ತುತ ಕಾಲಮಿತಿಗಳಲ್ಲಿಯು ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿ ಸಾಮಾಜಿಕ ಜೀವನದ ಮುಖ್ಯವಾಹಿನಿಯಲ್ಲಿ ಉಳಿಯಬೇಕಾಗಿದ್ದು ಮಹಿಳೆ ಪ್ರಧಾನ ಧಾರೆಯ ಪರದಿಯಿಂದ ಸದೂರವನ್ನೇ ಹೊಂದುತ್ತಿದ್ದಾಳೆ, ಪ್ರಪಂಚದಲ್ಲಿ ಮಹಿಳಾ ಸಮುದಾಯದ ಪಾಲು ಶೇ ೫೦% ರಷ್ಟು ಆಗಿದ್ದರೂ ಕೂಡ ಸಮಾಜದ ನಿಯಂತ್ರಣವಿರುವುದು ಪುರುಷಾಧಿಪತ್ಯದಲ್ಲಿ ಎಂಬುದು ಕಡುವಾಸ್ತವ. ರೂ. ಶೇ ೫೦% ರಷ್ಟು ಮಹಿಳೆಯರು ಒಟ್ಟು ದುಡಿಮೆಯಲ್ಲಿ ಶೇ ೬೬% ರಷ್ಟು ಆವರಿಸಿಕೊಂಡಿದ್ದಾನೆಂಬುದು ವಿಶ್ವಸಂಸ್ಥೆಯ ದಾಖಲಾತಿಯೆಂಬುದು ಮರೆಯಬಾರದು. ಆದರೆ ಪ್ರಸ್ತುತ ವಿಶ್ವದಲ್ಲಿ ಮಹಿಳೆ ಸಹಭಾಗಿಯಾಗಿ ಉತ್ಪಾಧಿಸುತ್ತಿರುವ ಅವಳ ಉತ್ಪಾದನ ಉಪಭೋಗಿತನದಲ್ಲಿ ಅವಳು ಪಡೆಯುತ್ತಿರುವುದು ಕೇವಲ ೧೦ ರೂ (ರಷ್ಟು) ಮಾತ್ರ ಅಲ್ಲಿದೆ ಪ್ರಪಂಚದಲ್ಲಿ ಮಹಿಳೆಯರೆ ನಿರ್ವಹಿಸುತ್ತಿರುವ ಪ್ರಮಾಣ ಕೂಡ ತುಂಬ ಶೋಚನೀಯವಾಗಿದೆ. ಏಕೆಂದರೆ ಅವಳ ಪಾಲೂ ಇಲ್ಲೂ ಕೂಡ ಶೇ ೦೧ ರಷ್ಟು ಮಾತ್ರ ಹೀಗೆ ಅಭಿವೃದ್ಧಿಯ ಪಾಲುಗಳು, ಸಂಪನ್ಮೂಲ ಹಾಗೂ ದುಡಿಮೆಯ ಸಂಕಥನಗಳಿಗೆ ಸಂಬಂಧಿಸಿದಂತೆ ವಿಶ್ವದಾದ್ಯಂತ ಸ್ತ್ರೀ ಸಮುದಾಯ ತೀವ್ರತರವಾದ ಹಿನ್ನಡೆಯನ್ನು ಅಸಮಾನತೆಯನ್ನು ಅನುಭವಿಸುತ್ತಿದ್ದಾರೆ. ಪ್ರಧಾನವಾದ ಹಾಗೂ ಲಿಂಗ ಶ್ರೇಣಿಕರಣದ ವ್ಯವಸ್ಥೆಯಲ್ಲಿ ಈ ಬಗೆಯ ಅಸಮಾನತೆಗಳು ಅತಿ ಹೆಚ್ಚು ಢಾಳಾಗಿ ಕಂಡುಬರುತ್ತವೆ. ಈ ಬಗೆಯ ಎಲ್ಲಾ ವ್ಯಾಪಾಗಳು ಸಾಂಪ್ರದಾಯಿಕ ಪುರುಷನಿಷ್ಟ ಮೌಲ್ಯ ಚಿಂತನೆಗಳಿಗೆ ವಾರಸುದಾರರಾಗಿರುವ ಭಾರತಾದ್ಯಂತಹ ಪಾರಂಪರಿಕ ದೇಶದಲ್ಲಿ ಲಿಂಗ ಪಕ್ಷಪಾತದ ಕುರುಹುಗಳು ತುಂಬ ಆಳವಾಗಿ ಬೇರೂರಿಬಿಟ್ಟಿವೆ. ಅಲ್ಲದೆ ಸಾಮಾಜಿಕ, ಆರ್ಥಿಕ, ಪೌರಾಣಿಕ ಹಾಗೂ ಸಾಂಸ್ಕೃತಿಕ ಅಸಮಾನತೆಯಿಂದ ಕೂಡಿರುವ ಇಂತಹ ದೇಶದಲ್ಲಿ ಮಹಿಳಾ ಮುನ್ನಡೆ, ಮಹಿಳಾ ಸಬಲೀಕರಣ, ಮಹಿಳಾ ಸಶಕ್ತೀಕರಣ ಎಂಬ ಚಿಂತನೆಗಳು ಯಥಾವತ್ತಾಗಿ ಪಾಲನೆಯಾಗುವುದಾದರೂ ಹೀಗೆ ಎಂಬ ಸಂಶಯ ಬರದೆ ಇಂದು, ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳೆ ಗತಿಸಿದರೂ ಕೂಡ ಸಾಂಪ್ರದಾಯಿಕ ಚಿಂತನೆ ಹಾಗೂ ಪುರುಷನಿಷ್ಟ ಆಲೋಚನೆಗಳು ಮಹಿಳೆಯ ಮುನ್ನಡೆಗೆ ತೊಡಕಾಗಿರುವುದು ಮಾತ್ರ ದಿಟ.

ಮೇಲಿನ ವಿಚಾರ ಸರಣಿಯನ್ನು ಅವಲೋಕಿಸಿದಾಗ ಸಾಮಾಜಿಕ ಜೀವನದಲ್ಲಿ ಮಹಿಳೆಯರು ಅನುಭವಿಸುತ್ತಿರುವ ಸಂಕಷ್ಟಗಳ ಅರಿವು ಯಾತನೆ ಯಾರಿಗಾದರೂ ಆಗಬಲ್ಲದು. ಈ ಮೊದಲೆ ತೀವ್ರ

ಅಸಮಾನತೆಯಿಂದ ಹಿಂದುಳಿದಿದ್ದ ಮಹಿಳೆಗೆ ಜಾಗತೀಕರಣ ಎಂಬ ಪೆಡಂಭೂತವೂ ಅವಳ ಅಸ್ತಿತ್ವವನ್ನು ಪ್ರಶ್ನಿಸುವಂತೆ, ಅಲುಗಾಡಿಸುವಂತೆ ಹೊಸಬಗೆಯಲ್ಲಿ ಅವಳನ್ನು ಶೋಷಣೆಗೆ ಗುರಿ ಮಾಡುತ್ತಿದೆ. ಜಾಗತೀಕರಣದ ಪ್ರಭಾವದಿಂದಾಗಿ ಮಹಿಳೆ ತುಂಬ ಉದಾರವಾದಿ ನೆಲೆಯಲ್ಲಿ ಮಾತನಾಡುವವರು ಕಡಿಮೆ ಏನಿಲ್ಲ. ಏಕೆಂದರೆ ಇಂದು ದೊಡ್ಡ ದೊಡ್ಡ ಕಂಪನಿಗಳಲ್ಲಿ ಮಹಿಳೆಯರನ್ನೆ ಅತ್ಯಧಿಕ ಪ್ರಮಾಣದಲ್ಲಿ ದಾಖಲು ಮಾಡಿಕೊಳ್ಳಲಾಗುತ್ತಿದೆ. ಕಾರಣ ಮಹಿಳೆಯರು ಸತ್ಯವಾದರೂ ಇದರ ಹಿಂದಿನ ರಾಜಕಾರಣವೆ ಬೇರೆ, ಮುಖ್ಯವಾಗಿ ಮಹಿಳೆಯರು ಪುರುಷರಂತೆ ಗಲಾಟೆ, ದೊಂಬಿ, ಹೋರಾಟಗಳಿಗೆ ಬರುವವರಲ್ಲ, ಅಲ್ಲದೆ ಅವರನ್ನು ಯಾವಾಗ ಬೇಕಾದರೂ ಕೆಲಸಕ್ಕೆ ಬರಮಾಡಿಕೊಳ್ಳಬಹುದು, ಬೇಡವಾದರೆ ತೆಗೆದು ಹಾಕಿದರೂ ಅವಳಿಗೆ ಪ್ರಶ್ನಿಸಲು ಧೈರ್ಯವೇ ಇರುವುದಿಲ್ಲ ಎಂಬ ಪುರುಷ ರಾಜಕಾರಣ ಅದರಲ್ಲಿದೆ.

ಹೀಗೆ ಜಾಗತೀಕರಣದ ಸಂಕಥನಗಳಲ್ಲಿ ಮಹಿಳೆ ಒಂದು ರೀತಿಯಲ್ಲಿ Flexible ಆಗಿ ಬಳಕೆಯಾಗುತ್ತಿದ್ದಾಳೆ. ಇತರ ಎಲ್ಲಾ ಬಗೆಯ ಉದ್ಯೋಗಗಳಿಗಿಂತ ಜಾಗತೀಕರಣಕ್ಕೆ ಒಳಪಟ್ಟಿರುವ ಉದ್ಯೋಗ ಕ್ಷೇತ್ರದಲ್ಲಿಯೂ ಕೂಡ ಸಮಕಾಲೀನ ಪಿತೃಪ್ರಧಾನ ಚಿಂತನೆಗಳೆ ಮಹಿಳೆಯನ್ನು ತನ್ನದೆ ಆದಂತಹ ಸಂರಚನಾತ್ಮಕ ಹೊಂದಾಣಿಕೆಯೊಂದನ್ನು ಏರ್ಪಡಿಸಿಕೊಂಡು ಅವಳನ್ನು ತನಗಿಷ್ಟ ಬಂದಂತೆ ಬಳಸಿಕೊಳ್ಳುತ್ತಿವೆ. ಮಹಿಳೆಗೆ ಉದ್ಯೋಗ ಅವಕಾಶ ಎಂಬ ಸಮಾನತವಾದಿ, ಉದಾರವಾದಿ, ಪ್ರಗತಿಪರ ಮತ್ತು ಕ್ರಾಂತಿಕಾರಕ ಬೆಳವಣಿಗೆಗಳು ಎಂದು ಪರಿಭಾವಿಸಿಕೊಳ್ಳುತ್ತಲೇ ತನ್ನ ಅನಾದಿ ಕಾಲದ ಪುರುಷನಿಷ್ಠವಾದ ಯಜಮಾನ್ಯದ ಹಿಡಿತವನ್ನು ಇನ್ನಷ್ಟು ವಿಸ್ತರಿಸಿಕೊಳ್ಳುತ್ತಿದೆ. ಪಿತೃಪ್ರಧಾನ ಸಮಾಜದ ಬದಲಾವಣೆಯೂ ಅಗತ್ಯಕ್ಕನುಗುಣವಾಗಿ ಮಹಿಳೆಯರಿಗೆ ವಿವಿಧೆಡೆಯಲ್ಲಿ ಉದ್ಯೋಗಗಳನ್ನು ಕಲ್ಪಿಸುತ್ತಲೇ ಅವಳನ್ನು ವ್ಯವಸ್ಥಿತವಾಗಿ ನಿಯಂತ್ರಿಸುತ್ತಲೇ ಇರುತ್ತವೆ. ಪುರುಷನು ಬಿಟ್ಟು ಮಹಿಳೆಯರಿಗೆ ಹಿಂದಿನಿಂದ ಬಂದಿದ್ದ ಪುರುಷನ ಅವಕಾಶಗಳನ್ನು ಅವಳಿಗೆ ನೀಡುತ್ತಲೇ ಅವಳನ್ನು ನಂಬಿಸಿ, ಪ್ರೋತ್ಸಾಹಿಸುವುದು ಒಂದು ಕಡೆಯಾದರೆ, ಅವಳನ್ನು ತನ್ನ ನೈಜ ಪ್ರತಿನಿಧಿಯನ್ನಾಗಿ ಬಿಂಬಿಸುವುದು ಮತ್ತೊಂದು ಬಗೆಯಾಗಿರುತ್ತದೆ. ಈ ಬಗೆಯ ಎರಡೂ ಅಂಶಗಳು ಮಹಿಳೆಯ ಉದ್ಯೋಗ ಕ್ಷೇತ್ರವನ್ನು ಸದಾ ಕಾಲದಲ್ಲಿ ನಿರ್ದೇಶಿಸುತ್ತಿದ್ದು, ಅದರ ಎಲ್ಲಾ ಬಗೆಯ ನಿಯಂತ್ರಣವನ್ನು ಹೊಂದಿರುತ್ತವೆ. ಹಾಗಾಗಿ ಉದ್ಯೋಗ ಸಂಬಂಧಿಯಾದ ಮಹಿಳೆಯ ಪ್ರಗತಿ ಹಾಗೂ ಅವನತಿಗಳೆರಡು ಅವಳಿಗಾಗಿಯೇ ಏರ್ಪಡಿಸಿರುವ ಲಕ್ಷ್ಮಣರೇಖೆಗಳಂತಾಗಿವೆ.

ಮಹಿಳಾ ದುಡಿಮೆಗೆ ಸಂಬಂಧಿಸಿದಂತೆ ಇಂದು ಹತ್ತು ಹಲವಾರು ಉದ್ಯೋಗಾವಕಾಶಗಳು ಚರ್ಚೆಗೆ ಬಂದಿವೆ. ಅವುಗಳಲ್ಲಿ ಸಂಘಟಿತ, ಅಸಂಘಟಿತ ಎಂಬ ವಿಭಜನೆಯೊಳಗೆ ಗುರುತುಗೊಂಡಿರುವ ಇವು ಸಮಾನವಕಾಶ, ಕನಿಷ್ಠ ಹಾಗೂ ಸಮಾನವೇತನ, ಕೆಲಸ ಸ್ಥಳದ ಸೌಲಭ್ಯಗಳಿಂದಿಡಿದು ಮೀಸಲಾತಿ, ವರಮಾನ ತೆರಿಗೆ ವಿನಾಯಿತಿ ಇತ್ಯಾದಿಗಳವರೆಗೆ ಹರಡಿದೆ. ಈ ಎಲ್ಲಾ ವಿಷಯಗಳ ಸ್ವಲ್ಪ ಪ್ರಮಾಣದ

ಪ್ರಯೋಜನವು ಸಂಘಟಿತ ವಲಯದೊಳಗೆ ಆಗಿದ್ದು. ಬಹು ಸಂಖ್ಯಾತವಾಗಿರುವ ಅಸಂಘಟಿತ ಕ್ಷೇತ್ರದ ವಿಸ್ತಾರವು ಮಹಿಳಾ ಉದ್ಯೋಗಿಗಳ ಸಮಸ್ಯೆಯನ್ನು ಉಲ್ಬಣಗೊಳಿಸುತ್ತದೆ. ಭಾರತದಂತಹ ದೇಶಗಳಲ್ಲಿ ಮುಕ್ತ ಬಂಡವಾಳದ ಹರಿಯುವಿಕೆ ಇತ್ಯಾದಿ ಪ್ರಕ್ರಿಯೆಗಳು ಸಂಘಟಿತ ಕ್ಷೇತ್ರದ ಉದ್ಯೋಗವಕಾಶವನ್ನು ಸಂಕುಚಿತಗೊಳಿಸುತ್ತಿವೆ. ಇದುವರೆಗೆ ಇದ್ದ ಸಂಘಟಿತ ಕ್ಷೇತ್ರದಲ್ಲಿದ್ದು ಎಷ್ಟು ಉದ್ಯೋಗಗಳು ಖಾಸಗೀಕರಣದಿಂದಾಗಿ ಅಸಂಘಟಿತ ವಲಯಗಳಾಗಿ ಪರಿವರ್ತನೆಗೊಳ್ಳುತ್ತಿವೆ. ಸಮಾಜದ ಅತ್ಯಂತ ಪ್ರಗತಿಪರ, ಆಧುನಿಕ ಎಂದು ಕರೆಯಿಸಿಕೊಳ್ಳುವ ಐಟಿ, ಬಿಟಿಯಂತಹ ವಿದೇಶ ಕಂಪನಿಗಳು ಕೂಡ ಅಸಂಘಟಿತ ವಲಯದ ಎಲ್ಲಾ ಗುಣಲಕ್ಷಣಗಳನ್ನು ಪ್ರಕಟಿಸುತ್ತವೆ. ಇಲ್ಲಿ ಮಹಿಳೆಯರಿಗೆ ಪ್ರೋತ್ಸಾಹಿಸಲಾಗುತ್ತಿರುವ ಉದ್ಯೋಗವಕಾಶಗಳು ಬೇರೆ ಕ್ಷೇತ್ರಕ್ಕೆ ಹೋಲಿಸಿದರೆ ಪರವಾಗಿಲ್ಲ ಎನಿಸಿದರೂ, ಆ ಕ್ಷೇತ್ರದೊಳಗಿನ ಅಗ್ಗದ ಹಾಗೂ ಹೊಸದಾಗಿ ಸೃಷ್ಟಿಗೊಳ್ಳುತ್ತಿರುವ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರ ಉದ್ಯೋಗವಕಾಶಗಳು ಸೀಮಿತಗೊಂಡಿದ್ದು ಲಿಂಗತಾರತಮ್ಯಕ್ಕೂ ಒಳಗಾಗಿವೆ. ಪರಿಸ್ಥಿತಿ ಹೀಗಿರುವಾಗ ಮಹಿಳಾ ಚಳುವಳಿಗಳು ಹೊಸ ಬೇಡಿಕೆಗಳನ್ನು ಮುಂದಿಡುವುದಕ್ಕಿಂತ ಹೆಚ್ಚಾಗಿ ಈಗಿರುವ ಸುಧಾರಣೆ, ಸವಲತ್ತುಗಳು ಬೇರೆ ವಲಯಗಳಲ್ಲಿ ವಿಸ್ತಾರಗೊಳ್ಳುವುದರತ್ತ ಗಮನ ಹರಿಸಬೇಕಾಗಿದೆ. ಪ್ರಸ್ತುತ ಸಂದರ್ಭದಲ್ಲಿ ಸಂಘಟಿತ ಕ್ಷೇತ್ರದ ಉದ್ಯೋಗವಕಾಶಗಳು ಸಂಕುಚಿತಗೊಳ್ಳುತ್ತಿರುವುದರಿಂದ ಅದನ್ನಾಧರಿಸಿ ಮೀಸಲಾತಿ ಕೆಲಸದ ಸ್ಥಳದ ಸೌಲಭ್ಯಗಳು ಇತ್ಯಾದಿಗಳು ಹೆಚ್ಚು ಮಹಿಳೆಯರನ್ನು ತಲುಪಲಾರದವಾಗಿವೆ. (ಎಂ.ಉಷಾ, ೬೯, ೨೦೦೭) ಒಂದು ರೀತಿಯಲ್ಲಿ ಇಲ್ಲಿಯ ಮಹಿಳೆಯರಿಗೆ ಅಲ್ಪ ಬಗೆಯಲ್ಲಾದರೂ ಭದ್ರತೆ ಇದೆ. ಆದರೆ ನಗರ ಕೇಂದ್ರಿತವಲ್ಲದ ಅಸಂಘಟಿತವಲಯದ ಮಹಿಳಾ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಅಧ್ಯಯನ ವಸ್ತು ವಿಷಯವಾಗಿರುವ ಕೃಷಿ ಕಾರ್ಮಿಕರ ಮಹಿಳೆಯೂ ಕೂಡ ಅಸಂಘಟಿತ ವಲಯದೊಳಗೆ ಸೇರುತ್ತಾಳೆ. ಇಂತಹ ಅಸಂಘಟಿತ ವಲಯಗಳಲ್ಲಿ ಮಹಿಳಾ ಕೃಷಿ ಕಾರ್ಮಿಕರಿಗೆ ಬರುವ ಅಸಮಾನ ವೇತನ, ಲೈಂಗಿಕ ದೌರ್ಜನ್ಯ, ಪಕ್ಷಪಾತತೆ, ಹಾಗೂ ನಿಯಮಿತವಲ್ಲದ ಸಮಯಗಳಿಗಿಂತ ಹಲವು ಬಗೆಯ ಶೋಷಣೆಗಳು ಅವಳ ಮೇಲೆ ನಿರಂತರವಾಗಿ ನಡೆಯುತ್ತಲೇ ಇರುತ್ತವೆ. ತನ್ನ ಎರಡು ಹೊತ್ತಿನ ಊಟಕ್ಕಾಗಿ ಗ್ರಾಮೀಣವಲಯಗಳಲ್ಲಿನ ಮಹಿಳೆಯರಿಗೆ ಕೃಷಿಯನ್ನು ಹೊರತು ಪಡಿಸಿದ ಇತರ ಕಾರ್ಯಗಳು ಸಿಗುದಿರುವುದು ತುಂಬ ಕಡಿಮೆ.

ಇಪ್ಪತ್ತೈದನೆಯ ಶತಮಾನದ ಕೊನೆಯ ದಶಕವು ನಮ್ಮ ದೇಶಕ್ಕೆ ಜಾಗತೀಕರಣದ ಬಾಗಿಲು ತೆರೆದ ಕಾಲಘಟ್ಟ, ಈ ಕೊನೆಯ ದಶಕದವರೆಗೂ ನಮ್ಮ ದೇಶವು ಸಕಲ ಸಮೃದ್ಧಿ ಅಭಿವೃದ್ಧಿ ಪಡೆಯಿತು ಎಂದು ಖಂಡಿತ ಅಲ್ಲ. ಏನಿಲ್ಲವೆಂದರೂ ಇಪ್ಪತ್ತೈದನೆಯ ಶತಮಾನದ ಮೊದಲ ಒಂಬತ್ತು ದಶಕಗಳಲ್ಲಿ ಹೊಸ ಚರ್ಚೆ, ಚಿಂತನೆ ಮತ್ತು ಚಲನಶೀಲತೆಗಳು ತಮ್ಮದೇ ಆದ ಕೊಡುಗೆಯನ್ನು ನೀಡವೆ. ಜಾಗತೀಕರಣ ಎನ್ನುವುದು ಒಂದು ಬಗೆಯ ಜಾರುಬಂಡೆ, ಇದು ನಮ್ಮ ದೇಶದ ಒಪ್ಪಿಕೊಂಡಿದ್ದ ಮಿಶ್ರ ಆರ್ಥಿಕ ಪದ್ಧತಿಯನ್ನು ಬುಡಮೇಲು ಮಾಡಿ ಖಾಸಗೀಕರಣವೊಂದೆ ಮೋಕ್ಷಾರ್ಥಿ ಸಾರ್ಥಕವೆಂದು

[illegible]

ಪ್ರಚುರಪಡಿಸುವ ಜಾಗತೀಕರಣದ ಪ್ರಕ್ರಿಯೆಯೂ ಪ್ರಾರಂಭವಾದದ್ದು ಕಳೆದ ಶತಮಾನದ ಅಂತ್ಯದಲ್ಲಿ ಆದರೆ ಜಾಗತೀಕರಣವು ನಮ್ಮ ಆರ್ಥಿಕ ವ್ಯವಸ್ಥೆಯನ್ನು ಒಂದು ಕಡೆಯಲ್ಲಿ ಮೇಲ್ ಹಂತಕ್ಕೆ ತರುತ್ತಿವೆ. ಇನ್ನೊಂದು ಕತೆಯಲ್ಲಿ ತಳವರ್ಗಗಳ, ಗ್ರಾಮೀಣ ಸಮುದಾಯಗಳ, ಮಹಿಳಾ ಸಮುದಾಯಗಳನ್ನು ನಿರ್ಲಕ್ಷಿಸುತ್ತಿರುವರನ್ನು ವ್ಯವಸ್ಥಿತವಾಗಿ ಅಸ್ತಿತ್ವವೆ ಇಲ್ಲದಂತೆ ಮಾಡುವ ತಂತ್ರಗಾರಿಕೆ ಜಾಗತೀಕರಣದಲ್ಲಿ ಅಡಗಿದೆ.

### ೫.೧. ಜಾಗತೀಕರಣದ ಪ್ರಭಾವದಲ್ಲಿ ಮಹಿಳಾ ಅಸ್ತಿತ್ವ

ಸಾಮಾಜಿಕ ವ್ಯವಸ್ಥೆಯಲ್ಲಿ ಲಿಂಗ ತಾರತಮ್ಯ ಎನ್ನುವುದೇ ಅತ್ಯಂತ ಕ್ಷಿಪ್ರ ಬೆಳವಣಿಗೆಯಾಗಿದೆ. ಈ ತಾರತಮ್ಯದ ವ್ಯತ್ಯಾಸದ ಮೇಲೆ ಜಾಗತೀಕರಣದ ಪ್ರಭಾವವಿರುವುದಕ್ಕೆ ಅನೇಕ ಆಧಾರಗಳಿವೆ, ಮಹಿಳೆ ಮತ್ತು ಪುರುಷರ ನಡುವೆ ಅಸಮಾನತೆಯಾಗಿ ಕಂದಕವನ್ನು ಇನ್ನಷ್ಟು ಹೆಚ್ಚಿಸಲು ಜಾಗತಿಕರಣ ಒಂದು ಪ್ರಮುಖ ಕಾರಣವಾಗಿರಬಹುದು. ಮಹಿಳೆಯರ ಬದುಕಿನಲ್ಲಿ ಅನೇಕ ರೀತಿಯಲ್ಲಿ ಬದಲಾವಣೆಗಳನ್ನು ಮತ್ತು ಏರುಪೇರುಗಳನ್ನು ಹುಟ್ಟು ಹಾಕುತ್ತಿರುವ ಜಾಗತೀಕರಣ ಮಹಿಳೆಯ ದಿನನಿತ್ಯದ ಕಾರ್ಯಚಟುವಟಿಕೆಗಳಲ್ಲಿ ತೊಡಕುಗಳನ್ನು ಸೃಷ್ಟಿಸಿ ಅನೇಕ ರೀತಿಯ ದುಷ್ಪರಿಣಾಮವಾಗುವಂತೆ ಮಾಡಿದೆ.

ಕೃಷಿಕೂಲಿಕಾರರು ಹೊಲಗದ್ದೆಗಳಲ್ಲಿ ತಮ್ಮ ಕೃಷಿ ಚಟುವಟಿಕೆಗಳನ್ನು ತೊಡಗಲು ವಿವಿಧ ರೀತಿಯ ಹೊಸ ಬದಲಾವಣೆಗಳನ್ನು ಈ ಜಾಗತೀಕರಣದ ಪ್ರಭಾವದಿಂದ ಅವರ ದುಡುಮೆಯಲ್ಲಿ ವಿವಿಧ ರೀತಿಯ ಯಂತ್ರೋಪಕರಣಗಳನ್ನು ಕಾಲಿಟ್ಟಿರುವುದು ಮತ್ತು ಸಾಮಾಜಿಕ ರಂಗದ ಬೆಳವಣಿಯಲ್ಲಿಯೂ ಅನೇಕ ಬಗೆಯ ತೀವ್ರ ಸ್ವತರೂಪದ ಬದಲಾವಣೆಗಳು ಕಂಡು ಬಂದಿದೆ ಸರ್ಕಾರವು ಈ ರೀತಿಯ ಜಾಗತೀಕರಣದ ಪ್ರಭಾವದಿಂದ ಕೃಷಿ ಕೂಲಿಕಾರ್ಮಿಕ ಅಭಿವೃದ್ಧಿಯಾಗಲು ಬೇಕಾಗಿರುವಂತ ವಾತಾವರಣ ನಿರ್ಮಿಸುತ್ತಿಲ್ಲ ಬದಲಾಗಿ ನಿರ್ಲಕ್ಷ್ಯತನದ ಧೋರಣೆಯನ್ನು ಸೃಷ್ಟಿಸುತ್ತಿದೆ.[೩]

ಇತ್ತೀಚಿನ ಯಂತ್ರೋಪಕರಣದ ಸಂಸ್ಕೃತಿಯು ಕೃಷಿ ಕೆಲಸಗಳಲ್ಲಿ ತೊಡಗಿರುವ ಮಹಿಳೆಯರನ್ನು ನಿರುದ್ಯೋಗಿಗಳನ್ನಾಗಿ ಪರಿವರ್ತಿಸಿದೆ. ಮಹಿಳೆಯು ತನ್ನ ಕೈಯಿಂದ ಸಂಪೂರ್ಣವಾಗಿ ಕೆಲಸಗಳನ್ನು ಕಳೆದು ಹೋಗುವಂತೆ ಸ್ಥಿತಿ ನಿರ್ಮಾಣವಾಗುವುದರಲ್ಲಿ ಸಂಶಯವಿಲ್ಲ ಅನ್ನಿಸುತ್ತದೆ. ಕುಟುಂಬಗಳ ಆಗುಹೋಗುಗಳನ್ನು ತೂಗಿಸಿಕೊಂಡು ಹೋಗುತ್ತಿದ್ದ ಮಹಿಳೆ ಇಂದು ಕೆಲಸಗಳನ್ನು ಕಳೆದುಕೊಂಡು ಸದಾ ಪುರುಷರು ದುಡಿದು ತರುವುದನ್ನು ಕಾದು ಕುಳಿತುಕೊಳ್ಳಬೇಕಾಗಿದೆ.

ಜಾಗತೀಕರಣದ ಪ್ರಭಾವ ಎಷ್ಟು ಗಾಢವಾಗಿದೆ ಎಂದರೆ ಈ ವ್ಯವಸ್ಥೆಯಲ್ಲಿ ಕೆಲಸ ಮಾಡಲು ಜ್ಞಾನ ಮತ್ತು ಕೌಶಲ್ಯದ (Skills) ಅವಶ್ಯಕತೆ ಇದ್ದೆ ಇದೆ. ಬಹುತೇಕ ಪ್ರತಿಭೆಯಿಂದ ಕೂಡಿರುವ

ಇಂತಹ ಸನ್ನಿವೇಶದಲ್ಲಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಕೆಲಸ ಮಾಡುವ ತಂತ್ರಗಾರಿಕೆಯಿಂದ ಉದ್ಯೋಗವನ್ನು ಸೃಷ್ಟಿಯಾಗತೊಡಗಿವೆ. ಇದರಿಂದ ನಮ್ಮ ಹಳ್ಳಿಗರು (ಮಹಿಳೆಯರು) ಅನೇಕ ಬಗೆಯ ಸಮಸ್ಯೆಗಳನ್ನೊಳಗೊಂಡು (ಜಾಗತೀಕರಣದಿಂದ) ನಲುಗುವಂತಾಗಿದೆ.

ಜಾಗತೀಕರಣದ ನೀತಿಗಳು ಕೃಷಿ ಕೂಲಿಕಾರ ಮಹಿಳೆಯರ ತಮ್ಮ ಬದುಕಿನ ಅವಕಾಶಗಳು ಲಿಂಗತಾರತಮ್ಯ ಮತ್ತು ಅವರುಗಳ ಬದುಕು ಉತ್ತಮಗೊಳ್ಳುವ ಸಾಧ್ಯತೆಗಳು ಇನ್ನು ಪ್ರಶ್ನೆಗಳಾಗಿಯೇ ಉಳಿದಿವೆ ಜಾಗತಿಕ ಪ್ರಭಾವದಿಂದ ಮಹಿಳೆಯರ ಕೆಲಸಕ್ಕೆ ವಿನಾಶದ ಹಾದಿಯಲ್ಲಿದೆ. ಇದರಿಂದ ಕೂಲಿಯನ್ನು ಅವಲಂಬಿಸಿಕೊಂಡಿರುವ ಮಹಿಳೆಯರು ಸಂಕಷ್ಟದಲ್ಲಿ ಇದ್ದಾರೆ. ಅವರ ಹೊಟ್ಟೆ ಬಟ್ಟೆ ಬದುಕು ಇಂದು ತುಂಬಾ ಅಪಾಯ ಎದುರಿಸುತ್ತಿದೆ. ಇದೊಂದು ರೀತಿಯಲ್ಲಿ ಜಾಗತೀಕರಣದಿಂದ ಪುರುಷರು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಇದರಿಂದ ಮಹಿಳೆಯರ ಮೇಲೆ ಒತ್ತಡ ಹೆಚ್ಚಾಗುತ್ತದೆ.

### ೫.೨. ಜಾಗತೀಕರಣ ಮತ್ತು ಮಹಿಳೆ

ಬಹುತೇಕ ಕೃಷಿ ಚಟುವಟಿಕೆಯಲ್ಲಿ ದುಡಿಯುವ ಮಹಿಳೆಯರನ್ನು ಜಾಗತೀಕರಣವು ದುರ್ಬಲವಾಗಿಸಿದೆ. ಸಂಪೂರ್ಣವಾಗಿ ಯಂತ್ರೋಪಕರಣದಿಂದ ಕೃಷಿ ಮಾಡುವ ಪದ್ಧತಿ ಪ್ರಾರಂಭವಾದಾಗಿನಿಂದ ಕೃಷಿ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳು ಕಾಣಬಹುದಾಗಿದೆ. ಕೃಷಿ ಕ್ಷೇತ್ರದಲ್ಲಿನ ಬದಲಾವಣೆಗಳು, ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಅನೇಕ ರೀತಿಯ ಹೊಸ ಹೊಸ ಯಂತ್ರೋಪಕರಣಗಳು ಕಾಲಿಟ್ಟಿರುವ ಪರಿಣಾಮ ಇಂದಿನ ಸಾಮಾಜಿಕ ಚಿಂತನೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ ಕೇವಲ ಹೆಸರಿಗೆ ಮಾತ್ರ ಕಾಣಬಹುದು.

ಜಾಗತೀಕರಣದ ಪ್ರವೇಶದಿಂದಾಗಿ ತಮ್ಮ ದಿನನಿತ್ಯದ ಕೃಷಿ ಕೂಲಿಯ ಯಂತ್ರಗಳ ಪಾಲಾಗಿ ಕಾರ್ಮಿಕರು ಬೀದಿಗೆ ಬೀಳುವಂತಾಗಿದೆ. ಪಾರಂಪರಿಕ ಕುಲಕಸುಬುಗಳಾಗಿರುವ ಬಡಗಿತನ, ಕಮ್ಮಾರಿಕೆ ಮತ್ತು ಗುಡಿಕೈಗಾರಿಕೆಯಂತಹ ಸೂಕ್ಷ್ಮ ಕೆಲಸಗಳು ಕೂಡ ನಶಿಸುವ ಹಂತ ತಲುಪಿವೆ.

ಆಧುನಿಕ ಜೀವನಕ್ಕೆ ತಕ್ಕಂತೆ ಕೃಷಿಯಲ್ಲಿಯೂ ಕೂಡ ಹತ್ತು ಹಲವು ಬಗೆಯಲ್ಲಿ ಮಹತ್ತರ ಬದಲಾವಣೆಗಳಾಗಿರುವುದು ಸತ್ಯ. ಹಿಂದಿನ ಪಾರಂಪರಿಕ ಬಿತ್ತನೆಯಾಗಿರಬಹುದು ಅಥವಾ ನಾಡಿಯಾಗಿರಬಹುದು. ಪ್ರತಿಯೊಂದು ಹತ್ತು ಹಲವು ಕಾರ್ಮಿಕರ ನೆರವಿಲ್ಲದಂತೆ ಇಂದು ಒಬ್ಬನೆ ಕೆಲಸ ಮಾಡುತ್ತಲೆ ಉಳಿದವರನ್ನು ಕೆಲಸದಿಂದ ದೂರವಿಟ್ಟದ್ದಾನೆ. ವರ್ತಮಾನದ ರೈತರು ಶೀಘ್ರವಾಗಿ ಮುಂದುವರೆಯಬೇಕೆಂಬ ತುಂಬು ದುರಾಸೆಯು ಬೆಂಬತ್ತಿ ಅಧಿಕ ಲಾಭ, ಅಧಿಕ ಇಳುವರಿಯ ಸಲುವಾಗಿ ಭೂಮಿಯ ಫಲವತ್ತತೆಯನ್ನು ಬಂಜರುಗೊಳಿಸುತ್ತಿರುವುದಷ್ಟೇ ಅಲ್ಲದೆ ಸ್ವಾಲಂಬಿತನದಿಂದ ಇತರರ ಉದ್ಯೋಗವನ್ನು ಮೊಟಕುಗೊಳಿಸಿದ್ದಾನೆ. ಬಹುರಾಷ್ಟ್ರೀಯ ಕಂಪನಿಗಳು ಭಾರತ ಪ್ರವೇಶಿಸಿದ ನಂತರ ಸ್ಥಳೀಯವಾಗಿ ಅವು ತಯಾರಿಸಿದ ರಸಗೊಬ್ಬರ, ಬೀಜಗಳು ಅತಿ ಶೀಘ್ರವಾಗಿ ಫಸಲನ್ನು, ಅಧಿಕ ಇಳುವರಿಯನ್ನು ತರುವ ದುರುದ್ದೇಶಹೊಂದಿರುವುದರಿಂದ ಪರಾವಲಂಬಿತನ ಎಂಬುದು ಇಂದು

ಮಾಯವಾಗುತ್ತಿದೆ. ಹಿಂದೆ ಕೃಷಿ ಕಾರ್ಯದಲ್ಲಿ ಹಲವಾರು ಜನರು ಕೂಡ ಜಾನಪದೀಯ ಶೈಲಿಯ ಹಾಡನ್ನು ಹಾಡುತ್ತದೆ ಸಾಮುದಾಯಿಕ ಭಾವದಿಂದ ನಡೆಯುತ್ತಿದೆ. ಕಸಿ ವ್ಯವಸ್ಥೆ ಇಂದು ಏಕ ವ್ಯಕ್ತಿಯೇ ಮಾಡುವಂತಾಗಿ. ಆ ಬಗೆಯ ಜಾನಪದ ಶೈಲಿಯ ಹಾಡುಗಳು ಮಾಯವಾಗಿವೆ. ಹಿಂದೆ ಕೃಷಿ ಬೀಜಗಳು ಕೂಡ ರೈತರೆ ತಯಾರಿಸುತ್ತಿದ್ದರು ಆದರೆ ಈಗ ಆ ಪರಿಸ್ಥಿತಿಯೂ ಇಲ್ಲವಾಗಿದೆ.

ಪಾರಂಪರಿಕ ಕೃಷಿಯಲ್ಲಿ ಮಹಿಳೆಗೆ ಅಲ್ಪವಾದರೂ ಸ್ವನಿರ್ಧಾರ ಸ್ವಂತ ಖರ್ಚುವೆಚ್ಚಗಳ ಮೇಲೆ ಅಲ್ಪವಾದರೂ ನಿಯಂತ್ರಣವಿತ್ತು. ಅಲ್ಲದೆ ಸ್ವಂತ ಆದಾಯ ಬರುತ್ತಿದ್ದರಿಂದ ಅವಳಿಗೂ ಕೂಡ ಒಂದು ಐಡೆಂಡಿಟಿ ಇತ್ತು. ತನ್ನ ಮನೆಯ ಯಜಮಾನ ಇರವಿದ್ದರೂ ತಾನೆ ಕುಟುಂಬ ನಿಭಾಯಿಸುತ್ತೇನೆ ಎಂಬ ಧೈರ್ಯವು ಅವಳಿಗಿತ್ತು. ಆದರೆ ಮಹಿಳಾ ಪರ ಕಾರ್ಯಗಳು ಎಲ್ಲ ಯಂತ್ರಗಳ ಪಾಲಾದ ನಂತರ ತನ್ನ ಅಸ್ತಿತ್ವವನ್ನು ಮನೆಯ ನಾಲ್ಕುಗೋಡೆಗಳ ಮಧ್ಯದಲ್ಲಿ ಕೊಳೆಯುವಂತೆ ಮಾರ್ಪಾಡಗಿರುವುದು ಜಾಗತೀಕರಣದ ಪ್ರಭಾವತಿ ಹೊರತು ಬೇರೆನೊ ಅಲ್ಲ. ಇದಾದ ನಂತರ ಮತ್ತೆ ಅವಳು ಪುರುಷನಿಗೆ ಸಂವಾದಿಯಾಗಿ, ಅಡಿಯಾಳಾಗಿ, ಅಧೀನಳಾಗಿ ಮುಂದುವರೆಯುವಂತಹ ಸ್ಥಿತಿ ಮತ್ತೆ ನಿರ್ಮಾಣವಾಗಿದೆ.

ಇಂದು ಎಲ್ಲೆಡೆಯಲ್ಲಿಯೂ ಕೇಳಿ ಬರುತ್ತಿರುವ ಕೃಷಿಯಲ್ಲಿ ಸ್ವಾವಲಂಬನೆ ಎಂಬ ನಿರ್ವಚನ ಒಂದು ಕಡೆ ಸರಿಯಷ್ಟೆ. ವಾಸ್ತವವಾಗಿ ಕೃಷಿಕರ ಪಾಡು ಗ್ರಾಮೀಣ ಋಣಬದ್ದತೆಯಲ್ಲಿ ಆತ್ಮಹತ್ಯೆಯಂತಹ ಕಾರ್ಯಗಳಿಗೆ ಎಡೆಮಾಡಿಕೊಡುತ್ತಿದೆ. ಸ್ವಂತ ಜಮೀನು ಹೊಂದಿರುವ ಆಗಷ್ಟೇ ಜಮೀನ್ದಾರರು ಸಾಲ ಸೋಲ ಮಾಡಿ ತಂದಿದ್ದ ಹಣದಲ್ಲೆ ಸ್ವಲ್ಪವಾದರೂ ಉತ್ತಮವಾದ ಬದುಕನ್ನು ರೂಪಿಸಿಕೊಳ್ಳುವ, ಕಟ್ಟಿಕೊಳ್ಳುವ ಕನಸಿನಲ್ಲಿಯೇ ಇರುತ್ತಿದ್ದಾರೆ. ಆದರೆ ನಿರಂತರವಾಗಿ ಕೈಕೊಡುತ್ತಿರುವ ಮಳೆ ನೈಸರ್ಗಿಕ ವಿಪತ್ತುಗಳಿಂದ ಕೃಷಿ ಕಾರ್ಮಿಕರೂ ಕೂಡ ಅತಂತ್ರಕ್ಕೆ, ಆತಂಕಕ್ಕೆ ಒಳಗಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ತಮ್ಮ ಬದುಕನ್ನು ಕಟ್ಟಿಕೊಡುವ ಮನೆಯ ಹಿರಿಯ ಹೋದ ಮೇಲೆ ಮನೆಯ ಮಹಿಳೆ ಹಾಗೂ ಮಕ್ಕಳ ಪಾಡು ಅತ್ಯಂತ ಕೀಳಾಗುತ್ತಲೇ ಇದೆ. ಒಂದು ಕಡೆಯಲ್ಲಿ ಯಾಂತ್ರಿಕತೆಯ ಹೊಡೆತಕ್ಕೆ ಸಿಕ್ಕು ನರಳುವವರ ಪಾಡು ಒಂದಾದರೆ, ಇನ್ನೊಂದೆಡೆಯಲ್ಲಿ ನೈಸರ್ಗಿಕ ವಿಕೋಪದಿಂದಾಗಿ, ಮಳೆಯ ಕಣ್ಣಾಮುಚ್ಚಾಲೆಯಿಂದ ಮಹಿಳೆ ಅತಂತ್ರಕ್ಕೆ ಒಳಗಾಗುತ್ತಿದ್ದಾರೆ.

ಸಾಮಾನ್ಯವಾಗಿ ನಾವು ಪರಿಭಾವಿಸುವಂತೆ ಮಹಿಳೆ ಹೊರಗಿನ ಪ್ರಪಂಚದಲ್ಲಿ ಇಂತಹ ಅತಂತ್ರ ಸ್ಥಿತಿಯಲ್ಲಿ ಬದುಕಲು ಎಷ್ಟರ ಮಟ್ಟಿಗೆ ಪೂರಕ ವಾತಾವರಣವಿದೆ. ಎಂದು ಅವಲೋಕಿಸತೊಡಗಿದರೆ ಸ್ವಲ್ಪ ಅನುಕಂಪ ಹಾಗೆಯೇ ಭಯವೂ ಮೂಡುವುದು ಸಹಜ, ಏಕೆಂದರೆ ದಿನನಿತ್ಯ ಅವಮಾನ, ಅಪಮಾನ, ಶೋಷಣೆ, ಯಾತನೆ, ನಿರ್ಲಕ್ಷ್ಯ, ತಾತ್ಸರ್ಯಕ್ಕೆ ಬಲಿಯಾಗುವ ಅವಳಿಗೆ ಸ್ವ ವ್ಯಕ್ತಿತ್ವ ಕಟ್ಟಿಕೊಡುವಲ್ಲಿ ಜಾಗತೀಕರಣವಾಗಲಿ ಅಥವಾ ಯಾಂತ್ರಿಕರಣವಾದಾಗಿನಿಂದಲೂ ಸ್ಪಂಧಿಸಲಾರವು. ಹರಕೆಯ ಕುರಿಯಾಗಿ ಅವಳು ತನ್ನ ಮೇಲೆ ಎಷ್ಟೇ ಶೋಷಣೆಯಾದರೂ ಸಹನೆಯಿಂದಲೆ ಅವುಗಳನ್ನು ಅನುಭವಿಸುವಂತ ಸ್ಥಿತಿ ಇಂದು ಒದಗಿದೆ. ಇದು ಸ್ವಲ್ಪ ಸ್ಥಿತಿವಂತ, ಮಧ್ಯಮವರ್ಗದ ಮಹಿಳೆಯರ

[illegible]

ಸ್ಥಿತಿಯಾದರೆ, ಸಮಾಜದ ಅಂಚಿನಲ್ಲಿರುವ ತಳಸಮುದಾಯದ ಮಹಿಳೆಯ ಸ್ಥಿತಿಯಂತೂ ತುಂಬ ಕಷ್ಟಕರವಾಗಿರುತ್ತದೆ. ಮೇಲ್ವರ್ಗದ ಮಹಿಳೆಯಾದರೆ ಅವಳಿಗೆ ಅಲ್ಪ ಸ್ವಲ್ಪ ಜಾತಿಯ ಸಂರಚನೆಗಳು ಯಾವುದೂ ಒಂದು ಬಗೆಯಲ್ಲಿ ಬೆಂಬಲಕ್ಕೆ ನಿಲ್ಲುತ್ತಿವೆ. ಆದರೆ ಅಂಚಿನಲ್ಲಿ ದಲಿತ, ಹಿಂದುಳಿದ ಮಹಿಳೆ ನಿರಂತರವಾಗಿ ಯಾವುದೇ ಜಾತಿಯ ಬೆಂಬಲವಿಲ್ಲದೆ ತಾನಿರುವುದೆ ಬಳಕೆಗಾಗಿ ಶೋಷಣೆ ಅನುಭವಿಸಲೆಂದು ಹತ್ತು ಹಲವುಬಗೆಯ ದೌರ್ಜನ್ಯಗಳಿಗೆ ಬಲಿಯಾಗುತ್ತಲೇ ಅದೆಲ್ಲವನ್ನು ಮೌನವಾಗಿಯೇ ಸ್ವೀಕರಿಸುತ್ತಿದ್ದಾಳೆ. ಅಲ್ಲದೆ ಸ್ವಂತ ಉಳುಮೆ ಮಾಡಲು ತುಂಬ ಕಷ್ಟವಿದ್ದರೂ ಕೂಡ ಸಾಲಗಾರರ ಕೃಪೆಯಿಂದ ಹೇಗೊ ಉಳುಮೆಯನ್ನು ಮಾಡುತ್ತಿದ್ದರೆ ಅದೂ ಕೂಡ ಮುಂದಿನ ಭವಿಷ್ಯದ ಕರಾಳ ಮುಖಗಳು ಹೇಗೆ ಬರುತ್ತವೆಯೋ ಎಂಬ ಭಯದಿಂದ ಹಲವಾರು ಬಗೆಯ ಶ್ರೇಣಿಕೃತವಾದ ಮೇಲು, ಕೀಳು ಉಚ್ಚ-ನೀಚ, ಶ್ರೇಷ್ಠ-ಕನಿಷ್ಠ ಎಂಬ ತಾರತಮ್ಯಗಳಿರುವ ಸಮಾಜದಲ್ಲಿ ಯಾವುದೇ ಸವಲತ್ತಿದರೂ ಕೂಡ ದುರ್ಬಲರಿಗೆ, ಅಂಚಿನಲ್ಲಿರುವವರಿಗೆ, ಅಲಕ್ಷವರ್ಗದ ಪಾಲಿಗೆ ದಕ್ಕುವುದು ತುಂಬ ವಿರಳ ಒಂದು ವೇಳೆ ಏನಾದರೂ ಸಿಕ್ಕರೆ ಅದು ಕೊನೆಯ ಹಂತದಲ್ಲಿ, ಹಾಗಾಗಿ ಆರ್ಥಿಕವಾಗಿ ನಿರ್ಲಕ್ಷಿತವಾದ ಹಾಗೂ ಉತ್ತಮವಾದ ಕಾರ್ಯಗಳು ತಳಸಮುದಾಯಗಳ ಮಹಿಳೆಗೆ ದೊರೆಯುತ್ತಿರುವುದು ತುಂಬ ಕಡಿಮೆ.

ಸಾಮಾಜಿಕ ವ್ಯವಸ್ಥೆಯಲ್ಲಿನ ಅತ್ಯಂತ ಕ್ಷಿಪ್ರ ಬೆಳವಣಿಗೆಯಲ್ಲಿ ಗುರುತಿಸಲಾದ ಲಿಂಗತಾರತಮ್ಯ ಹಾಗೂ ಶ್ರೇಣಿಕರಣದಂತ ಶ್ರೇಷ್ಠ, ಕನಿಷ್ಠ ಎಂಬ ವಿಭಜನಾಕ್ರಮಗಳ ಮೇಲೆ ಜಾಗತೀಕರಣದ ಪ್ರಭಾವಗಳು ಅನೇಕ ಕಾರಣಗಳಿವೆ. ಈ ಜಾಗತೀಕರಣದಿಂದಾಗಿಯೇ ಸಾಮುದಾಯಿಕ ಬದುಕಿನಲ್ಲಿ ಸ್ತ್ರೀ ಪುರುಷರ ನಡುವೆ ಅಸಮಾನತೆ ಹೆಚ್ಚುತ್ತಿದೆಯಲ್ಲದೆ, ಮಹಿಳೆಯರ ಬದುಕಿನಲ್ಲಾಗುತ್ತಿರುವ ಅನೇಕ ರೀತಿಯ ಬದಲಾವಣೆಗಳು, ಏರುಪೇರುಗಳು ತಾವಾಗಿಯೇ ಸೃಷ್ಟಿಯಾಗುತ್ತಿವೆ ಎಂದರೆ ಅತಿಶಯೋಕ್ತಿ ಎನಿಸಲಾರದು, ಅಲ್ಲದೆ ಜಾಗತೀಕರಣದಿಂದಾಗಿ ಗ್ರಾಮೀಣ ಮಹಿಳಾ ಸಮುದಾಯದ ಮೇಲೆ ಅನೇಕ ಬಗೆಯ ದುಷ್ಪರಿಣಾಮಗಳು ಬೀರುತ್ತಿವೆ.

ವಲಸೆ ಒಂದು ನಿರ್ದಿಷ್ಟ ಉದ್ದೇಶಗ್ಕೋಸ್ಕರ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಜೀವನೋಪಾಯಕ್ಕಾಗಿ ವಲಸೆ ಹೋಗುವುದು, ಗ್ರಾಮೀಣ ವಲಯದಲ್ಲಿ ಸರ್ವೇಸಾಮಾನ್ಯವಾದ ಸಂಗತಿ ಮುಖ್ಯವಾಗಿ ಇದು ಕೃಷಿಯೊಳಗೆ ನಿರಂತರವಾಗಿ ಬರುತ್ತಿರುವ ನಿರುದ್ಯೋಗದ ಹಿನ್ನಲೆಯಲ್ಲಿಯೇ ಅಧಿಕ ಪ್ರಮಾಣದ ವಲಸೆ ಉಂಟಾಗುತ್ತಿದೆ. ವರ್ಷಗಟ್ಟಲೆ ಉದ್ಯೋಗ ಕಳೆದುಕೊಂಡವರು ಅತಂತ್ರ ಸ್ಥಿತಿಯನ್ನು ಸಂಭಾವಿಸಲು ನಗರಗಳಿಗೆ ದೂರುವ ರಾಜ್ಯಗಳಿಗೆ ಕೂಲಿಗಾಗಿ ಗುಳೆ ಹೋಗುತ್ತಿದ್ದಾರೆ. ತನ್ನ ಮನೆಯ ಹಿರಿಯ ಗುಳೆ ಹೋದಾಗ ಮನೆಯ ಎಲ್ಲಾ ಜವಾಬ್ದಾರಿಯನ್ನು ಮಹಿಳೆಯ ಹೆಗಲಿಗೆ ಬೀಳುತ್ತವೆ. ಅಲ್ಲದೆ ಯಾರು ಹೊತ್ತಿನ ಊಟಕ್ಕಾಗಿ ಉದ್ಯೋಗಕ್ಕಾಗಿ ಅಲೆಯುವ ಮಹಿಳೆಯರ ಸಂಖ್ಯೆ ಕಡಿಮೆ ಏನಿಲ್ಲ.

ಹೀಗೆ ಯಾಂತ್ರಿಕೃತವಾದ ಜೀವನ ಗ್ರಾಮೀಣ ಕೃಷಿಕಾರ್ಮಿಕ ಮಹಿಳೆ ಅತಂತ್ರವಾದ ಬದುಕನ್ನು ನಡೆಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ಜಾಗತೀಕರಣದಿಂದಲೇ. ಒಂದು ಕಡೆಯಲ್ಲಿ ಗ್ರಾಮೀಣ ಸ್ವರಾಜ್ಯ, ಗ್ರಾಮೀಣ ರಾಮರಾಜ್ಯಗಳ ಬಗ್ಗೆ ಉದ್ದುದ್ದ ಮಾತನಾಡುವ ನಮ್ಮ ಪುಡಾರಿಗಳು ಕೃಷಿಕರ ಪರಿಸ್ಥಿತಿಯನ್ನು ಸುಧಾರಿಸಲೆಂದು ತೋರಿಕೆಯ ಯೋಜನೆಗಳನ್ನು ರೂಪಿಸಿದರೂ ಕೂಡ ಅವುಗಳೆಲ್ಲವೂ ಕಾಗದದಡಿಯಲ್ಲಿಯೇ ತಮ್ಮ ಆಯಶನ್ನು ಕಳೆಯುತ್ತಲೆ ಇವೆ. ಜಾಗತೀಕರಣವನ್ನು ಬಹುವಾಗಿ ಅಪ್ಪಿದ ಭಾರತೀಯ ನೇತಾರರು ಅದರ ಹಿಂದಿನ ಕುಟೀಲತೆಗಳನ್ನು ಅರಿಯುವಲ್ಲಿ ಎಡವಿದ್ದಾರೆಂದರೆ ಅತಿಶಯೋಕ್ತಿ ಎನಿಸಲಾರದು.

ಜಾಗತೀಕರಣದ ನೀತಿಯ ಪ್ರಭಾವದಿಂದ ಕೃಷಿಕೂಲಿಕಾರ ಗ್ರಾಮೀಣ ಸಮುದಾಯದ ಮಹಿಳೆಯ ಮೇಲೆ ಅಧಿಕ ಪ್ರಮಾಣದ ದುಷ್ಪರಿಣಾಮಗಳನ್ನು ಬೀರುತ್ತಿದೆ. ಅಲ್ಲದೆ ಮಹಿಳೆಯ ಬದುಕಿನ ಎಲ್ಲಾ ಬಗೆಯ ಅವಕಾಶಗಳನ್ನು ದಿನನಿತ್ಯದ ದುಡಿಮೆಯನ್ನು ಕಿತ್ತುಕೊಳ್ಳುತ್ತಿವೆ. ಹೀಗಿರುವ ಜಾಗತೀಕರಣದ ಅಡಿಯಲ್ಲಿ ಮಹಿಳೆಯ ಬದುಕು, ಅವಕಾಶಗಳು ಮಾಯವಾಗುತ್ತ ನಡೆದಿವೆ. ಮಹಿಳಾ ದುಡಿಮೆ, ಎಂಬ ನಿರ್ವಚನ ಮರೆಯಾಗುತ್ತಿವೆ ಲಿಂಗ ಪರಾಕಾಷ್ಠೆ ಹೆಚ್ಚುತ್ತಿದೆ. ಅವಕಾಶಗಳು ಕಡಿತಮಾಡಲಾಗುತ್ತಿದೆ. ಅವಳ ಅಸ್ತಿತ್ವ, ಸೃಜನಶೀಲತೆ, ಅನನ್ಯತೆಗಳು ಪ್ರಶ್ನೆಗಳಾಗಿಯೆ ಉಳಿಯುತ್ತಿದೆ. ಮಹಿಳಾ ದುಡಿಮೆಯಾ ಪಿತೃ ಪ್ರಧಾನ ವ್ಯವಸ್ಥೆಯ ಪೂರಕ ಸೀಮಾವಲಯವಾಗಿ ನಿಂತಿದೆ. ಇಂತಹ ದುಡಿಮೆ ಸಾಮಾಜಿಕ ಅಭಿಪ್ರಾಯ ರೂಪಿಸಲು ಅವಕಾಶವನ್ನು ನೀಡುವುದಿಲ್ಲ. ಬದಲಿಗೆ ಜೈವಿಕ ಮತ್ತು ಕೌಟುಂಬಿಕ ಜವಾಬ್ದಾರಿಯೊಂದಿಗೆ ಮತ್ತೊಂದು ಹೊಣೆಗಾರಿಕೆಯಾಗಿದೆ. ಈ ದುಡಿಮೆಯ ಸಂಬಳ ಮಹಿಳೆಗೆ ಒಂದು ರೀತಿಯಲ್ಲಿ ಆರ್ಥಿಕ ಭದ್ರತೆಯನ್ನು ಸಮಾಜದಲ್ಲಿ ಒಂದು ಚಹರೆಯನ್ನು ಒದಗಿಸಿಕೊಡುವಲ್ಲಿ ಸಹಾಯಕವಾಗಿದೆ."[೪] ಆದರೆ ಈ ಬಗೆಯ ಭದ್ರತೆಯನ್ನು ಉಳಿಸಿಕೊಳ್ಳುವಲ್ಲಿ ಪಿತೃಪ್ರಧಾನ ಮೌಲ್ಯಗಳು ಕೂಡ ಅವಳಿಗೆ ಬಿಡುತ್ತಿಲ್ಲ. ಇದರಿಂದ ಅವಳು ಅತಂತ್ರ ಸ್ಥಿತಿಗೆ ಬಂದು ತಲುಪಿದ್ದಾಳೆ. ವಾಸ್ತವವಾಗಿ ಜಾಗತೀಕರಣದ ಹಿಡಿತ ಸಾಮಂತಶಾಹಿ, ವಸಹಾತುಶಾಹಿ ಹಾಗೂ ಉಳಿಗಮಾನ್ಯಶಾಹಿ ವ್ಯವಸ್ಥೆಗಳ ಮುಂದುವರೆದ ರೂಪ ಇದಾಗಿದೆ. ಸಾಂಪ್ರದಾಯಿಕವಾದ ಕೃಷಿ ಮತ್ತು ಕೃಷಿ ಪೂರಕ ಚಟುವಟಿಕೆಗಳಲ್ಲಿ ಮಹಿಳಾ ದುಡಿಮೆಯೂ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತ ಬಂದಿತ್ತು. ಸಾವಯವ ಕೃಷಿ ವಿಧಾನದಲ್ಲಿ ಬೀಜ ನಿರ್ಮಾಣದಿಂದ ಧಾನ್ಯಗಳ ಸಂಗ್ರಹದವರೆಗೂ ಎಲ್ಲಾ ಕಡೆ ಅವಳ ಹಾಜರಾತಿ ಎದ್ದು ಕಾಣುತ್ತಿತ್ತು. ಅವಳ ಸಹಭಾಗಿತ್ವ ಅಥವಾ ಪಾಲುದಾರಿಕೆಯನ್ನು ಹೊರತು ಪಡಿಸಿ ಕೃಷಿ ಚಟುವಟಿಕೆಗಳನ್ನು ಊಹಿಸಿಕೊಳ್ಳಲು ಸಾಧ್ಯವೆ ಇರುತ್ತಿರಲಿಲ್ಲ. ಆದರೆ ಜಾಗತೀಕರಣದ ಪ್ರಭಾವದಿಂದಾಗಿ ಕೃಷಿ ವಲಯ ಕೈಗಾರಿಕಾವಲಯವಾಗಿ ಮಾರ್ಪಾಡಾಗಿದೆ. ಮಾರುಕಟ್ಟೆಯ ಲಾಭ ನೀತಿ ಮತ್ತು ಯಾಂತ್ರಿಕ ಕೃಷಿ ಚಟುವಟಿಕೆಗಳು ಮಹಿಳೆಯರನ್ನು ಕೃಷಿ ಅನಕ್ಷರಸ್ಥರನ್ನಾಗಿ, ಅಸ್ಪೃಶ್ಯರನ್ನಾಗಿ ರೂಪಿಸತೊಡಗಿವೆ. ಆಧುನಿಕ ಬೇಸಾಯ ಪದ್ಧತಿಯಲ್ಲಿ ಅಧಿಕವಿರುವ ಯಂತ್ರಗಳು, ವಿದ್ಯುತ್ ಕಟಾವು, ಕ್ರಿಮಿನಾಷಕಗಳು,

ಔಷಧಿ ಸಿಂಪಡಿಸುವಿಕೆಯ ವಿಧಾನ ಇಂತಹ ಎಲ್ಲಾ ಪಾರಿಭಾಷೆಗಳು ಮಹಿಳಾ ಸಂವೇದನೆಗೆ ಅತ್ಯಂತ ಪೂರಕವಾದವುಗಳಾಗಿವೆ. ಯಂತ್ರಗಳು ಅತ್ಯಂತ ಕಡಿಮೆ ಮಟ್ಟದ ಮಾನವ ಶ್ರಮವನ್ನು ಬಯಸುತ್ತವೆ. ಮಾನವ ಶ್ರಮದ ಕಡಿತ ಎಂದರೆ ಅದು ಮಹಿಳಾ ದುಡಿಮೆಯ ಕಡಿತವೆಂದೆ ಪರಿಭಾವಿಸಬೇಕಾಗುವುದು ಮುಕ್ತ ಮಾರುಕಟ್ಟೆಯ ನೀತಿಗೆ ಸೋತು ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಒಂದು ಕಡೆಯಾದರೆ, ಕುಟುಂಬ ಜವಾಬ್ದಾರಿ ಮತ್ತು ಕೃಷಿಯ ಅಪರಿಚಿತ ಸ್ಥಿತಿಯುಂಟಾಗಿ ಮಹಿಳಾ ಪರಿಶ್ರಮ ನಿರೂಪಯೋಗಿಯಾಗುತ್ತದೆ. ಜಗತ್ತಿನ ಒಟ್ಟು ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣ ೩% ರಷ್ಟು ಇದ್ದರೂ ಸಹ ಅವಳು ಮಾರುಕಟ್ಟೆಯ ನಿಯಂತ್ರಣದ ಶಕ್ತಿಯನ್ನು ಪಡೆಯಲು ಸಾಧ್ಯವಾಗಿಲ್ಲ. ಅವಳು ಗುಲಾಮಿ ಪದ್ಧತಿ ಅಥವಾ ಸಂಸ್ಕೃತಿಯ ಮುಂದುವರೆದ ಭಾಗವಾಗಿಯೇ ನಡೆಯುತ್ತಿದ್ದಾಳೆ. ಅಲ್ಲದೆ ಜಾಗತೀಕರಣ ಮಹಿಳೆಯರನ್ನು ಅಸಂಘಟಿತ ವಲಯದ ಕಾರ್ಮಿಕರನ್ನಾಗಿ ಮಾಡುತ್ತಿದೆ. ದೇಹಬದ್ದವಾದ ಹಾಗೂ ಸೀಮಾಕ್ಷೇತ್ರದ ಕಾರ್ಮಿಕರನ್ನಾಗಿ ಪರಿವರ್ತಿಸುತ್ತಿರುವುದು ಮುಂದಿನ ದಿನಗಳಲ್ಲಿ ಬಂದೊದಗುವ ಅಪಾಯಕಾರಿ ಪ್ರವೃತ್ತಿಗಳ ಕರಾಳ ಮುಖದಂತೆ ಗೋಚರಿಸುತ್ತಿದೆ.

[illegible]

## ಅಡಿಟಿಪ್ಪಣಿ

೧. ವಿನಯಾ, ೫೯, ಹೊಸತು ಪತ್ರಿಕೆ,

೨. ಉಷಾ ಎಂ.೬೯, ಆಧುನಿಕ ಮಹಿಳಾ ಸಾಹಿತ್ಯ

೩. ಹೇಮಲತ ಹೆಚ್.ಎಂ, ೩೦, ಮಹಿಳೆ ಮತ್ತು ದುಡಿಮೆ ಮಹಿಳಾಭಿವೃದ್ಧಿ ಕಾರ್ಯನೀತಿ ಯೋಜನೆಗಳು

೪. ಅದೇ, ಪುಟ-೩೭

# ಉಪಸಂಹಾರ

# ಉಪಸಂಹಾರ

ಕೃಷಿಗೂ ಮಹಿಳೆಗು ಪ್ರಾಚೀನ ಕಾಲದಿಂದಲೂ ಆತ್ಮೀಯವಾದ ಸಂಬಂದ ಹೊಂದಿದೆ. ಇಂದಿಗೂ ಗ್ರಾಣ ಪ್ರದೇಶದಲ್ಲಿ ಮಹಿಳೆಯೇ ಕೃಷಿ ಕಾರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಾಳೆ. ಕುಟುಂಬದ ಪ್ರತಿಯೊಂದು ಕಾರ್ಯ ನಿರ್ವಹಣೆಯಲ್ಲಿ ಅವಳ ಭಾಗವಹಿಸುವಿಕೆ ಪ್ರಮುಖವಾಗಿದೆ. ಆದರೂ ಪುರುಷಶಾಹಿ ವ್ಯವಸ್ಥೆಯ ಅಡಿಯಲ್ಲಿ ಅವಳ ಜೀವನ ಮರಗಿ ಹೋಗಿದೆ. ನಮ್ಮ ದೇಶದ ವಿವಿಧ ಜಾತಿ ವರ್ಗ ಧರ್ಮಗಳಲ್ಲಿ ಮಹಿಳೆಯರ ಜೀವನ ಬೇರೆ ಬೇರೆ ರೀತಿಯಾಗಿರುವುದರಿಂದ ಭಾರತದ ಮಹಿಳೆಯರ ಜೀವನ ಬೇರೆ ಬೇರೆ ರೀತಿಯಾಗಿರುವುದರಿಂದ ಭಾರತದ ಮಹಿಳೆಯರ ಜೀವನದ ಹೋರಾಟದ ಬಗ್ಗೆ ಒಂದು ಸಾಮಾನ್ಯ ವಿವರಣೆ ನೀಡುವುದು ಕಷ್ಟ. ಶೇಕಡ ೮೦ ರಷ್ಟು ಜನ ಹಳ್ಳಿಗಳಲ್ಲಿ ವಾಸಿಸುತ್ತಾರೆ. ಹೆಚ್ಚಿನ ಸಂಖ್ಯೆಯ ಮಹಿಳೆಯರು ರೈತ ಕುಟುಂಬಕ್ಕೆ ಮತ್ತು ಭೂಮಿಯಿಲ್ಲದ ಕೃಷಿ ಕಾರ್ಮಿಕರ ಕುಟುಂಬಕ್ಕೆ ಸೇರಿದವರಾಗಿರುತ್ತಾರೆ. ಆದುದರಿಂದ ಭಾರತೀಯ ಮಹಿಳೆಯರ ಜೀವನದ ಬಗ್ಗೆ ಮಾತನಾಡುವಾಗ ನಾವು ಈ ಗ್ರಾಮೀಣ ಮಹಿಳೆಯರಿಗೆ ಹೆಚ್ಚಿನ ಗಮನ ನೀಡಬೇಕು.

ದೇವದುರ್ಗ ತಾಲೂಕಿನ ಮಹಿಳೆಯರು ಕುಟುಂಬ ನಿರ್ವಹಣೆಯಲ್ಲಿ ಪ್ರಮುಖವಾದ ಪಾತ್ರ ನಿರ್ವಹಿಸುತ್ತಾರೆ. ಒರಗಡೆ ಕೂಲಿ ಕೆಲಸ ಮಾಡಿ ಮನೆಯ ಪ್ರತಿಯೊಂದು ಕೆಲಸದಲ್ಲಿ ಭಾಗಿಯಾಗುವಲ್ಲಿ ಇವಳ ಶ್ರಮ ಅಪಾರವಾದದ್ದುದಾಗಿದೆ. ಮಳೆ ಇಲ್ಲದೆ ಒಣ ಹವೆಯಿಂದ ಕೂಡಿದ ಈ ಒಂದು ಪ್ರದೇಶದಲ್ಲಿ ಮಹಿಳೆಯರು ಊರಿಂದ ಊರಿಗೆ ವಲಸೆ ಹೋಗಿ ಕೃಷಿಕೂಲಿಯಲ್ಲಿ ಪುರುಷರಿಗೆ ಸಮಾನಂತರವಾಗಿ ಕೆಲಸದಲ್ಲಿ ತೊಡಗುವರು. ಆದರೂ ಇವರ ಶ್ರಮಕ್ಕೆ ತಕ್ಕಂತೆ ಸರಿಯಾದ ವೇತನ ಸಿಗಲಾರದೇ ಶೋಚನೀಯವಾಗಿದೆ. ಇಲ್ಲಿಯ ಮಹಿಳೆಯರ ಜೀವನದ ಮುಖ್ಯ ಹೋರಾಟವೆಂದರೆ ತಮಗಾಗಿ ಮತ್ತು ಮನೆಯವರಿಗಾಗಿ ಆಹಾರ ಸಂಪಾದಿಸುವುದು. ಅದಕ್ಕಾಗಿ ದವಸಧಾನ್ಯ ನೀರು ಸೌದೆ ಮುಂತಾದವುಗಳನ್ನು ಸಂಗ್ರಹಿಸುವುದೇ ಅವರ ಜೀವನದ ಮುಖ್ಯ ಕೆಲಸ ಅವರ ಶ್ರಮದ ಮೇಲೆ, ಉತ್ಪಾದನೆಯ ಮೇಲೆ ಯಾವುದೇ ನಿಯಂತ್ರಣವಿಲ್ಲ ಕುಟುಂಬದ ಸಂಪನ್ಮೂಲದಲ್ಲಿ ಯಾರಿಗೆ ಎಷ್ಟು ಬೇಕು ಅನ್ನುವುದನ್ನು ನಿರ್ಧರಿಸುವ ಅಧಿಕಾರ ಅವರಿಗಿರುವುದಿಲ್ಲ.

# [illegible]

[illegible]

[illegible]

[illegible]

[illegible]

ಮಹಿಳಾ ಕೃಷಿ ಕೂಲಿಕಾರರಿಗೆ ಇಂದು ಅಸ್ತಿತ್ವವೇ ಇಲ್ಲದಂತಾಗಿದೆ. ಈ ಒಂದು ಪರಿಸ್ಥಿತಿ ಇಂದು ನಿನ್ನೆಯದಲ್ಲ. ಹಿಂದಿನಿಂದಲೂ ಈ ಒಂದು ಇರುವಿಕೆ ಕಂಡು ಬಂದಿದೆ. ಗ್ರಾಮ ಸಮಾಜದಲ್ಲಿ ಅತ್ಯಂತ ಉಪೇಕ್ಷೆಗೆ ಒಳಪಟ್ಟಿರುವ ಭಾರತದ ಕೃಷಿ ಕೂಲಿಕಾರರು ದಾರಿದ್ರ್ಯ, ದೈನತೆ, ಶೋಷಣೆಗಳ, ಪ್ರತೀಕವಾಗಿದ್ದಾರೆ. ಈ ಒಂದು ಸ್ಥಿತಿ ದೇವದುರ್ಗ ತಾಲೂಕಿನಲ್ಲಿ ಸಹಜವಾಗಿಯೇ ಕಂಡುಬರುತ್ತವೆ. ಇಲ್ಲಿಯೆ ಮಹಿಳಾ ಕೂಲಿಕಾರರಾಗಿ ದುಡಿಯುವರು ಸಾಮಾನ್ಯವಾಗಿ ಭೂರಹಿತ ಕಾರ್ಮಿಕರು ಇವರಲ್ಲಿ ಬಹುಪಾಲು ಜನ ಹಿಂದುಳಿದ ದುರ್ಬಲ ವರ್ಗದ ಜನಾಂಗಕ್ಕೆ ಸೇರಿದವರಾದ್ದರಿಂದ ಆರ್ಥಿಕವಾಗಿ, ಸಾಮಾಜಿಕವಾಗಿ, ಉಪೇಕ್ಷೆಗೆ ಒಳಗಾಗಿದ್ದಾರೆ. ಇವರು ಒಂದೇ ಕಡೆ ಕೇಂದ್ರಿಕೃತವಾಗಿರದೆ ಗ್ರಾಮಂತರ ಪ್ರದೇಶಗಳಲ್ಲಿ ಚದುರಿ ಹೋಗಿರುವುದರಿಂದ ಇವರಲ್ಲಿ ಸಂಘಟನೆ ಇಲ್ಲದಂತಾಗಿದೆ. ಸಂಘಟನೆ ಇಲ್ಲದೆ ಉದ್ಯೋಗ ಸ್ಥಿತಿಗತಿಗಳು ಉತ್ತಮಗೊಳ್ಳುವುದು ಕಷ್ಟ, ಸುಸಂಘಟಿತರಲ್ಲವಾದವರಿಂದ ಕೂಲಿಕಾರರಿಗೆ ಸಾಮೂಹಿಕ ಚೌಕಾಸಿ ಮಾಡುವ ಸಾಧ್ಯತೆಯುಂಟು. ಇದರ ಫಲವಾಗಿ ನ್ಯಾಯಯುತ ವೇತನದ ಗಳಿಕೆಯು ಕೂಲಿಕಾರರಿಗೆ ಮಹಿಳೆಗೆ ಮರಿಚಿಕೆಯಾಗಿ ಪರಿಣಮಿಸಿದೆ. ಇಲ್ಲಿಯ ಕೂಲಿಕಾರಳಾದ ಮಹಿಳೆಯರು ಅನೇಕರು ಅವಿದ್ಯಾವಂತರು ಅಜ್ಞಾನರು ಹಾಗೂ ಮೌಢ್ಯತೆಯಿಂದ ಕೂಡಿದ ಅನೇಕ ಪದ್ಧತಿಗಳನ್ನು ಹಿಂದಿನಿಂದಲೂ ಮುಂದುವರಿಸಿಕೊಂಡು ಹೋಗುವ ದಾಸರಾಗಿದ್ದಾರೆ. ಹೀಗಾಗಿ ಅಮಾಯಕರಾದ ಇಲ್ಲಿಯ ಮಹಿಳೆಯರು ಅತೀ ಸುಲಭವಾಗಿ ಭೂಮಾಲೀಕರ ಹಿಡಿತದಲ್ಲಿ ಸಿಕ್ಕಿ ಬೀಳುತ್ತಾರೆ.

ಕೃಷಿ ಋತುಮಾನದ ಕೈಗೊಂಬೆಯಾಗಿರುವುದರಿಂದ ಇಲ್ಲಿಯ ಕೂಲಿಕಾರರಿಗೆ ವರ್ಷವಿಡೀ ಉದ್ಯೋಗ ದೊರಕಲಾರದು. ಅರೆ ಉದ್ಯೋಗ ದೊರಕಿ ಇಲ್ಲಿ ಹೆಚ್ಚು ಜನರೇ ಬೇರೆಂದು ಸ್ಥಳಕ್ಕೆ ತಮ್ಮ ಪರಿವಾರ ಸಮೇತರಾಗಿ ಕೂಲಿ ಕೆಲಸಕ್ಕೆ ಹೋಗುವ ಪರಿಪಾಠವಿದೆ. ಮನೆಯಲ್ಲಿ ಅತೀ ವಯಸ್ಸಾದ ವೃದರನ್ನು ಬಿಟ್ಟು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಬೆಂಗಳೂರು, ಮಂಗಳೂರು, ಬಾಂಬೆ, ಪುಣೆ, ದಕ್ಷಿಣ ಕರ್ನಾಟಕ ಹೀಗೆ ಪಟ್ಟಣಗಳ ಕಡೆಗೆ ವಲಸೆ ಹೋಗಿ ಬದುಕನ್ನು ಕಟ್ಟಿಕೊಳ್ಳುವುದು ಇಲ್ಲಿಯ ಜನರ ಶೋಚನೀಯ ಸಂಗತಿಯಾಗಿದೆ. ಕೂಲಿಕಾರರು ತಮಗೆ ಬರುವ ಅಲ್ಪ ಆದಾಯದಲ್ಲಿ ಶೇಕಡ ೭೦ರಿಂದ ೮೦ರಷ್ಟನ್ನು ಜೀವನ ಅವಶ್ಯಕ ವಸ್ತುಗಳ ಪೂರೈಕೆಗಾಗಿಯೇ ಖರ್ಚು ಮಾಡಬೇಕಾಗುತ್ತದೆ. ಇಲ್ಲಿಯ ಮಹಿಳೆಯರಿಗೆ ಕಡಿಮೆ ನೀಡುವ ಕಡಿಮೆ ವೇತನವು ಇವರ ಜೀವನಕ್ಕೆ ವೆಚ್ಚವಾಗುವುದರಿಂದ ಅನಿವಾರ್ಯ ಪ್ರಸಂಗಗಳಲ್ಲಿ ಅವರು ಹಳ್ಳಿಯ ಲೇವಾದೇವಿಗಾರರಲ್ಲಿ ಸಾಲಮಾಡುತ್ತಾರೆ. ಹೀಗೆ ಸಾಲ ಮಾಡಿದನ್ನು ತಮ್ಮ ಅಲ್ಪ ಕೂಲಿಯನ್ನು ತೀರಿಸಲಾಗದೆ. ಆ ಒಂದು ಸಾಲ ಬೆಳೆಯುತ್ತಲೇ ಇರುತ್ತದೆ. ಸಾಲವನ್ನು ತೀರಿಸಲಾರದ ನತದೃಷ್ಟ ಕೂಲಿಕಾರರು ಭೂಮಾಲೀಕರ ಜಮೀನ್‌ನಲ್ಲಿ ದುಡಿಯಲು ತೊಡಗುತ್ತಾರೆ. ಇದಕ್ಕೆ ಮೂಲ ಕೃಷಿಕೂಲಿಕಾರರ ಅಜ್ಞಾನ, ದಾರಿದ್ರ್ಯ, ಅನಕ್ಷರಸ್ಥೆತೆ ಮುಂತಾದವು ಕಾರಣಗಳನ್ನು ನೀಡಬಹುದು.

[illegible]

ಈ ಒಂದು ವ್ಯವಸ್ಥೆಯಿಂದ ಕೂಲಿಕಾರರ ಮಕ್ಕಳಿಗೆ ಶಿಕ್ಷಣವು ಕುಂಠಿತವಾಗಲು ಪ್ರಭಲ ಕಾರಣವಾಗಿದೆ. ಹೀಗಾಗಿ ದೇವದುರ್ಗ ತಾಲೂಕಿನ ಕೃಷಿ ಕೂಲಿಕಾರರ ಮಹಿಳೆಯರು ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿವಿಕೆಗೆ ಪ್ರಮುಖ ಕಾರಣವಾಗಿದೆ. ಮಹಿಳಾ ಕೃಷಿಕೂಲಿಕಾರರು ಪುರುಷಶಾಹಿ ವ್ಯವಸ್ಥೆಯ ಅಡಿಯಲ್ಲಿ ಇಂದು ನಲುಗಿ ಹೋಗಿದ್ದಾರೆ. ಇಲ್ಲಿಯ ಗ್ರಾಮೀಣ ಮಹಿಳೆಯರು ಕೃಷಿ ಕೆಲಸದಲ್ಲಿ ಉತ್ತುವುದು, ಬಿತ್ತುವುದು, ಕೊಯ್ಲು ಮಾಡುವುದು ಮತ್ತು ಮಾರುವುದರಿಂದ ಹಿಡಿದು ಮನೆಕೆಲಸ ಮಕ್ಕಳನ್ನು ನೋಡಿಕೊಳ್ಳುವುದು ಎಲ್ಲವನ್ನು ಅವರೇ ಮಾಡುತ್ತಾರೆ. ಹೀಗೆ ದಿನಪೂರ್ತಿ ಕೊನೆಯಿಲ್ಲದ ಕೆಲಸವನ್ನು ಮಾಡಿದರೂ ಅವರಿಗೆ ಇರುವ ಅನುಕೂಲಗಳನ್ನು ನೋಡಿದರೆ ಏನು ಏನಿಲ್ಲ, ಮಳೆಯಿಲ್ಲದೇ ಬರಡಾದ ದೇವದುರ್ಗ ತಾಲೂಕಿನಲ್ಲಿ ಕುಡಿಯುವ ನೀರಿನ ಸೌಕರ್ಯ ಸರಿಯಾಗಿಲ್ಲ ನೀರಿಗೋಸ್ಕರ ಮೈಲುಗಟ್ಟಲೆ ನಡೆಯಬೇಕು, ನೀರು ಸಿಕ್ಕರು ಅದು ಶುದ್ಧವಾಗಿರುವುದಿಲ್ಲ ಇದರಿಂದ ಇಲ್ಲಿಯ ಜನತೆ ಹಲವು ಕಾಯಿಲೆಗಳಿಗೆ ತುತ್ತಾಗಿರುವುದು ನಾನು ಕೈಗೊಂಡ ಕ್ಷೇತ್ರಕಾರ್ಯದ ಆಧಾರದ ಮೇಲೆ ತಿಳಿದುಬಂದಿದೆ.

ಒಟ್ಟಾರೆ ದೇವದುರ್ಗ ತಾಲೂಕಿನ ಮಹಿಳಾ ಕೂಲಿಕಾರರನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಇಲ್ಲಿಯ ಮಹಿಳೆಯರ ಬದುಕು ತುಂಬಾ ಚಿಂತಾಜನಕವಾಗಿದೆ ತಾವು ದುಡಿದ ದುಡಿಮೆಗೆ ಸರಿಯಾದ ವೇತನವಿಲ್ಲದೆ ಭೂ ಒಡೆಯರ ಅಧೀನಕ್ಕೆ ಒಳಗಾಗಿ ತುಂಬಾ ಕಷ್ಟಕರವಾದ ಬದುಕನ್ನು ನಿರ್ವಹಿಸುತ್ತಿದ್ದಾರೆ. ಪುರುಷಶಾಹಿ ವ್ಯವಸ್ಥೆಯ ಅಡಿಯಲ್ಲಿ ಸಿಲುಕಿರುವ ಇಲ್ಲಿಯ ಮಹಿಳೆಯರು ಪ್ರತಿಯೊಂದು ವಲಯಗಳಲ್ಲಿ ಹಿಂದುಳಿಯುವಿಕೆಗೆ ಪ್ರಮುಖ ಕಾರಣವಾಗಿದೆ. ಮತ್ತೊಂದೆಡೆ ಅಜ್ಞಾನ, ಅನಕ್ಷರತೆ, ಹಾಗೂ ಮೌಢ್ಯತೆ ಇವರ ಬದುಕಲ್ಲಿ ಆವರಿಸಿ ಇವರಡು ಸಮಾಜದ ಮುಖ್ಯವಾಹಿನಿಗೆ ಇಂದಿಗೂ ಭಾರದಂತಾಗಿದ್ದಾರೆ.

# ಅನುಬಂಧಗಳು

೧. ಪ್ರಶ್ನಾವಳಿಗಳು
೨. ಗ್ರಂಥಸೂಚಿ
೩. ವಕ್ತೃವಿವರ
೪. ಛಾಯಾಚಿತ್ರ

## ೧. ದೇವದುರ್ಗ ತಾಲೂಕಿನ ಮಹಿಳಾ ಕೂಲಿಕಾರರು

### ಹೊಲ ಗದ್ದೆಗಳಲ್ಲಿ ದುಡಿಯುವ ಮಹಿಳೆಯರು


| ಸಂದರ್ಶಕರು | ಮಾರ್ಗದರ್ಶಕರು |
|---|---|
| ರಜನಿಕಾಂತ ಬಿಲ್ಲವ್ | ಡಾ.ವಿಠಲರಾವ್ ಟಿ. ಗಾಯಕ್ವಾಡ್ |
| ಮಹಿಳಾ ಅಧ್ಯಾಯನ ವಿಭಾಗ | ಭಾಷಾಂತರ ಅಧ್ಯಯನ ವಿಭಾಗ |
| ಕ.ವಿ.ವಿ.ಹಂಪಿ | ಕ.ವಿ.ವಿ.ಹಂಪಿ |


### ಸಾಮಾನ್ಯ ಮಾಹಿತಿ

ಹೆಸರು..................... ವಯಸ್ಸು .....................

ಜಾತಿ..................... ಶೈಕ್ಷಣಿಕ ಮಟ್ಟ ವಿದ್ಯಾರ್ಹತೆ.....................

ಊರು ಗ್ರಾಮ .....................

೧. ನೀವು ಯಾವ ತರಹದ ಕೃಷಿ ಕೆಲಸದಲ್ಲಿ ತೊಡಗಿಕೊಂಡಿರುವಿರಿ ?

ಅ. ಬಿತ್ತುವುದು ಬ.ಕಳೆ ತೆಗೆಯುವುದು ಕ.ನಾಟೀ ಮಾಡುವುದು ಡ.ರಾಶಿಮಾಡುವುದು

೨. ಒಂದು ದಿನಕ್ಕೆ ನಿಮಗೆ ಕೂಲಿ ಎಷ್ಟು ?

ಅ.೩೫-೪೫ ಬ.೪೫-೫೫ ಕ.೫೫-೬೫ ಡ.೬೫-೭೫

೩. ನಿಮ್ಮ ಕೂಲಿಯಿಂದಲೇ ನಿಮ್ಮ ಕುಟುಂಬದ ನಿರ್ವಹಣೆ ಆಗುತ್ತಿದೆಯೆ ?

ಅ.ಹೌದು ಬ.ಇಲ್ಲ

೪. ಇದೆ ಕೂಲಿಯನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದಿರಾ ?

ಅ.ಹೌದು ಬ.ಇಲ್ಲ

೫. ಇದೇ ಕೂಲಿಯನ್ನು ಅರಿಸಿಕೊಂಡು ಬೇರೆ ಸ್ಥಳಗಳಿಗೆ ಹೋಗುತ್ತೀರಾ ?

ಅ.ಹೌದು ಬ.ಇಲ್ಲ

೬. ಪುರಷರು ಮತ್ತು ಮಹಿಳೆಯರಿಗೆ ಕೂಲಿಯಲ್ಲಿ ವ್ಯತ್ಯಾಸವಿದೇಯೆ ?

ಅ.ಹೌದು ಬ.ಇಲ್ಲ

೭. ನೀವು ದುಡಿಯತಕ್ಕಂತ ಕೆಲಸದ ಅವಧಿ ಎಷ್ಟು ?

ಅ. ೫ ತಾಸು ಬ. ೭ ತಾಸು ಕ. ೮ತಾಸು

೮. ಕೆಲಸ ಮಾಡುವು ಸ್ಥಳದಲ್ಲಿ ನಿಮ್ಮ ಮೇಲೆ ಹಿಂಸೆ ದೌರ್ಜನ್ಯ ನಡೆದಿದೆಯೇ ?

ಅ.ಹೌದು ಬ.ಇಲ್ಲ

೯. ಕೂಲಿ ಅಲ್ಲದೇ ಬೇರೆ ಯಾವದಾದರೂ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರಾ ?

ಅ.ಕೋಳಿಸಾಗಾಣಿಕೆ ಬ.ಕುರಿಸಾಗಾಣಿಕೆ ಕ.ಹೈನುಗಾರಿಕೆ ಡ.ಯಾವುದು ಇಲ್ಲ

೧೦. ವರ್ಷದಲ್ಲಿ ನಿಮಗೆ ಎಷ್ಟು ತಿಂಗಳ ಅವಧಿ ಕೂಲಿ ಕೆಲಸವಿರುತ್ತದೆ ?

ಅ. ೩ ತಿಂಗಳು ಬ. ೫ ತಿಂಗಳು ಕ. ೮ ತಿಂಗಳು

೧೧. ನಿಮ್ಮನ್ನು ದುಡಿಸಿಕೊಳ್ಳುವ ಮಾಲೀಕನಿಂದ ಯಾವ ರೀತಿಯಿಂದಾದರು ತೊಂದರೆ ಆಗಿದಯೆ?

ಅ.ಹೌದು ಬ.ಇಲ್ಲ

೧೨. ನಿಮ್ಮ ಕೂಲಿ ಆರ್ಥಿಕ ಸ್ವಾವಲಂಬನೆಯನ್ನು ಒದಗಿಸಿದೆಯೇ ?

ಅ.ಹೌದು ಬ.ಇಲ್ಲ

೧೩. ನಿಮಗೆ ಬರುವ ಕೂಲಿಯಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನಿಮ್ಮ ಕೂಲಿ ಸಾಕಾಗುತ್ತದೆಯೇ ?

ಅ. ಸಾಕಾಗುತ್ತೆ ಬ.ಸಾಕಾಗುವುದಿಲ್ಲ

೧೪. ಕೂಲಿಗಾಗಿ ದೂರದ ಸ್ಥಳಕ್ಕೆ ಹೋಗಲು ಗ್ರಾಮದಿಂದ ಗ್ರಾಮಕ್ಕೆ ಭೂಮಾಲಿಕ ವಾಹನ ಸೌಲಭ್ಯವನ್ನು ಕಲ್ಪಿಸುತ್ತಾರೇಯೆ ನೀವೇ ಅಂತಹ ಕೆಲಸವನ್ನು ಮಾಡಿಕೊಂಡಿದ್ದೀರಾ ?

ಅ.ಹೌದು ಬ.ಇಲ್ಲ

೧೫. ನೀವು ಕೂಲಿಕಾರರು ಸೇರಿಕೊಂಡು ಸಂಘಟನೆ ಗುಂಪನ್ನು ಮಾಡಿಕೊಂಡಿದ್ದಿರಾ ?

ಅ.ಹೌದು ಬ.ಇಲ್ಲ

೧೬. ನೀವು ಮಹಿಳಾ ಸ್ವ ಸಹಾಯ ಗುಂಪುಗಳಲ್ಲಿ ಭಾಗಿಯಾಗಿರುವಿರಾ ?

ಅ.ಹೌದು ಬ.ಇಲ್ಲ

೧೭. ಕೂಲಿ ಕೆಲಸಕ್ಕೆ ನಿಮ್ಮ ಮಕ್ಕಳನ್ನು ಜೊತೆಗೆ ಕರೆದುಕೊಂಡು ಹೋಗುತ್ತೀರಾ ಶಾಲೆ ಬಿಡಿಸಿಕೊಂಡು?

ಅ.ಹೌದು ಬ.ಇಲ್ಲ

೧೮. ಆಧುನಿಕ ಯಂತ್ರೋಪಕರಣಗಳ ಬಳಕೆಯಿಂದ ನಿಮ್ಮ ಕೆಲಸದ ಮೇಲೆ ಪರಿಣಾಮ ಬಿರಿದಿಯೆ?

ಅ.ಹೌದು ಬ.ಇಲ್ಲ

೧೯. ಕೃಷಿ ಸಂಬಂಧಿತ ಕೆಲಸದ ವೇತನದ ವೇತನದಲ್ಲಿ ವ್ಯತ್ಯಾಸವಿದೆಯಾ ?

ಅ.ಹೌದು ಬ.ಇಲ್ಲ

೨೦. ಕೂಲಿ ಮಾಡುವ ಸ್ಥಳದಲ್ಲಿ ವಿಶ್ರಾಂತಿಗಾಗಿ ತಾತ್ಕಾಲಿಕ ಟೆಂಟನ್ನು ಭೂಮಾಲೀಕ ನಿರ್ಮಿಸಿದ್ದಾರೆಯೇ?

ಅ.ಹೌದು ಬ.ಇಲ್ಲ

೨೧. ನಿಮ್ಮ ಹೆಸರಿನಲ್ಲಿ ಸ್ವಂತ ಆಸ್ತಿಯನ್ನು ಹೊಂದಿದ್ದಿರಾ ?

ಅ.ಹೌದು ಬ.ಇಲ್ಲ

೨೨. ನಿಮ್ಮ ಮನೆಯಲ್ಲಿ ಎಷ್ಟು ಮಂದಿ ಮಹಿಳೆಯರು ದುಡಿಯುತ್ತಾರೆ ? ............................

೨೩. ನಿಮ್ಮ ಗಂಡ ಯಜಮಾನ ಕೆಲಸಕ್ಕೆ ಹೋಗುತ್ತಾರೆಯೇ ? ......................................

೨೪. ಕೂಲಿ ಕೆಲಸಕ್ಕಾಗಿ ಬೇರೆ ಕಡೆ ಒಲಸೆ ಹೋಗುವಿರಾ ? ..................................

೨೫. ಒಲಸೆ ಹೋದರೂ ಎಷ್ಟು ತಿಂಗಳು ಹೋಗುತ್ತೀರಿ ? ....................................

೨೬. ಭೂ ಮಾಲೀಕರು ಅಲ್ಲಿ ನಿಮಗೆ ಸಕಲ ವ್ಯವಸ್ಥೆಯನ್ನು ಒದಗಿಸುವವರೇ ?

..................................

ಮನೆ, ನೀರು ಇತ್ಯಾದಿ ಮೂಲಭೂತ ಸೌಲಭ್ಯ

೨೭. ನಿಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ನೀಡುತ್ತಿದ್ದಿರಾ ?

ಗಂಡು ...................... ಹೆಣ್ಣು ......................

೨೮. ನೀವು ಬ್ಯಾಂಕ್ ಖಾತೆಯನ್ನು ಹೊಂದಿದ್ದಿರಾ ?

ಅ.ಹೌದು ಬ.ಇಲ್ಲ

೨೯. ನಿಮ್ಮ ಮತ್ತು ಯಜಮಾನರ ಕೂಲಿಯಲ್ಲಿ ಕುಟುಂಬವು ನಡೆಯುತ್ತಿದೇಯೇ

ಅಥವಾ ನಿಮ್ಮ ಒಬ್ಬರ ಕೂಲಿಯಿಂದ ನಡೆಯುತ್ತಿದೇಯೆ ?

ಅ.ಹೌದು ಬ.ಇಲ್ಲ

೩೦. ನಿಮ್ಮ ಮನೆಯವರು ದುಶ್ಚಟಗಳಿಗೆ ಬಲೆಯಾಗಿದ್ದಾರೇಯೇ ?

ಅ.ಹೌದು ಬ.ಇಲ್ಲ

೩೧. ನಿಮ್ಮ ಹೆಸರಿನಲ್ಲಿ ಸ್ವಂತ ಮನೆಯನ್ನು ಹೊಂದಿದ್ದಿರಾ ?

ಅ.ಹೌದು ಬ.ಇಲ್ಲ

## ೨. ಗ್ರಂಥಸೂಚಿ


೦೧. ಇಂದಿರಾ ಆರ್, ೨೦೦೨, ಮಹಿಳಾ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

೦೨. ಇಂದಿರಾ ಆರ್, ೧೯೯೫, ಸ್ತ್ರೀವಾದಿ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ, ಮೈಸೂರು.

೦೩. ಒಡೆಯರ ಡಿ ಹೆಗಡೆ, ೨೦೦೩, ಮಹಿಳಾ ಅಧ್ಯಯನ ಆರ್ಥಿಕ ನೆಲೆಗಳು ಮತ್ತು ಆಯಾಮಗಳು, ಮಾನವಭಿವೃದ್ಧಿ ಅಧ್ಯಯನಗಳ ಕೇಂದ್ರ, ಮೈಸೂರು.

೦೪. ಕಮಲಾ ಹಂಪನಾ, ಬೊಗಸೆ ಮಹಿಳೆ ಸುತ್ತಮುತ್ತ, ಸಿ.ವಿ.ಜಿ, ಪಬ್ಲಿಕೇಷನ್ಸ್, ಬೆಂಗಳೂರು.

೦೫. ಕವಿತಾ ರೈ, ೨೦೦೭, ಅರಿವಿನ ನಡೆ, ಲೋಹಿಯಾ ಪ್ರಕಾಶನ, ಕಪ್ಪಗಲ್ಲು ರೋಡ್, ಬಳ್ಳಾರಿ.

೦೬. ಕುಲಕರ್ಣಿ ಆರ್.ಜಿ ಅನು, ೨೦೦೮, ಸ್ತ್ರೀ ಶಕ್ತಿ, ಮೂಲ ಶ್ರೀ ಅರವಿಂದರು ಮತ್ತು ಶ್ರೀಮಾತಿ ದ.ರಾ.ಬೇಂದ್ರೆ, ಸ್ನೇಹಮಹಲ್, ಬೆಂಗಳೂರು.

೦೭. ಗಾಯತ್ರಿ ನಾವಡ, ೨೦೦೩, ಮಹಿಳಾ ಸಂಕಥನ, ಕನ್ನಡ ಪುಸ್ತಕ ಪ್ರಾಧಿಕಾರ.

೦೮. ಗಾಯತ್ರಿ ಎನ್. ೧೯೯೧, ಮಹಿಳೆ ಬಿಡುಗಡೆಯ ಹಾದಿಯಲ್ಲಿ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

೦೯. ಚಂದ್ರಶೇಖರ ಟಿ.ಆರ್, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಚೌಕೇಗೌಡ ಎಂ.ಕೆ, ಶಿವಚಿತ್ತಪ್ಪ, ೨೦೦೫, ಮಹಿಳೆ ಮತ್ತು ಅಭಿವೃದ್ಧಿ, ಚಿನ್ಮಯ ಪ್ರಕಾಶನ, ಮೈಸೂರು.

೧೧. ಜ್ಯೋತ್ಸ್ನಾ ಕಾಮತ್, ೨೦೦೧, ಮಹಿಳೆ ಅಂದು ಇಂದು, ಪ್ರೇಮ ಸಾಯಿ ಪ್ರಕಾಶನ, ಬೆಂಗಳೂರು.

೧೨. ಜ್ಯೋತಿ ಶಶಿಕುಮಾರ, ೨೦೦೭, ಮಹಿಳಾ ಸಮಾಜಿಕತೆ, ಮಹಿಳಾ ಅಧ್ಯಯನ ಕೇಂದ್ರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೩. ನಾರಾಯಣ ಎಂ, ೨೦೦೪, ಸಾಮಾಜಿಕ ಸಂಸ್ಥೆಗಳು ಮತ್ತು ಸಾಮಾಜಿಕ ಬದಲಾವಣೆ, ಲಕ್ಷ್ಮೀ ಪ್ರಿಂಟರ್ಸ್ ಮತ್ತು ಪಬ್ಲಿಕೇಷನ್ಸ್, ಮೈಸೂರು.

೧೪. ನೇಮಿಚಂದ್ರ, ೨೦೦೧, ಮಹಿಳಾ ಅಧ್ಯಯನ, ಅಂಕಿತ ಪ್ರಕಾಶನ, ಬೆಂಗಳೂರು.

೧೫. ನಾರಾಯಣ ವಿಶ್ವ, ೨೦೦೭, ಸಾಮಾಜಿಕ ಸಮಸ್ಯೆಗಳು, ಚೇತನ ಬುಕ್ ಹೌಸ್, ಮೈಸೂರು.

೧೬. ನೇಮಿಚಂದ್ರ ಸಂ, ೨೦೦೫, ಮಹಿಳಾ ಲೋಕ, ನವಕರ್ನಾಟಕ ಪ್ರಕಾಶನ, ಮೈಸೂರು.

೩೮. ಡಾ.ಎಚ್.ಎಸ್.ಶ್ರೀಮತಿ, ೨೦೦೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ಪೂರ್ವಚಾರ, ೨೦೦೦, ಭಾರತೀಯ ಸಮಾಜ ಮತ್ತು ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೧೮. ಪ್ರೇಮಾಸಿರ್ಸಿ, ೨೦೦೬, ಮಹಿಳೆ, ಮಹಿಳೆ ಸಮಾಜ ಸವಾಲುಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೧೯. ಭಗವಾನ್, ೨೦೦೬, ಡಾ.ಡಿ.ಆರ್.ಪ್ರಪುಲ್ಲಚಂದ್ರರ ಸಮಗ್ರ ಸಾಧನೆ, ಕೃಷಿ ಸಂಪದ, ಲಕ್ಷ್ಮಿಪುರ ಹೊಸಹಳ್ಳಿ, ಶಿವಮೊಗ್ಗ.

೨೦. ಮುಳಗುಂದ ಚ.ವಿ, ೧೯೮೬, ಆಧುನಿಕ ಮಹಿಳೆ ಮತ್ತು ಸಮಾಜ, ಮಾತಶ್ರೀ ಪ್ರಕಾಶನ, ಮುದ್ದೇಬಿಹಾಳ.

೨೧. ಮೌಳಿ ಎಚ್.ವಿ, ೧೯೮೯, ಆಧುನಿಕ ಸಮಾಜ ಹಾಗೂ ಕೌಟುಂಬಿಕ ಜೀವನದ ಬದಲಾವಣೆಗಳು ಆರು ಉಪನ್ಯಾಸಗಳು, ಕನ್ನಡ ವಿಶ್ವಿದ್ಯಾಲಯ, ಧಾರವಾಡ

೨೨. ಮೂರ್ತೆಶ್ವರಯ್ಯ, ಬೆ.ಕಾ, ೨೦೦೭, ಮಹಿಳಾ ಸಮಾಜಿಕತೆ, ಸ್ವಪ್ನ ಬುಕ್ ಹೌಸ್, ಬೆಂಗಳೂರು

೨೩. ಮಧುಕೇಶ್ವರ್ ಅನುವಾದ ಹೇಮಲತಾ ಎಚ್.ಎಂ, ಭಾರತದ ಮಹಿಳೆಯರ ಬದುಕು ಮತ್ತು ಹೋರಾಟ ಮುದ್ರಣ ಶ್ರೀಶಕ್ತಿ ಎಲೆಕ್ಟ್ರಿಕ್ ಪ್ರೆಸ್, ಜಯನಗರ, ಮೈಸೂರು.

೨೪. ಮುಳುಗುಂದ ಚ.ವಿ ಸಂ, ೧೯೮೬, ಆಧುನಿಕ ಮಹಿಳೆ ಮತ್ತು ಸಮಾಜ, ಎಚ್.ವಿ.ನಾಗೇಶ ಮಾತೋಶ್ರೀ ಪ್ರಕಾಶನ, ಮುದ್ದೇಬಿಹಾಳ.

೨೫. ರಾಜಶೇಖರ್ ಎಸ್, ೨೦೦೦, ಸಾಮಾಜಿಕ ಸಮಸ್ಯೆಗಳು, ಭ್ರಮರ ಪ್ರಕಾಶನ, ಶಿವಮೊಗ್ಗ.

೨೬. ವಿಜಯ ಸಬರದ, ೨೦೦೫, ಮಹಿಳೆ ಶೋಷಣೆ ಸವಾಲುಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೨೭. ವೆಂಕೋಬರಾವ್, ೨೦೦೨, ನ್ಯಾಯಕ್ಕಾಗಿ ಮಹಿಳೆಯರ ಹೋರಾಟ

೨೮. ವೆಂಕಟರಾವ್ ಡಿ, ೧೯೮೫, ಕೃಷಿ ಬೆಳವಣಿಗೆ, ವಿದ್ಯಾನಿಧಿ ಪ್ರಕಾಶನ, ಗದಗ.

೨೯. ವಂದನಾಶಿವ, ಕನ್ನಡಕ್ಕೆ ಮಾಧವ ಐತಾಳ್, ಬತ್ತದ ಚಿಲುಮೆ, ಪ್ರಕಾಶಕರು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೦. ವಿಜಯಶ್ರೀ ಸಬರದ ಸಂ, ೨೦೦೫, ಮಹಿಳೆ ಶೋಷಣೆ ಸವಾಲುಗಳು, ಪ್ರಸಾರಾಂಗ, ಗುಲಬರ್ಗ ವಿಶ್ವವಿದ್ಯಾಲಯ, ಗುಲಬರ್ಗ.

೩೧. ವೆಂಕಟಲಕ್ಷ್ಮೀ ಬಿ.ಎಸ್, ೨೦೦೦, ಬದುಕು ಮತ್ತು ಬವಣೆ, ಎನ್.ಟಿ.ಶಾಂ ಪ್ರಕಾಶನ, ಮಂಗಳೂರು.

೩೨. ಡಾ.ರಾಜೇಂದ್ರ ಚೆನ್ನಿ, ೨೦೦೪, ಜಾಗತೀಕರಣ ಒಂದು ಸಮಗ್ರ ಮಂಥನ, ಕನ್ನಡ ಸಾಹಿತ್ಯ ಅಕಾಡೆಮಿ. ಬೆಂಗಳೂರು.

೩೩. ಡಾ.ವಿನಯಾ, ಹೊಸತು, ಸೆಪ್ಟಂಬರ್, ೨೦೦೫

೩೪. ಜಿ.ಶರಶ್ಚಂದ್ರ ರಾನಡೆ, ಕೃಷಿ ಮಾರಾಟ ಸಂಪದ, ಪ್ರಕಾಶಕರು ನಂದಿ ಪ್ರೊಸೆಸ್, ಬೆಂಗಳೂರು.

೩೫. ಶ್ರೀಮತಿ ಎಚ್.ಎಸ್, ೨೦೦೩, ಸ್ತ್ರೀವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೩೬. ಶ್ರೀಮತಿ ಎಚ್.ಎಸ್. (ಅನು), ಸಿಮೊನ್ ದ ಬೊವ್ (ಮೂಲ), ೨೦೦೭, ದ ಸೆಕೆಂಡ್ ಸೆಕ್ಸ್,

೩೭. ಶ್ರೀಮತಿ ಎಚ್.ಎಸ್, ಮತ್ತು ಇತರರು (ಸಂ), ೨೦೦೭, ಮಹಿಳಾ ಆರ್ಥಿಕತೆ, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ಶ್ರೀಮತಿ ಎಚ್.ಎಸ್, ಚಹರೆ, ಇಳಾ ಪ್ರಕಾಶನ, ಬೆಂಗಳೂರು.

೩೯. ಶಮಂತ, ೨೦೦೧, ದುಡಿತ ಮಿಡಿತ, ಆಯ್.ಬಿ.ಎಲ್.ಪ್ರಕಾಶನ, ಬೆಂಗಳೂರು.

೪೦. ಸಮತಾ ಬಿ, ದೇಶಮಾನೆ, ೨೦೦೩, ಸಮಾಜಶಾಸ್ತ್ರ ಮತ್ತು ಮಹಿಳೆ ಲಕ್ಷ್ಮಿ ಪ್ರಿಂಟರ್ಸ್ ಅಂಡ್ ಪಬ್ಲಿಕೇಷನ್ಸ್ ಹೌಸ್, ಮೈಸೂರು.

೪೧. ಸುನಂದಮ್ಮ ಆರ್, ೨೦೦೫, ಮಹಿಳಾ ಸಂಸ್ಕೃತಿ, ಸಮತಾ ಅಧ್ಯಯನ ಕೇಂದ್ರ, ಮೈಸೂರು.

೪೨. ಸರೋಜಾ ಕೆ, ೨೦೦೭, ಮಹಿಳಾ ಮತ್ತು ಆರೋಗ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೩. ಶ್ರೀಮತಿ ಎಚ್.ಎಸ್, ಮತ್ತು ಇತರರು (ಸಂ), ೨೦೦೭, ಮಹಿಳೆ, ದುಡಿಮೆ ಮತ್ತು ಬಿಡುವು ಮಹಿಳಾ ಅಧ್ಯಯನಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೪. ಶೈಲಜ ಹಿರೇಮಠ, ೨೦೦೬, ಮಹಿಳಾ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೪೫. ಹೇಮಲತಾ ಎಚ್.ಎಂ, ೨೦೦೪, ಮಹಿಳಾ ಅಧ್ಯಯನ-೨ ಡಿ.ವಿ.ಕೆ ಮೂರ್ತಿ ಪ್ರಕಾಶಕರು, ಮೈಸೂರು

೪೬. ಹೇಮಲತಾ ಎಚ್.ಎಂ, ೨೦೦೪, ಮಹಿಳಾ ಅಧ್ಯಯನ-೦೧, ಡಿ.ವಿ.ಕೆ ಮೂರ್ತಿ ಪ್ರಕಾಶಕರು, ಮೈಸೂರು.

೪೭. ಹೇಮಲತಾ ಎಚ್.ಎಂ, ೨೦೦೪, ಮಹಿಳಾ ಅಧ್ಯಯನ-೦೩, ಡಿ.ವಿ.ಕೆ ಮೂರ್ತಿ ಪ್ರಕಾಶಕರು, ಮೈಸೂರು.

೪೮. ಹೇಮಲತಾ ಮಹಿಷಿ, ೧೯೯೯, ಇಪ್ಪತ್ತೊಂದನೆಯ ಶತಮಾನದ ಮಹಿಳೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

## ೩. ವಕ್ತೃವಿವರ

| ಕ್ರ.ಸಂ | ಹೆಸರು | ವಯಸ್ಸು | ಜಾತಿ | ಊರು | ಶಿಕ್ಷಣ |
|---|---|---|---|---|---|
| ೦೧. | ಯಲ್ಲಮ್ಮ | ೩೦ | ಮಾದಿಗ | ಗಣಜಲಿ | ಅನಕ್ಷರಸ್ಥೆ |
| ೦೨. | ಸುಕಮಿಯಮ್ಮ | ೩೫ | ನಾಯಕ | ಗಬ್ಬೂರು | ಅನಕ್ಷರಸ್ಥೆ |
| ೦೩. | ದುರಗಮ್ಮ | ೨೫ | ಮಾದಿಗ | ದೇವತಗಲ್ | ಅನಕ್ಷರಸ್ಥೆ |
| ೦೪. | ಶಿವಮ್ಮ | ೨೮ | ಮಾದಿಗ | ದೇವತಗಲ್ | ಅನಕ್ಷರಸ್ಥೆ |
| ೦೫. | ಶಿವವ್ವ | ೨೦ | ಮಾದಿಗ | ದೇವತಗಲ್ | ಅನಕ್ಷರಸ್ಥೆ |
| ೦೬. | ಕರಿಯಮ್ಮ | ೨೭ | ಮಾದಿಗ | ಜಾಲಹಳ್ಳಿ | ಅಕ್ಷರಸ್ಥೆ |
| ೦೭. | ನಿಂಗವ್ವ | ೩೦ | ನಾಯಕ | ಜಾಲಹಳ್ಳಿ | ಅನಕ್ಷರಸ್ಥೆ |
| ೦೮. | ಜಿಂದಮ್ಮ | ೨೨ | ಮುಸ್ಲಿಂ | ಜಾಲಹಳ್ಳಿ | ಅನಕ್ಷರಸ್ಥೆ |
| ೦೯. | ಶಿವಮ್ಮ | ೪೦ | ಲಿಂಗಾಯತ | ಜಾಲಹಳ್ಳಿ | ಅನಕ್ಷರಸ್ಥೆ |
| ೧೦. | ಆಸಿನ್‌ಬೀ | ೫೦ | ಪಿಂಜಾರ್ ಮುಸ್ಲಿಂ | ಜಾಲಹಳ್ಳಿ | ಅನಕ್ಷರಸ್ಥೆ |
| ೧೧. | ಮಹಿಬೂಬಿ | ೩೦ | ಮುಸ್ಲಿಂ | ಗಬ್ಬೂರು | ಅನಕ್ಷರಸ್ಥೆ |
| ೧೨. | ಖಾಸಿಂ ಬೀ | ೪೫ | ಲದಾಪ್ ಮುಸ್ಲಿಂ | ಗಬ್ಬೂರು | ಅನಕ್ಷರಸ್ಥೆ |
| ೧೩. | ಹುಸನಿ ಬೀ | ೪೦ | ಲದಾಪ್ ಮುಸ್ಲಿಂ | ಗಬ್ಬೂರು | ಅನಕ್ಷರಸ್ಥೆ |
| ೧೪. | ಹನುಮವ್ವ | ೩೫ | ಕುರಬರು | ಗಬ್ಬೂರು | ಅನಕ್ಷರಸ್ಥೆ |
| ೧೫. | ಮೌಲಮ್ಮ | ೪೨ | ಕುರಬರು | ಗಬ್ಬೂರು | ಅನಕ್ಷರಸ್ಥೆ |
| ೧೬. | ಕೆಂಚವ್ವ | ೩೦ | ಲಿಂಗಾಯತ | ಗಬ್ಬೂರು | ಅನಕ್ಷರಸ್ಥೆ |
| ೧೭. | ಜಾನಿಕಮ್ಮ | ೨೨ | ಲಿಂಗಾಯತ | ಗಬ್ಬೂರು | ಅಕ್ಷರಸ್ಥೆ |
| ೧೮. | ರಂಗವ್ವ | ೩೦ | ಲಿಂಗಾಯತ | ಗಬ್ಬೂರು | ಅನಕ್ಷರಸ್ಥೆ |
| ೧೯. | ಕವಿತಾ | ೨೪ | ನಾಯಕ | ಮಸರಕಲ್ | ಅನಕ್ಷರಸ್ಥೆ |
| ೨೦. | ಚಂದ್ರಕಲಾರಾಠೋಡ | ೪೫ | ಲಂಬಾಣಿ | ಮಸರಕಲ್ | ಅನಕ್ಷರಸ್ಥೆ |

[illegible]

| [illegible] | [illegible] | [illegible] | | [illegible] | |
|---|---|---|---|---|---|
| [illegible] | [illegible] | [illegible] | [illegible] | [illegible] | |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |
| [illegible] | [illegible] | [illegible] | [illegible] | [illegible] | [illegible] |

| | | | | | |
|---|---|---|---|---|---|
| ೨೧. | ನೀಲಮ್ಮ | ೨೮ | ಲಂಬಾಣಿ | ಮಸರಕಲ್ | ಅನಕ್ಷರಸ್ಥೆ |
| ೨೨. | ಶರಣಮ್ಮ | ೩೦ | ನಾಯಕ | ಮಸರಕಲ್ | ಅನಕ್ಷರಸ್ಥೆ |
| ೨೩. | ಬಾಗೂರು ಮರಿಯಮ್ಮ | ೪೦ | ನಾಯಕ | ಮಸರಕಲ್ | ಅನಕ್ಷರಸ್ಥೆ |
| ೨೪. | ಮೀನಾಕ್ಷಮ್ಮ | ೨೫ | ನಾಯಕ | ಮಸರಕಲ್ | ಅನಕ್ಷರಸ್ಥೆ |
| ೨೫. | ನಾಗರತ್ನಮ್ಮ | ೩೫ | ಮಾದಿಗ | ಮಸರಕಲ್ | ಅನಕ್ಷರಸ್ಥೆ |
| ೨೬. | ಪಾರ್ವತಿ | ೨೮ | ನಾಯಕ | ಮಸರಕಲ್ | ಅಕ್ಷರಸ್ಥೆ |
| ೨೭. | ಕಾವೇರಿ | ೩೫ | ಮಾದಿಗ | ಮಸರಕಲ್ | ಅನಕ್ಷರಸ್ಥೆ |
| ೨೮. | ರೇಣುಕಾ | ೨೯ | ಬೋವಿ | ಅರಕೇರಾ | ಅನಕ್ಷರಸ್ಥೆ |
| ೨೯. | ಸುಂಕಲಮ್ಮ | ೩೫ | ಬೋವಿ | ಅರಕೇರಾ | ಅನಕ್ಷರಸ್ಥೆ |
| ೩೦. | ಲಕ್ಷ್ಮಮವ್ವ | ೨೫ | ನಾಯಕ | ಅರಕೇರಾ | ಅನಕ್ಷರಸ್ಥೆ |
| ೩೧. | ಕರಿಯಮ್ಮ | ೩೦ | ನಾಯಕ | ಅರಕೇರಾ | ಅನಕ್ಷರಸ್ಥೆ |
| ೩೨. | ಚೆನ್ನವ್ವ | ೪೫ | ಮಾದಿಗ | ಅರಕೇರಾ | ಅನಕ್ಷರಸ್ಥೆ |
| ೩೩. | ಯಲ್ಲಮ್ಮ | ೩೦ | ಮಾದಿಗ | ಅರಕೇರಾ | ಅನಕ್ಷರಸ್ಥೆ |
| ೩೪. | ಮೋನಮ್ಮ | ೩೦ | ಮಾದಿಗ | ಅರಕೇರಾ | ಅನಕ್ಷರಸ್ಥೆ |
| ೩೫. | ರಾಮವ್ವ | ೫೦ | ಮಾದಿಗ | ಅರಕೇರಾ | ಅನಕ್ಷರಸ್ಥೆ |
| ೩೬. | ಸುಶೀಲಮ್ಮ | ೨೫ | ಲಿಂಗಾಯತ | ಅರಕೇರಾ | ಅನಕ್ಷರಸ್ಥೆ |
| ೩೭. | ಅಮರಮ್ಮ | ೪೨ | ಲಿಂಗಾಯತ | ಅರಕೇರಾ | ಅನಕ್ಷರಸ್ಥೆ |
| ೩೮. | ವಿಜಯಲಕ್ಷ್ಮೀ | ೨೮ | ನಾಯಕ | ದೇವದುರ್ಗ | ಅಕ್ಷರಸ್ಥೆ |
| ೩೯. | ರಂಗಮ್ಮಮಸಾಳ | ೩೫ | ಮಾದಿಗ | ದೇವದುರ್ಗ | ಅನಕ್ಷರಸ್ಥೆ |
| ೪೦. | ಅಂಬಲವ್ವ | ೩೦ | ಮಾದಿಗ | ದೇವದುರ್ಗ | ಅನಕ್ಷರಸ್ಥೆ |
| ೪೧. | ಸುಜತಾ | ೨೨ | ಮಾದಿಗ | ದೇವದುರ್ಗ | ಅಕ್ಷರಸ್ಥೆ |
| ೪೨. | ಮೀನಾಕ್ಷಿ | ೨೦ | ನಾಯಕ | ದೇವದುರ್ಗ | ಅನಕ್ಷರಸ್ಥೆ |
| ೪೩. | ರೇವಮ್ಮ | ೩೫ | ಚಲವಾದಿ | ದೇವದುರ್ಗ | ಅನಕ್ಷರಸ್ಥೆ |
| ೪೪. | ಕಾಂತಮ್ಮ | ೩೨ | ಚಲವಾದಿ | ದೇವದುರ್ಗ | ಅನಕ್ಷರಸ್ಥೆ |

| | | | | | |
|---|---|---|---|---|---|
| ೪೫. | ರುಕ್ಕಮ್ಮ | ೨೭ | ಚಲವಾದಿ | ದೇವದುರ್ಗ | ಅನಕ್ಷರಸ್ಥೆ |
| ೪೬. | ಪಾತೀಮ | ೨೮ | ಮುಸ್ಲಿಂ | ದೇವದುರ್ಗ | ಅನಕ್ಷರಸ್ಥೆ |
| ೪೭. | ನಾಜಿಯಾಬೇಗಂ | ೩೫ | ಮುಸ್ಲಿಂ | ದೇವದುರ್ಗ | ಅನಕ್ಷರಸ್ಥೆ |
| ೪೮. | ರೇಷ್ಮಾಬೇಗಂ | ೨೭ | ಮುಸ್ಲಿಂ | ದೇವದುರ್ಗ | ಅನಕ್ಷರಸ್ಥೆ |
| ೪೯. | ಖಾಸಿಂ ಬೀ | ೪೫ | ಮುಸ್ಲಿಂ | ದೇವದುರ್ಗ | ಅಕ್ಷರಸ್ಥೆ |
| ೫೦. | ಮಹಿಬೂಬೀ | ೩೫ | ಮುಸ್ಲಿಂ | ದೇವದುರ್ಗ | ಅನಕ್ಷರಸ್ಥೆ |

## ೪. ಛಾಯಾಚಿತ್ರಗಳು





# ಛಾಯಚಿತ್ರಗಳು



ಎಡೆಕುಂಟೆ ಹೊಡೆಯುವುದರಲ್ಲಿ ನಿರತರಾದ ಮಹಿಳೆಯರು



ಮಳೆ ಇಲ್ಲದೆ ಬರಡಾದ ಭೂಮಿ ಮಸರಕಲ್ಲುಗ್ರಾಮ



ಭತ್ತನಾಟಿ ಮಾಡುವಲ್ಲಿನಿರತರಾದ ಮಹಿಳೆಯರು



ಭತ್ತದ ಸಸಿಗಳನ್ನು ಕೀಳುವಲ್ಲಿ ನಿರತರಾದ ಮಹಿಳೆಯರು



ಕೆಲಸದ ನಂತರ ವಿಶ್ರಾಂತಿಯಲ್ಲಿ ತೊಡಗಿರುವ ಮಹಿಳೆಯರು



ಕೂಲಿ ಕೆಲಸಕ್ಕಾಗಿ ವಲಸೆ ಬಂದವರ ವಾಸದ ನೆಲೆ



ಕೂಲಿ ಕೆಲಸಕ್ಕಾಗಿ ಬೇರೆ ಊರಿಗೆ ತೆರಳುತ್ತಿರುವ ಮಹಿಳೆಯರು



ಕೂಲಿ ಕೆಲಸಕ್ಕೆ ತೆರಳುತ್ತಿರುವ ಮಹಿಳೆಯರು




ಬಿತ್ತನೆಯ ಕೆಲಸದಲ್ಲಿ ನಿರತರಾದ ಮಹಿಳೆಯರು



ಸ್ವಸಹಾಯ ಗುಂಪಿನಲ್ಲಿರುವ ಮಹಿಳಾ ಕೂಲಿಕಾರರು



ಮನೆ ಕಟ್ಟಾವಲ್ಲಿ ನಿರತರಾದ ಮಹಿಳಾ ಕೂಲಿಕಾರರು



ಇಟ್ಟಿಗೆ ಭಟ್ಟಿಯ ಕೆಲಸದಲ್ಲಿ ನಿರತರಾದ ಮಹಿಳೇಯರು



ಇಟ್ಟಿಗೆ ಕೆಲಸದಲ್ಲಿ ನಿರತರಾದ ಮಹಿಳೆಯರು



ನಾರಾಯಣಪುರದ ಕಾಲುವೆಯನ್ನು ಸ್ವಚ್ಛಗೊಳಿಸುತ್ತಿರುವ ಮಹಿಳೆಯರು



ಭತ್ತದ ಸಸಿಗಳನ್ನು ಕೀಳುವಲ್ಲಿ ನಿರತರಾದ ಮಹಿಳೆಯರು



ಹೊಲದಲ್ಲಿ ಕಾಲಿ ಆರಿಸುತ್ತಿರುವ ಮಹಿಳೆಯರು